

ಆಂತ್ವಾನ್ ದ ಸೇಂತ್ ಎಕ್ಸೂಪರಿ (1900-1944) ಬರಹಗಾರನಾಗಿರುವಂತೆಯೇ ಅತ್ಯುತ್ತಮ ಪೈಲಟ್ ಆಗಿದ್ದನು; ಸಾಹಸ ಅಪಾಯವನ್ನು ಕವಿದೃಷ್ಟಿಯಲ್ಲಿ ಕಂಡವನು. ಯುದ್ಧದ ಕ್ಯಾಂಪುಗಳಲ್ಲಿ ವಾರಗಟ್ಟಲೆ ತೀವ್ರ ಒಂಟಿತನ ಕಾಡಿದಾಗ ಪೀಪಾಯಿಗಳ ಮೇಲೆ ಹಲಗೆಯನ್ನಿರಿಸಿ ಮೇಜನ್ನಾಗಿಸಿಕೊಂಡು ಹಲವಾರು ಕಾದಂಬರಿಗಳನ್ನು ರಚಿಸಿದ. ಅಂಥವುಗಳಲ್ಲಿ 'ಪುಟ್ಟರಾಜಕುಮಾರ' ಕೃತಿಯೂ ಒಂದು. 1943ರಲ್ಲಿ ಪ್ರಕಟವಾದ ಈ ಕೃತಿ ವಿಶ್ವದ 125 ಭಾಷೆಗಳಿಗೆ ಅನುವಾದಗೊಂಡಿದೆ. ಪ್ರತಿ ವರ್ಷ 10 ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗುತ್ತಿವೆ. ಮಕ್ಕಳ ಮೂಲಕ ದೊಡ್ಡವರ ಸಂವೇದನಾರಹಿತ ಬರೀ ಅಂಕಿಸಂಖ್ಯೆಗಳ ಜಗತ್ತನ್ನು ಕಾಣಲು ಪ್ರಯತ್ನಿಸುವ ಈ ಕೃತಿಯಲ್ಲಿ ಕೇಂದ್ರಿತವಾಗಿರುವ ಹಾವು, ಕೆಡುಕು, ಹತಾಶೆಯ ಪ್ರತಿಮೆಗಳು ಓದಿದ ನಂತರವೂ ಕಾಡುತ್ತಿರುತ್ತವೆ.

ಬಾಲು ಅವರ ಆಸಕ್ತಿಯ ವಲಯಗಳು ಜೀವವೈವಿಧ್ಯದಷ್ಟೇ ವಿಸ್ತಾರವಾದವು. ವಿಜ್ಞಾನದಿಂದ ಮೊದಲ್ಗೊಂಡು ಸಾಹಿತ್ಯ, ಸೂಫಿ, ಝೆನ್ ತತ್ವದರ್ಶನಗಳವರೆಗೆ ಹೊಕ್ಕಾಡಿದರೂ ಅಂತಿಮವಾಗಿ ಅವರ ಮನಸ್ಸು ನೆಲೆಗೊಳ್ಳುವುದು ಜೀವಕಾರುಣ್ಯದಲ್ಲೇ. ಕಾಲೂರಿದ ಲೌಕಿಕ ಬದುಕಿನ ಬೇರುಗಳಲ್ಲೇ ಅಲೌಕಿಕ ಗುಂಗು ಹೀರಬಲ್ಲರಾದರೂ ಮಣ್ಣಿನ ತಾಯಿ ಗುಣದಿಂದ ಅವರೆಂದೂ ದೂರವಾಗಿಲ್ಲ. ಚಿಂತನೆಗಳ ಶ್ರೇಷ್ಠತೆಗೆ ಸಹಜವಾಗಿ ತುಡಿದರೂ, ವ್ಯಸನಿಯಲ್ಲ. ಹಾಗಾಗಿಯೇ ಅವರ ಲೇಖನ ಅಭಿವ್ಯಕ್ತಿ ಸರಳತೆಯಲ್ಲೇ ಸೌಂದರ್ಯವನ್ನು ಹಿಡಿದ ಬಾಲ್ಯ ಸಂಭ್ರಮದ್ದು! ಅಭೌತದ ಅನಂತ ನಿಗೂಢತೆ, ನಿಸರ್ಗದ ನಿಷ್ಠುರ ಲಯಗಳು, ಮನುಷ್ಯರಾಳದ ಇನ್‌ಸ್ಟಿಂಕ್ಟ್‌ಗಳನ್ನು ಹಾಗೂ ಮನೋವಿಜ್ಞಾನದ ಅಜ್ಞಾತ ಪದರಗಳನ್ನು ಬಿಚ್ಚಿ, ತಡವಿ ನೋಡುವ ಅವರ ಅನನ್ಯ ಪ್ರಯೋಗಗಳಿಂದಾಗಿ ಬಾಲು ಬರವಣಿಗೆಗೆ ಸಾಹಿತ್ಯೇತರವಾದ ಕೌತುಕದಾಯಕಾಯಾಮಗಳೂ ದಕ್ಕುತ್ತವೆ. ಇಂತಹ ಕಾರಣಗಳಿಂದಾಗಿಯೇ ನಾನು ಬಾಲು ಬರವಣಿಗೆಯ ಮೊದಲ ಸಾಲಿನ ಓದುಗನಾಗಿದ್ದೇನೆ.

ಲಕ್ಷ್ಮೀಪತಿ ಕೋಲಾರ

10

Scanned with CamScanner



Scanned with CamScanner

ಆಂತ್ವಾನ್ ದ ಸೇಂತ್ ಎಕ್ಸೂಪರಿ

ಪುಟ್ಟ ರಾಜಕುಮಾರ

ಕನ್ನಡಕ್ಕೆ

ಡಾ॥ ಜೆ. ಬಾಲಕೃಷ್ಣ
balukolar@gmail.com

PUTTA RAJAKUMARA - A Kannada translation of Antoine De Saint Exupery's LITTLE PRINCE: Translated from englilsh by Dr. J.Balakrishna, Asst. Professor, Department of Kannada Studies, University of Agricultural Sciences, Hebbal, Bangalore-560024..

Published by: Pragati Graphics-Bangalore, # 119 3rd Cross, 8th Main Road, Hampinagara (RPC. Layout) Vijayanagara, Bangalore -560 040. Ph : 080 2340 9512

Pages	: 96
First Impression	: 2007
Paper	: NS Maplitho 80 GSM
Price	: Rs. 45/-
Rights(Translation)	: Dr. J. Balakrishna

ಪುಟಗಳು	: 96
ಮೊದಲ ಮುದ್ರಣ	: 2007
ಕಾಗದ	: NS Maplitho80 GSM
ಬೆಲೆ	: ರೂ. 45/-
ಹಕ್ಕುಗಳು (ಅನುವಾದ)	: ಡಾ. ಜೆ. ಬಾಲಕೃಷ್ಣ

ಮುಖಪುಟ	: ಕೃಷ್ಣ ರಾಯಚೂರ್
ಪ್ರಕಾಶಕರು	: ಡಾ. ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್, ನಂ. 119, 3ನೇ ತಿರುವು, 8ನೇ ಮುಖ್ಯರಸ್ತೆ,ಆರ್.ಪಿ.ಸಿ. ಬಡಾವಣೆ, ಬೆಂಗಳೂರು – 40 ದೂರವಾಣಿ: 080–

CS Scanned with CamScanner

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯದ ಅಧ್ಯಯನಕ್ಕಾಗಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿರುವ ಡಾ. ಜೆ.ಬಾಲಕೃಷ್ಣರವರ ಹುಟ್ಟೂರು ಕೋಲಾರ. ಇಂಡಿಯನ್ ಬ್ಯಾಂಕ್‌ನಲ್ಲಿ ಒಂದೂವರೆ ದಶಕ ಕೃಷಿ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ಅವರು 1998ರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕನ್ನಡ ಜನತೆಗೆ ಜಪಾನಿನ ಕೃಷಿ ಋಷಿ ಫುಕುವೋಕಾನನ್ನು ಮೊದಲಬಾರಿಗೆ ಪರಿಚಯಿಸಿದವರು. ವಿಜ್ಞಾನ ಸಾಹಿತ್ಯದಲ್ಲಿ ಆಸಕ್ತಿ ಇರುವ ಅವರು ಕನಸೆಂಬ ಮಾಯಾಲೋಕ, ಮಿಥುನ, ಮಳೆಬಿಲ್ಲ ನೆರಳು ಎಂಬ ವಿಜ್ಞಾನ ಲೇಖನಗಳ ಕೃತಿಗಳನ್ನು, ನೆನಪುಗಳಿಗೇಕೆ ಸಾವಿಲ್ಲ ಎಂಬ ಕಥಾಸಂಕಲನವನ್ನು ಹಾಗೂ ಇನ್ನೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ. ಅವರ ಮಳೆಬಿಲ್ಲ ನೆರಳು ಕೃತಿಗೆ 2011–12ರ ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅತ್ಯುತ್ತಮ ವಿಜ್ಞಾನ ಕೃತಿ ಪ್ರಶಸ್ತಿ ಲಭಿಸಿದೆ.

ಫ್ರೆಂಚ್ ಭಾಷೆಯಲ್ಲಿ ('ಲ ಪತಿ ಪ್ರಿನ್ಸ್') 1943ರಲ್ಲಿ ಮೊದಲು ಪ್ರಕಟವಾದ 'ಪುಟ್ಟ ರಾಜಕುಮಾರ' ವಿಶ್ವದ 125ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ. ಈಗಲೂ ಪ್ರತಿ ವರ್ಷ 10 ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗುತ್ತಿವೆ. ಈ ಪುಸ್ತಕ ನಿಜವಾಗಿಯೂ ಮಕ್ಕಳ ಪುಸ್ತಕವೆ? ಅಥವಾ ದೊಡ್ಡವರಿಗಾಗಿ ಬರೆದ ಮಕ್ಕಳ ಕತೆಯೆ? ಸೇಂತ್ ಎಕ್ಸೂಪರಿಯೇ ಹೇಳಿದಂತೆ, 'ಎಲ್ಲಾ ದೊಡ್ಡವರು ಮೊದಲು ಮಕ್ಕಳಾಗಿದ್ದವರೆ. ಆದರೆ, ಅದನ್ನು ನೆನೆಪಿನಲ್ಲಿಟ್ಟುಕೊಳ್ಳುವವರು ಕೆಲವರು ಮಾತ್ರ'. ಭರವಸೆ, ಸಾಂತ್ವನ ಹಾಗೂ ಪ್ರೀತಿಯ ಸಂದೇಶವನ್ನು ಸಾರಲು ಯತ್ನಿಸುವ ಈ ಕೃತಿ ಬದುಕಿನ ಅದೃಶ್ಯ ಸೌಂದರ್ಯವನ್ನು ಕಾಣುವಂತೆ ಮಾಡುತ್ತದೆ. ಸುಖಿಸಂತೋಷದ ಬದುಕಿನ ಅವಶ್ಯಕತೆಗಳು ತೀರಾ ಸರಳವಾದುವು ಹಾಗೂ ನಿಸ್ವಾರ್ಥತೆಯೇ ಸಿರಿಸಂಪತ್ತು ಎಂಬ ಸಂದೇಶವನ್ನು 'ಪುಟ್ಟ ರಾಜಕುಮಾರ' ಸಾರುತ್ತಾನೆ.

ಪ್ರಕಾಶಕರು

Scanned with CamScanner

ಆಂತ್ವಾನ್ ದ ಸೇಂತ್–ಎಕ್ಸೂಪರಿ

ಆಂತ್ವಾನ್ ದ ಸೇಂತ್–ಎಕ್ಸೂಪರಿ (29.6.1900 – 31.7.1944) ಉತ್ತಮ ಬರಹಗಾರನಾಗಿರುವಂತೆ ಅತ್ಯುತ್ತಮ ಪೈಲಟ್ ಸಹ ಆಗಿದ್ದನು. ಫ್ರಾನ್ಸ್‌ನವನಾದ ಈತ ಸಾಹಸ ಮತ್ತು ಅಪಾಯವನ್ನು ಕವಿದೃಷ್ಟಿಯಲ್ಲಿ ಕಂಡವನು. ಆದರೆ ಆತ ಪೈಲಟ್ ಆಗಬೇಕೆಂದುಕೊಂಡಿದ್ದವನಲ್ಲ. ಮೊದಲ ವಿಶ್ವಯುದ್ಧದ ಸಮಯದಲ್ಲಿ ಯುವಕನಾಗಿದ್ದ ಈತನನ್ನು ಮಿಲಿಟರಿಗೆ ಸೇರುವಂತೆ ಆದೇಶಿಸಿ ಅಲ್ಲಿ ವಾಯುಪಡೆಗೆ ಸೇವೆ ಸಲ್ಲಿಸುವಂತೆ ಹೇಳಲಾಯಿತು. ಅಲ್ಲಿ ವಿಮಾನ ಮತ್ತು ವಿಮಾನಚಾಲನೆಯಲ್ಲಿ ಮೂಡಿದ ಆಸಕ್ತಿ ಅದನ್ನೇ ಆತನ ಬದುಕಾಗುವಂತೆ ಮಾಡಿತು.

ವಿಮಾನಚಾಲನೆಯಲ್ಲಿ ಸೇಂಟ್–ಎಕ್ಸ್ ಒಬ್ಬ ಹೀರೋ ಆಗಿದ್ದ. ಆಫ್ರಿಕಾದ ಕಷ್ಟಕರ ಹಾಗೂ ಅಪಾಯಕರ ಪ್ರದೇಶಗಳಲ್ಲೂ ಆತನ ಸಾಹಸಮಯ ವಿಮಾನಚಾಲನೆ ಆತನ ಸಹ–ಪೈಲಟ್‌ಗಳೂ ಸಹ ಬೆರಗಾಗುವ ಹಾಗಿತ್ತು. 1929ರಲ್ಲಿ ಅತ ಟೌಲೋಸ್‌ನಲ್ಲಿನ ಕಾಂಪೇನಿ ಲೇಟೆಕೋರೆ ಸೇರಿಕೊಂಡು ವಾಯುವ್ಯ ಆಫ್ರಿಕ, ದಕ್ಷಿಣ ಅಟ್ಲಾಂಟಿಕ್ ಮತ್ತು ದಕ್ಷಿಣ ಅಮೆರಿಕಗಳಲ್ಲಿ ವಿಮಾನ ಅಂಚೆಸೇವೆಯಲ್ಲಿ ತೊಡಗಿದ. ಆಗ ಮೆರಿಟರೇನಿಯನ್ ದಾಟಿದಲ್ಲಿ ಎಲ್ಲವೂ ಶತ್ರುಪ್ರದೇಶವೇ. ದಾರಿಯಲ್ಲಿನ ಮೊರೊಕ್ಕೊ, ರಿಯೋ ಡೆ ಓರೋ ಮತ್ತು ಮಾರಿಷಿಯಾನಿಯಾಗಳಲ್ಲೆಲ್ಲ ಅಂಚೆಚೀಲ ತಲುಪಿಸುವ/ ಸಂಗ್ರಹಿಸುವ ಕಾರ್ಯ ಅಪಾಯಕಾರಿಯಾಗಿತ್ತು. ಈತನ ಸಾಹಸ ಮನೋಭಾವವನ್ನು ಕಂಡು ಆತನನ್ನು ಮಾರಿಷಿಯಾನಿಯದಲ್ಲಿನ ಶತ್ರುಗಳ ನಡುವಿನ ಕ್ಯಾಂಪ್ ಜ್ಯೂಬಿಗೆ ವರ್ಗಾಯಿಸಲಾಯಿತು. ಇಲ್ಲಿ ಆತನ ಕೆಲಸವಿಷ್ಟೆ: ಮರಳುಗಾಡಿನಲ್ಲಿ ಬಿದ್ದಿರುವ ಪೈಲಟ್‌ಗಳನ್ನು ನೂರಾರು ಕಿಲೋಮೀಟರ್ ವಿಸ್ತಾರದ ಪ್ರದೇಶದಲ್ಲಿ ಹುಡುಕಿ ಎರಡು ದಿನಗಳಲ್ಲಿ ರಕ್ಷಿಸಿ ಕ್ಯಾಂಪಿಗೆ ತರಬೇಕು. ಇಲ್ಲದಿದ್ದಲ್ಲಿ ಆ ಪೈಲಟ್‌ಗಳು ಶತ್ರುಗಳಿಂದ ಬದುಕಿ ಉಳಿಯುತ್ತಿರಲಿಲ್ಲ.

ಈ ಕ್ಯಾಂಪ್‌ನಲ್ಲಿನ ತನ್ನ ಬದುಕಿನ ಬಗ್ಗೆ 1927ರಲ್ಲಿ ಒಮ್ಮೆ ತನ್ನ ತಾಯಿಗೆ ಪತ್ರ ಬರೆದಿದ್ದ: 'ಆಫ್ರಿಕಾದ ಈ ದುರ್ಗಮ ಪ್ರದೇಶದಲ್ಲಿ, ಸ್ಪ್ಯಾನಿಷ್ ಸಹಾರಾದ ನಡುವೆ ನನ್ನದು ಎಂತಹ ಸಂನ್ಯಾಸಿಯ ಬದುಕು! ಸಮುದ್ರ ತೀರದಲ್ಲಿನ ಕೋಟೆ, ಪಾಳು ಮನೆ – ಇಷ್ಟೇ ನನ್ನ ಸುತ್ತ ಮುತ್ತ. ಎಂಟು ದಿನಕ್ಕೊಮ್ಮೆ ಒಂದು ವಿಮಾನ ಬಂದುಹೋಗುತ್ತದೆ. ಆ ಎಂಟುದಿನಗಳ ನಡುವೆ, ಬರೇ ನಿಶ್ಯಬ್ದ ....'

ಆ ನಿಶ್ಯಬ್ದದ ದಿನಗಳಲ್ಲಿಯೇ ಎರಡು ಪೀಪಾಯಿಗಳ ಮೇಲಿಟ್ಟ ಹಲಗೆಯನ್ನೇ ಮೇಜನ್ನಾಗಿಸಿ ಸೇಂತ್-ಎಕ್ಸ್ ಪ್ರತಿ ರಾತ್ರಿ ಬರೆದದ್ದು 'ಸದರನ್ ಮೇಲ್' (1929) ಎಂಬ ಕಾದಂಬರಿ.

'ಪುಟ್ಟ ರಾಜಕುಮಾರ'

ಮರಳುಗಾಡಿನಲ್ಲಿನ ಈ ರೀತಿಯ ಮತ್ತೊಂದು ಅನುಭವವೇ 'ಪುಟ್ಟ ರಾಜಕುಮಾರ' ಬರೆಯಲು ಪ್ರೇರೇಪಿಸಿತು. ವಿಶಿಷ್ಟ ಕಥಾವಸ್ತು ಹೊಂದಿರುವ ಈ 'ಪುಟ್ಟ ರಾಜಕುಮಾರ' ಒಂದು ಪ್ರಖ್ಯಾತ ಪುಸ್ತಕ. ಫ್ರೆಂಚ್ ಭಾಷೆಯಲ್ಲಿ ('ಲ ಪತಿ ಪ್ರಿನ್ಸ್') 1943ರಲ್ಲಿ ಮೊದಲು ಪ್ರಕಟವಾದ ಈ ಪುಸ್ತಕ ಈಗಾಗಲೇ ವಿಶ್ವದ 125 ಭಾಷೆಗಳಿಗೆ ಅನುವಾದಗೊಂಡಿದೆ. ಈಗಲೂ ಪ್ರತಿ ವರ್ಷ 10 ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗುತ್ತಿವೆ. ಮಕ್ಕಳಿಗಾಗಿ ಬರೆದ ಈ ಪುಸ್ತಕಕ್ಕೆ ಚಿತ್ರಗಳು ಬೇಕಿದ್ದುದರಿಂದ, ತನ್ನ ಕಲ್ಪನೆಗಳ ಸರಳತೆಯನ್ನು ಚಿತ್ರಿಸುವರ್‍ಯಾರೂ ಸಿಗದಿದ್ದುದರಿಂದ ಚಿತ್ರಗಳನ್ನು ತಾನೇ ಬಿಡಿಸಿದ. ಆದರೆ ಈ ಪುಸ್ತಕ ನಿಜವಾಗಿಯೂ ಮಕ್ಕಳ ಪುಸ್ತಕವೆ? ಅಥವಾ ದೊಡ್ಡವರಿಗಾಗಿ ಬರೆದ ಮಕ್ಕಳ ಕತೆಯೆ? ಸೇಂತ್ ಎಕ್ಸೂಪರಿಯೇ ಹೇಳಿದಂತೆ, 'ಎಲ್ಲಾ ದೊಡ್ಡವರು ಮೊದಲು ಮಕ್ಕಳಾಗಿದ್ದವರೆ. ಆದರೆ, ಅದನ್ನು ನೆನೆಪಿನಲ್ಲಿಟ್ಟುಕೊಳ್ಳುವವರು ಕೆಲವರು ಮಾತ್ರ'. ಸುಖಸಂತೋಷದ ಬದುಕಿನ ಅವಶ್ಯಕತೆಗಳು ತೀರಾ ಸರಳವಾದುವು ಹಾಗೂ ನಿಸ್ವಾರ್ಥತೆಯೇ ಸಿರಿಸಂಪತ್ತು ಎಂಬ ಸಂದೇಶವನ್ನು 'ಪುಟ್ಟ ರಾಜಕುಮಾರ' ಸಾರುತ್ತಾನೆ.

'ಪುಟ್ಟ ರಾಜಕುಮಾರ' ಪುಸ್ತಕವನ್ನು ನಾವು ಮಕ್ಕಳ ಅಥವಾ ದೊಡ್ಡವರ ಪುಸ್ತಕ- ಏನೆಂದೇ ಪರಿಗಣಿಸಿದರೂ ಈ ಕತೆಯಲ್ಲಿ ಕೇಂದ್ರಿತವಾಗಿರುವ ಸಾವು, ಕೆಡುಕು ಹಾಗೂ ಹತಾಶೆಯ ಪ್ರತಿಮೆಗಳು ಓದಿದ ನಂತರವೂ ನಮ್ಮನ್ನು ಕಾಡುತ್ತಿರುತ್ತವೆ. ಈ ಕತೆಯ ಯಾವುದೇ ಪಾತ್ರವೂ ಸಂತೋಷವಾಗಿಲ್ಲ. ಸೇಂತ್-ಎಕ್ಸ್, ಒಂಟಿತನ ಕಾಡಲು ನಾವು ಒಂಟಿಯಾಗಿರಬೇಕಿಲ್ಲ, ಇತರರ ನಡುವೆಯೂ ನಮ್ಮನ್ನು ಒಂಟಿತನ ಕಾಡುತ್ತದೆ ಎಂಬುದನ್ನು ಒತ್ತಿ ಹೇಳುತ್ತಾರೆ. ಮನುಷ್ಯ ಸಂಪರ್ಕ ಯಾವುದೇ ಮುನ್ನೆಚ್ಚರಿಕೆ ಇಲ್ಲದೆ ರೊಯ್ಯೆಂದು ಹಾದು ಹೋಗುವ 'ಎಕ್ಸ್‌ಪ್ರೆಸ್ ಟ್ರೈನಿನ' ಹಾಗೆ ಕ್ಷಣಿಕವಾದದ್ದು. ಕೊನೆಗೆ ಯಾರನ್ನಾದರೂ ಗೆಳೆಯರನ್ನಾಗಿ ಮಾಡಿಕೊಂಡ ನಂತರವೂ ಪುಟ್ಟ ರಾಜಕುಮಾರ ಹೊರಡಲೇಬೇಕಾಗುತ್ತದೆ. ನರಿಯಂತಹ ಪಾತ್ರ ಸಾಂಗತ್ಯಕ್ಕಾಗಿ ಹತಾಶತೆಯಿಂದ ತನ್ನನ್ನು ತಾನೇ 'ಪಳಗಿಸಿಕೊಳ್ಳಲು' ಮುಂದಾಗುತ್ತದೆ.

ಮಕ್ಕಳು ಯಶಸ್ವಿಯಾಗುವ ಹಲವಾರು ಸನ್ನಿವೇಶಗಳಲ್ಲಿ ದೊಡ್ಡವರು ಸೋಲುತ್ತಾರೆ. ಪ್ರಪಂಚದಲ್ಲಿನ ಎಲ್ಲ ಕೆಡುಕಿಗೂ ದೊಡ್ಡವರೇ ಕಾರಣ- ಅದು ನಕ್ಷತ್ರಗಳನ್ನು ಹೊಂದುವುದಾಗಬಹುದು, ಕುಡುಕರಾಗುವುದಾಗಬಹುದು, ಇಲಿಗಳಿಗೆ ಮರಣದಂಡನೆ ವಿಧಿಸುವುದಾಗಬಹುದು ಅಥವಾ 'ಕೆಡಕನ್ನುಂಟುಮಾಡುವ' ಆನೆಹುಣಿಸೆ ಮರಗಳನ್ನು ಬೆಳೆಯಲು ಬಿಡುವುದಾಗಬಹುದು. ದೊಡ್ಡವರು ತಮ್ಮ ಹೃದಯವಂತಿಕೆಯಿಂದ ಜಗತ್ತನ್ನು ನೋಡಲು ಸಾಧ್ಯವಾಗದೆ ಅಂಕಿಅಂಶಗಳ ಮೂಲಕ ನೋಡುವುದು ಅವರನ್ನು ಬಲವಂತದ ಒಂಟಿತನಕ್ಕೆ ದೂಡುತ್ತದೆ. ಪುಟ್ಟ ರಾಜಕುಮಾರ ತನ್ನ ಕ್ಷುದ್ರಗ್ರಹದಲ್ಲಿ ಒಬ್ಬನೇ ಇದ್ದರೂ ಅವನಿಗೆ ತಾನು ಒಬ್ಬಂಟಿ ಎನ್ನಿಸಿರುವುದೇ ಇಲ್ಲ. ಆದರೆ, ಎಂದು ದೊಡ್ಡವರ ಜಗತ್ತಿಗೆ ಕಾಲಿಡುತ್ತಾನೆಯೋ ಅಂದೇ ಅವನಿಗೆ ಒಂಟಿತನ ಕಾಡತೊಡಗುತ್ತದೆ.

ಆನೆಹುಣಿಸೆ ಮರಗಳ ಮೂಲಕ ಸೇಂತ್-ಎಕ್ಸೂಪರಿ ನಾತ್ಸಿಗಳ ದೌರ್ಜನ್ಯವನ್ನು ಸೂಚ್ಯವಾಗಿ ತೋರಿಸುತ್ತಾನೆಂದು ಕೆಲವು ವಿಮರ್ಶಕರು ಹೇಳುತ್ತಾರೆ. ತಮ್ಮ ಸೋಮಾರಿತನದಿಂದ ಆನೆಹುಣಿಸೆ ಮರಗಳನ್ನು ಬೆಳೆಯಲು ಬಿಡುವುದರಿಂದಾಗುವ ಅನಾಹುತಗಳಿಗೆ ಅವರೇ ಹೊಣೆಗಾರರಾಗಬೇಕೆನ್ನುವ ಪುಟ್ಟ ರಾಜಕುಮಾರ ತಾನೆಂದೂ ಸೋಮಾರಿಯಲ್ಲ. ಕೆಟ್ಟ ಬೀಜದ ಸಸಿಗಳನ್ನು ಕಿತ್ತೆಸೆದು ತನ್ನ ಪುಟ್ಟ ಗ್ರಹವನ್ನು ಸ್ವಚ್ಛವಾಗಿಟ್ಟುಕೊಂಡಿರುತ್ತಾನೆ.

ಭರವಸೆ, ಸಾಂತ್ವನ ಹಾಗೂ ಪ್ರೀತಿಯ ಸಂದೇಶವನ್ನು ಸಾರಲು ಯತ್ನಿಸುವ ಸೇಂತ್-ಎಕ್ಸೂಪರಿಯ ಪ್ರಯತ್ನವೇ ಈ ಪುಸ್ತಕದ ಜೀವಾಳ. ಗುಲಾಬಿಯ ಬಗೆಗಿನ ರಾಜಕುಮಾರನ ಅನನ್ಯ ಪ್ರೇಮ ಆತನನ್ನು ಬದುಕಿನ ಅದೃಶ್ಯ ಸೌಂದರ್ಯವನ್ನು ಕಾಣುವಂತೆ ಮಾಡುತ್ತದೆ. ತನ್ನ ಪ್ರೀತಿಯಿಂದ ತನ್ನ ಅಸ್ತಿತ್ವದ ನಿರಾಕಾರ ಸತ್ಯವನ್ನು ಕಾಣುತ್ತಾನೆ. ಆ ಸತ್ಯವನ್ನು ಆತ ಕಣ್ಣಿಂದ ಕಾಣುವುದಿಲ್ಲ, ಬದಲಿಗೆ ಹೃದಯದಿಂದ ಕಾಣುತ್ತಾನೆ. ಕತೆಯಲ್ಲಿನ ಪೈಲಟ್ ಹಾಗೂ ಪುಟ್ಟರಾಜಕುಮಾರ ಇಚ್ಛಾ ಸ್ವಾತಂತ್ರ್ಯವನ್ನು ಪ್ರತಿನಿಧಿಸುತ್ತಾರೆ- ಕಾಗದದ ಮೇಲಿನ ಚಿತ್ರಗಳು ಜೀವ ಪಡೆಯುತ್ತವೆ ಹಾಗೂ ಏನೂ ಇಲ್ಲದ ಮರುಭೂಮಿಯಲ್ಲಿ ನೀರಿನ ಬಾವಿ ಕಾಣಿಸಿಕೊಳ್ಳುತ್ತದೆ. ಅವರ ಪ್ರಯಾಣದಲ್ಲಿ ಸತ್ಯದ ಮುಗ್ಧತೆ ಜ್ಞಾನೋದಯದ ಬೆಳಕು ಕಾಣತೊಡಗುತ್ತದೆ.

ಸ್ವತಃ ಸೇಂತ್-ಎಕ್ಸೂಪರಿಯೇ, 'ಈ ಪುಸ್ತಕದಲ್ಲಿನ ಚಿತ್ರಗಳು ಬಾಲ್ಯದ ಮುಗ್ಧತೆಯನ್ನು ಸೆರೆಹಿಡಿಯಲು ಯತ್ನಿಸಿವೆ, ಪಠ್ಯದಷ್ಟೇ ಪ್ರಾಮುಖ್ಯತೆ

ಚಿತ್ರಗಳಿಗಿವೆ' ಎನ್ನುತ್ತಾನೆ. ಕತೆಯಲ್ಲಿನ ವೃತ್ತಾಂತಕಾರ ತನ್ನ ಮಾತುಗಳಿಗಿಂತ ಚಿತ್ರಗಳೇ ಉತ್ತಮವಾಗಿ ಮಾತನಾಡುತ್ತವೆ ಎನ್ನುತ್ತಾನೆ. ಅಲ್ಲದೆ ಆತ ಮಕ್ಕಳ ಹಾಗೂ ದೊಡ್ಡವರ ಜಗತ್ತುಗಳು ಬೇರೆ ಬೇರೆ ಎಂದೂ ಗುರುತಿಸುತ್ತಾನೆ. ಮಕ್ಕಳ ಕಲ್ಪನಾಲೋಕವನ್ನು ಬೇಧಿಸಲು ಹಾಗೂ ಅದನ್ನು ಅರ್ಥೈಸಿಕೊಳ್ಳಲು ದೊಡ್ಡವರು ಪ್ರಯತ್ನಿಸುವುದೇ ಇಲ್ಲ. ದೊಡ್ಡವರ ಕೆಲಸಕಾರ್ಯಗಳೆಲ್ಲಾ ಅವರಿಗೆ 'ಬಹಳ ಮುಖ್ಯವಾದ ವಿಚಾರಗಳು'. ಅವರು ಎಲ್ಲವನ್ನೂ ಅಂಕಿಸಂಖ್ಯೆಗಳ ಮೂಲಕ ಹಾಗೂ ಹಣದ ಮೌಲ್ಯದ ಮೂಲಕವೇ ನೋಡಲು ಪ್ರಯತ್ನಿಸುತ್ತಾರೆ. ಆದ್ದರಿಂದಲೇ ಸೇಂತ್-ಎಕ್ಸೂಪರಿ, 'ಎಲ್ಲಾ ದೊಡ್ಡವರು ಮೊದಲು ಮಕ್ಕಳಾಗಿದ್ದವರೆ. ಆದರೆ ಅದನ್ನು ನೆನಪಿನಲ್ಲಿಟ್ಟುಕೊಳ್ಳುವವರು ಕೆಲವರು ಮಾತ್ರ; ಎಂದಿದ್ದಾನೆ.

ಈತನ ಇತರ ಕಾದಂಬರಿಗಳೆಂದರೆ, 'ನೈಟ್ ಫ್ಲೈಟ್' (1931), 'ವಿಂಡ್, ಸ್ಯಾಂಡ್ ಅಂಡ್ ಸ್ಟಾರ್ಸ್ (1939), 'ಫ್ಲೈಟ್ ಟು ಅರ್ರಾಸ್ (1942), 'ಲೆಟರ್ ಟು ಎ ಹೋಸ್ಟೇಜ್' (1943) ಹಾಗೂ ಮರಣಾನಂತರ ಪ್ರಕಟವಾದ 'ದ ವಿಸ್‌ಡಮ್ ಆಫ್ ದ ಸ್ಯಾಂಡ್ಸ್' (1948).

1940ರಲ್ಲಿ ಫ್ರಾನ್ಸ್‌ನ ಪತನದ ನಂತರ ಉತ್ತರ ಅಮೆರಿಕಕ್ಕೆ ತಪ್ಪಿಸಿಕೊಂಡು ಹೋದ ಸೇಂತ್- ಎಕ್ಸ್ 1943ರಲ್ಲಿ ಉತ್ತರ ಆಫ್ರಿಕಾದ ವಾಯುಪಡೆಗೆ ಸೇರಿಕೊಂಡ. 'ಪುಟ್ಟ ರಾಜಕುಮಾರ' ಪ್ರಕಟಗೊಂಡ ಮರುವರ್ಷ, ಅಂದರೆ 1944 ಸೇಂತ್ ಎಕ್ಸೂಪರಿ ಇದ್ದ ವಿಮಾನ ಕಣ್ಮರೆಯಾಯಿತು. ಎಕ್ಸೂಪರಿ ಸತ್ತ ಅರವತ್ತು ವರ್ಷಗಳ ನಂತರ 2004ರಲ್ಲಿ ಮೆಡಿಟರೇನಿಯನ್ ಸಮುದ್ರದ ಮಾರ್ಸೀಲ್ ತೀರದ ಬಳಿ ಆತನ ವಿಮಾನದ ಅವಶೇಷಗಳ ಸಿಕ್ಕಿವೆ. 1998ರಲ್ಲೇ ಮೀನುಗಾರರಿಗೆ ಸೇಂತ್- ಎಕ್ಸೂಪರಿಯ ಹೆಂಡತಿಯ ಹೆಸರು ಕೆತ್ತಿದ್ದ ಕಡಗವೊಂದು ಸಿಕ್ಕಿತ್ತು. ಆತನ ವಿಮಾನದ ಮೇಲೆ ಯಾವುದೇ ಬಂದೂಕದಿಂದ ಗುಂಡು ಹೊಡೆದ ಗುರುತುಗಳಿರಲಿಲ್ಲ. ಸೇಂತ್ ಶತ್ರುದಾಳಿಗೆ ಬಲಿಯಾದನೋ ಅಥವಾ ಅವಘಡಕ್ಕೀಡಾದನೋ ತಿಳಿದಿಲ್ಲ.

ಡಾ.ಜೆ.ಬಾಲಕೃಷ್ಣ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ
ಬೆಂಗಳೂರು-560065

“ದೊಡ್ಡವರು ತಾವಾಗೇ ಏನೊಂದೂ ಅರಿತುಕೊಳ್ಳುವುದಿಲ್ಲ ಹಾಗೂ ಅವರಿಗೆ ಪ್ರತಿಯೊಂದನ್ನೂ ನಿರಂತರವಾಗಿ ವಿವರಿಸಿ ಹೇಳುವಷ್ಟರಲ್ಲಿ ಮಕ್ಕಳಿಗೆ ಸಾಕುಸಾಕಾಗಿರುತ್ತದೆ.”

ಪುಟ್ಟ ರಾಜಕುಮಾರ

ಒಮ್ಮೆ ನಾನು ಆರುವರ್ಷದ ಬಾಲಕನಾಗಿದ್ದಾಗ ‘ಪ್ರಕೃತಿಯ ಮಡಿಲಿನ ಸತ್ಯಕತೆಗಳು’ ಎಂಬ ಒಂದು ಪ್ರಾಚೀನ ಕಾಡಿನ ಬಗೆಗಿನ ಪುಸ್ತಕದಲ್ಲಿ ಒಂದು ಅದ್ಭುತ ಚಿತ್ರವನ್ನು ಕಂಡೆ. ಅದು ಯಾವುದೋ ಪ್ರಾಣಿಯನ್ನು ಸುತ್ತಿಕೊಂಡು ನುಂಗುತ್ತಿರುವ ಹೆಬ್ಬಾವಿನದಾಗಿತ್ತು. ಆ ಚಿತ್ರ ಹೀಗಿತ್ತು:

‘ಹೆಬ್ಬಾವುಗಳು ತಮ್ಮ ಬಲಿಪ್ರಾಣಿಗಳನ್ನು ಅಗಿಯದೆ ಹಾಗೇ ಇಡಿಯಾಗಿ ನುಂಗಿಬಿಡುತ್ತವೆ. ನಂತರ ಆ ಹೆಬ್ಬಾವಿಗೆ ಓಡಾಡಲು ಆಗದೆ ಹೊಟ್ಟೆಯಲ್ಲಿನ ಪ್ರಾಣಿ ಜೀರ್ಣವಾಗುವವರೆಗೂ ಆರು ತಿಂಗಳ ಕಾಲ ಹಾಗೇ ನಿದ್ದೆಮಾಡುತ್ತವೆ’ ಎಂದು ಆ ಪುಸ್ತಕದಲ್ಲಿ ಬರೆದಿತ್ತು.

ಕಾಡಿನಲ್ಲಿನ ಸಾಹಸಗಳ ಬಗೆಗೆ ಗಾಢವಾಗಿ ನಾನು ಆಲೋಚಿಸಿದೆ. ಬಣ್ಣದ ಪೆನ್ಸಿಲ್ಲಿನಿಂದ ಅದೂ ಇದೂ ಗೀಚಿ ಕೊನೆಗೆ ನನ್ನ ಕಲಾಕೃತಿ ರಚಿಸುವಲ್ಲಿ ಯಶಸ್ವಿಯಾದೆ. ಅದು ಹೀಗಿತ್ತು:



ನನ್ನ ಮೊತ್ತಮೊದಲ ಅದ್ವಿತೀಯ ಕಲಾಕೃತಿಯನ್ನು ದೊಡ್ಡವರಿಗೆ ತೋರಿಸಿದೆ; ನನ್ನ ಚಿತ್ರ ಅವರನ್ನು ಹೆದರಿಸುತ್ತದೆಯೆ? ಎಂದೂ ಕೇಳಿದೆ.

'ಹೆದರಿಕೆ? ಟೊಪ್ಪಿಗೆಯನ್ನು ಕಂಡು ಯಾರಾದರೂ ಹೆದರುತ್ತಾರೆಯೇ?' ಅವರು ಕೇಳಿದರು.

ಆದರೆ ನನ್ನ ಚಿತ್ರ ಟೊಪ್ಪಿಗೆಯದಾಗಿರಲಿಲ್ಲ. ಒಂದು ಹೆಬ್ಬಾವು ಆನೆಯನ್ನು ನುಂಗಿ ಜೀರ್ಣಿಸಿಕೊಳ್ಳುತ್ತಿರುವುದು ನನ್ನ ಚಿತ್ರವಾಗಿತ್ತು. ದೊಡ್ಡವರಿಗೆ ಅದು ಅರ್ಥವಾಗುತ್ತಿರಲಿಲ್ಲವಾದುದರಿಂದ ನಾನು ಮತ್ತೊಂದು ಚಿತ್ರ ರಚಿಸಿದೆ. ಅವರಿಗೆ ಸ್ಫುಟವಾಗಿ ಕಾಣಲೆಂದು ಹೆಬ್ಬಾವಿನ ಒಳಭಾಗ ಕಾಣುವಂತೆ ರಚಿಸಿದೆ. ಅವರಿಗೆ ಪ್ರತಿಯೊಂದೂ ವಿವರವಾಗಿ ಬಿಡಿಸಿ ಹೇಳುವಂತಿರಬೇಕು. ನನ್ನ ಎರಡನೆಯ ಚಿತ್ರ ಈ ರೀತಿ ಇತ್ತು:



ಆದರೆ ಈ ಬಾರಿ ಅವರ ಪ್ರತಿಕ್ರಿಯೆ ಉಪದೇಶವಾಗಿತ್ತು: 'ಹೆಬ್ಬಾವಿನ ಒಳಭಾಗ ಅಥವಾ ಹೊರಭಾಗಗಳ ಚಿತ್ರ ರಚಿಸುವುದನ್ನು ಬದಿಗಿಡು. ಭೂಗೋಳ, ಚರಿತ್ರೆ, ಗಣಿತ ಹಾಗೂ ವ್ಯಾಕರಣ ಅಭ್ಯಾಸಗಳತ್ತ ಗಮನ ಹರಿಸು ಎಂದು' ಹೇಳಿದರು. ಆದುದರಿಂದ, ನಾನು ಆರು ವರ್ಷದವನಿರುವಾಗಲೇ ಮಹಾನ್ ಚಿತ್ರಕಲಾಕಾರನಾಗುವ ಅವಕಾಶವನ್ನು ಕೈಬಿಟ್ಟೆ.. ನನ್ನ ಮೊದಲನೆ ಹಾಗೂ ಎರಡನೇ ಚಿತ್ರಗಳು ಸೋತಿದ್ದರಿಂದ ನಾನು ಹತಾಶನಾಗಿದ್ದೆ. ದೊಡ್ಡವರು ತಾವಾಗೇ ಏನೊಂದೂ ಅರಿತುಕೊಳ್ಳುವುದಿಲ್ಲ ಹಾಗೂ ಅವರಿಗೆ ಪ್ರತಿಯೊಂದನ್ನೂ ನಿರಂತರವಾಗಿ ವಿವರಿಸಿ ಹೇಳುವಷ್ಟರಲ್ಲಿ ಮಕ್ಕಳಿಗೆ ಸಾಕುಸಾಕಾಗಿರುತ್ತದೆ.

ಹಾಗಾಗಿ ನಾನು ಮತ್ತೊಂದು ಉದ್ಯೋಗ ಆಯ್ದುಕೊಳ್ಳಬೇಕಾಯಿತು. ನಾನು ವಿಮಾನ ಚಾಲಕನಾದೆ. ಪ್ರಪಂಚದ ಬಹುಪಾಲು ಭಾಗವೆಲ್ಲಾ ಆಗಸದಲ್ಲಿ ಸುತ್ತುಹಾಕಿದ್ದೇನೆ. ಇಲ್ಲಿ ಭೂಗೋಳಶಾಸ್ತ್ರ ನನಗೆ ಉಪಯೋಗಕ್ಕೆ ಬಂತೆಂಬುದು ನಿಜ. ಬರೇ ನೋಟದಿಂದಲೇ ಅರಿಝೋನಾದಿಂದ ಚೀನಾವನ್ನು ಪ್ರತ್ಯೇಕಿಸಿ ಗುರುತಿಸಬಲ್ಲೆ. ಕತ್ತಲಲ್ಲಿ ಆಗಸದಲ್ಲಿ ಕಳೆದುಹೋದಲ್ಲಿ ಅಂಥ ಜ್ಞಾನ ತುಂಬ ಪ್ರಯೋಜನಕ್ಕೆ ಬರುವಂಥಾದ್ದು.

ಈ ನನ್ನ ಬದುಕಿನ ಹಾದಿಯಲ್ಲಿ ತತ್ಪರಿಣಾಮಗಳ ವಿಷಯಗಳ ಬಗ್ಗೆ ಕಾಳಜಿಯುಳ್ಳಂತಹ ಹಲವಾರು ಮಂದಿಯನ್ನು ಭೇಟಿಯಾಗಿದ್ದೇನೆ. ದೊಡ್ಡವರೊಂದಿಗೆ ಸಾಕಷ್ಟು ಬದುಕಿದ್ದೇನೆ. ಅವರನ್ನು ನಿಕಟವಾಗಿ ಅನ್ಯೋನ್ಯತೆಯಿಂದ ಕಂಡಿದ್ದೇನೆ. ಆದರೂ ಆ ನಿಕಟತೆ ಅವರ ಬಗೆಗಿನ ನನ್ನ ಅಭಿಪ್ರಾಯಗಳನ್ನು ಬದಲಿಸಲು ಸಾಧ್ಯವಾಗಿಲ್ಲ.

ತಿಳಿವಳಿಕೆಯುಳ್ಳವರು ಎನ್ನಿಸಿದ ಅಂತಹವರಿಗೆ ನನ್ನ ಹತ್ತಿರ ಯಾವಾಗಲೂ ಇರುವ ನನ್ನ ಮೊದಲನೆಯ ಚಿತ್ರವನ್ನು ತೋರಿಸುವ ಪ್ರಯೋಗ ಮಾಡಲು ಯತ್ನಿಸುತ್ತಿದ್ದೆ. ಆ ವ್ಯಕ್ತಿ ನಿಜವಾಗಿಯೂ ತಿಳಿವಳಿಕೆಯುಳ್ಳವನೇ ಎಂಬುದನ್ನು ಪರೀಕ್ಷಿಸುವ ಪ್ರಯತ್ನ ನಡೆಸುತ್ತಿದ್ದೆ. ಆದರೆ ಆತನೋ, ಆಕೆಯೋ, ಯಾರೇ ಆಗಿರಬಹುದು, ಚಿತ್ರವನ್ನು ನೋಡಿದಾಕ್ಷಣ ಹೇಳುತ್ತಿದ್ದರು: 'ಅದು ಟೊಪ್ಪಿಗೆ' ಎಂದು.

ನಂತರ ಆ ವ್ಯಕ್ತಿಯೊಂದಿಗೆ ಹೆಬ್ಬಾವಿನ ಬಗೆಗಾಗಲಿ, ಪ್ರಾಚೀನ ಕಾಡುಗಳ ಬಗೆಗಾಗಲಿ ಅಥವಾ ನಕ್ಷತ್ರಗಳ ಬಗೆಗಾಗಲಿ ನಾನು ಮಾತನಾಡುತ್ತಲೇ ಇರಲಿಲ್ಲ. ನಾನು ಆ ವ್ಯಕ್ತಿಯ ಮಟ್ಟಕ್ಕೆ ಇಳಿದುಬಿಡುತ್ತಿದ್ದೆ. ನಾನು ಆ ವ್ಯಕ್ತಿಯೊಂದಿಗೆ ಬ್ರಿಜ್ ಅಥವಾ ಗೋಲ್ಫ್ ಆಟಗಳ ಬಗ್ಗೆ, ರಾಜಕೀಯದ ಬಗ್ಗೆ, ಆತ ಧರಿಸುವ ಟೈಗಳ ಬಗ್ಗೆ ಮಾತನಾಡುತ್ತಿದ್ದೆ. ನನ್ನಂತಹ ಸಂವೇದನಾಶೀಲ ಮನುಷ್ಯನನ್ನು ಭೇಟಿಯಾದುದ್ದಕ್ಕೆ ಅಂತಹ ದೊಡ್ಡವರಿಗೆ ಬಹಳ ಸಂತೋಷವಾಗುತ್ತಿತ್ತು.

೨

ಹಾಗಾಗಿ ನನ್ನೊಂದಿಗೆ ಆತ್ಮೀಯವಾಗಿ ಮಾತನಾಡಬಲ್ಲ ಮತ್ತೊಬ್ಬ ವ್ಯಕ್ತಿ ಸಿಗದೆ ನನ್ನ ಬದುಕನ್ನು ಒಂಟಿಯಾಗಿಯೇ ಕಳೆದೆ– ಸಹಾರಾ ಮರುಭೂಮಿಯಲ್ಲಿ ಆರು ವರ್ಷಗಳ ಹಿಂದೆ ನನ್ನ ವಿಮಾನ ಅಪಘಾತಕ್ಕೆ ಈಡಾಗಾಗುವವರೆಗು. ಆ ದಿನ ನನ್ನ ವಿಮಾನದ ಎಂಜಿನ್‌ನಲ್ಲಿ ಏನೋ ತೊಂದರೆಯಾಗಿತ್ತು. ನನ್ನೊಂದಿಗೆ ಮೆಕ್ಯಾನಿಕ್ ಸಹ ಇರಲಿಲ್ಲ. ಇನ್ನಿತರ ಪ್ರಯಾಣಿಕರೂ ಇರಲಿಲ್ಲ. ಕಷ್ಟಕರವಾದ ರಿಪೇರಿ ಕೆಲಸವನ್ನು ನಾನೊಬ್ಬನೇ ಮಾಡಬೇಕಾಗಿತ್ತು. ಅದು ನನ್ನ ಸಾವು ಬದುಕಿನ ಪ್ರಶ್ನೆಯಾಗಿತ್ತು; ಏಕೆಂದರೆ ನನ್ನ ಬಳಿ ಒಂದು ವಾರಕ್ಕಾಗುವಷ್ಟು ಮಾತ್ರ ನೀರು ಉಳಿದಿತ್ತು.

ಮೊದಲ ರಾತ್ರಿ ಮರಳಿನ ಮೇಲೆಯೇ ನಿದ್ರಿಸಿದೆ. ಹತ್ತಿರದ ಮಾನವ ಬಿಡಾರ ಅಲ್ಲಿಂದ ಸಾವಿರ ಮೈಲು ದೂರದಲ್ಲಿತ್ತು. ಸಾಗರದ ಮಧ್ಯೆ ಅಪಘಾತಕ್ಕೊಳಗಾದ ಹಡಗಿನಿಂದ ಬದುಕುಳಿದು ತೆಪ್ಪದಲ್ಲಿ ತೇಲುತ್ತಿರುವ ನಾವಿಕನಿಗಿಂತ ನಾನು ಹೆಚ್ಚು ಒಂಟಿಯಾಗಿದ್ದೆ. ಹಾಗಿರುವಾಗ ಆ ಬೆಳಗಿನಜಾವ ಒಂದು ವಿಚಿತ್ರ ಮೃದು ಧ್ವನಿ ನನ್ನನ್ನು ಎಚ್ಚರಿಸಿದಾಗ ನನಗೆಷ್ಟು ಅಚ್ಚರಿಯಾಗಿರಬಹುದೆಂದು ನೀವು ಊಹಿಸಬಹುದು. ಆ ಧ್ವನಿ ಹೇಳಿತು:

'ದಯವಿಟ್ಟು, ನನಗೊಂದು ಕುರಿಯ ಚಿತ್ರ ಬಿಡಿಸಿಕೊಡು!'

'ಏನು!'

'ನನಗೊಂದು ಕುರಿಯ ಚಿತ್ರ ಬಿಡಿಸಿಕೊಡು!'

ಮಲಗಿದ್ದ ನಾನು ಸಿಡಿಲು ಬಡಿದವನಂತೆ ಎದ್ದು ನಿಂತೆ. ಇನ್ನೂ ನಿದ್ದೆಯ ಮಂಪರಿನಲ್ಲಿದ್ದವನು ಕಣ್ಣು ಮಿಟುಕಿಸಿದೆ. ಎಚ್ಚರಿಕೆಯಿಂದ ಸುತ್ತಲೂ ನೋಡಿದೆ. ನನ್ನನ್ನು ಅತ್ಯಂತ ಗಂಭೀರವಾಗಿ ನೋಡುತ್ತಿದ್ದ ಒಬ್ಬ ಪುಟ್ಟ ಮನುಷ್ಯ ಅಲ್ಲಿ ನಿಂತಿದ್ದ. ನಾನು ಬಿಡಿಸಿದ ಆತನ ಅತ್ಯುತ್ತಮ ಭಾವಚಿತ್ರವನ್ನು ನೀವಿಲ್ಲಿ ನೋಡಬಹುದು. ಆದರೆ ನಿಜವಾಗಿಯೂ ನನ್ನ ಚಿತ್ರ ಆತನಷ್ಟು ಮನಮೋಹಕವಾಗಿಲ್ಲ.

ಆದರೆ ಅದು ನನ್ನ ತಪ್ಪಲ್ಲ. ಏಕೆಂದರೆ ನಾನು ಆರುವರ್ಷದವನಾಗಿದ್ದಾಗಲೇ ಚಿತ್ರಕಾರನಾಗಬೇಕೆಂಬ ನನ್ನ ಉತ್ಸಾಹವನ್ನು ದೊಡ್ಡವರು ಚಿವುಟಿಹಾಕಿದ್ದರು. ಅದಾದ ನಂತರ ನಾನು ಹೆಬ್ಬಾವಿನ ಚಿತ್ರವನ್ನು ಹೊರಗಿನಿಂದ ಕಾಣುವಂತೆ ಹಾಗೂ ಒಳಭಾಗ ಕಾಣುವಂತೆ ಬಿಡಿಸುವುದನ್ನು ಬಿಟ್ಟರೆ ಮತ್ತೇನನ್ನೂ ಕಲಿಯಲು ಪ್ರಯತ್ನಿಸಿರಲೇ ಇಲ್ಲ.

ಇದ್ದಕ್ಕಿದ್ದಂತೆ ಮೂಡಿಬಂದ ಆ ಆಕೃತಿಯನ್ನು ಅಚ್ಚರಿ, ಗಾಬರಿಯಿಂದ ನೋಡತೊಡಗಿದೆ. ನಾನು ಮಾನವಬಿಡಾರಗಳಿಂದ ಸಾವಿರ ಮೈಲುದೂರವಿರುವ ಮರುಭೂಮಿಯಲ್ಲಿ, ವಿಮಾನ ನೆಲಕ್ಕಪ್ಪಳಿಸಿ ಒಂಟಿಯಾಗಿ ಸಿಕ್ಕಿಬಿದ್ದಿದ್ದೆನೆಂಬುದು ನಿಮಗೆ ನೆನಪಿರಲಿ. ಆದರೂ ಈ ನನ್ನ ಪುಟ್ಟ ಮನುಷ್ಯ ಈ ಮರಳುಗಾಡಿನಲ್ಲಿ ದಾರಿತಪ್ಪಿದವನಂತಾಗಲಿ ಅಥವಾ ಸುಡುಬಿಸಿಲಿನಲ್ಲಿ ಅಲೆದಾಡಿ ನೀರಡಿಕೆ, ಹಸಿವಿನಿಂದ ಬಳಲಿದವನಂತಾಗಲಿ ಅಥವಾ ಹೆದರಿದವನಂತಾಗಲಿ ಕಾಣಲಿಲ್ಲ. ಈ ಸಾವಿರಮೈಲು ದೂರದ ಮರಳುಗಾಡಿನಲ್ಲಿ ಈ ಮಗು ದಾರಿತಪ್ಪಿರಬಹುದೆಂಬ ಯಾವುದೇ ಚಿಹ್ನೆ ಆತನಲ್ಲಿ ಕಾಣುತ್ತಿರಲಿಲ್ಲ. ಸಾವರಿಸಿಕೊಂಡು ಕೊನೆಗೆ ಮಾತನಾಡಲು ಸಾಧ್ಯವಾದಾಗ ನಾನು ಆತನನ್ನು ಕೇಳಿದೆ,

'ನೀನಿಲ್ಲಿ ಏನು ಮಾಡುತ್ತಿದ್ದೀಯ?'

ಆತ ಯಾವುದೋ ಮಹತ್ವದ ವಿಷಯದ ಬಗ್ಗೆ ಅತೀವ ಕಾಳಜಿ ಉಳ್ಳವನಂತೆ ನಿಧಾನವಾಗಿ ಮತ್ತೆ ಹೇಳಿದ,

'ದಯವಿಟ್ಟು, ನನಗೊಂದು ಕುರಿಯ ಚಿತ್ರ ಬಿಡಿಸಿಕೊಡು....'

ಯಾವುದಾದರೂ ನಿಗೂಢತೆಯ ಮುಸುಕು ಅತ್ಯಂತ ದಟ್ಟವಾಗಿದ್ದಲ್ಲಿ ಅದನ್ನು ಧಿಕ್ಕರಿಸುವ ಎದೆಗಾರಿಕೆ ಯಾರಿಗೂ ಇರುವುದಿಲ್ಲ. ಮರಳುಗಾಡಿನ ಸಾಗರದಲ್ಲಿ ಸಾವಿನ ಬಾಯಿಯಲ್ಲಿದ್ದ ನಾನು, ನನಗೇ ಅಸಂಬದ್ಧವೆನ್ನಿಸುವ ರೀತಿ ನನ್ನ ಕಿಸೆಯಿಂದ ಹಾಳೆಯೊಂದನ್ನು ಹಾಗೂ ಫೌಂಟನ್‌ಪೆನ್ನನ್ನು ಹೊರತೆಗೆದೆ. ನನ್ನ ವಿದ್ಯಾಭ್ಯಾಸವೆಲ್ಲಾ ಭೂಗೋಳ, ಚರಿತ್ರೆ, ಗಣಿತ ಹಾಗೂ ವ್ಯಾಕರಣದತ್ತ ಕೇಂದ್ರೀಕೃತವಾದದ್ದು ಆಗ ನೆನಪಾಗಿ, ನನಗೆ ಚಿತ್ರ ಬಿಡಿಸಲು ಬರುವುದಿಲ್ಲವೆಂದು ಕೊಂಚ ಸಂಕಟದಿಂದಲೇ ಆ ಪುಟ್ಟ ಮನುಷ್ಯನಿಗೆ ಹೇಳಿದೆ.

'ಪರವಾಗಿಲ್ಲ....... ನನಗೊಂದು ಕುರಿಯ ಚಿತ್ರ ಬಿಡಿಸಿಕೊಡು....' ಎಂದ ಆತ.

ನಾನೆಂದೂ ಕುರಿಯ ಚಿತ್ರ ಬಿಡಿಸಿರಲಿಲ್ಲ. ಹಾಗಾಗಿ ನಾನು ಬಹಳಷ್ಟು ಸಾರಿ ಬಿಡಿಸಿದ್ದ ಎರಡು ಚಿತ್ರಗಳಲ್ಲಿ ಒಂದನ್ನು ಬಿಡಿಸಿದೆ. ಅದು ಹೊರಗಿನಿಂದ ಕಾಣುವ ಹೆಬ್ಬಾವಿನ ಚಿತ್ರ. ಅದನ್ನು ಕಂಡು ಆತ ಹೇಳಿದ ಮಾತು ನನ್ನಲ್ಲಿ ಅತ್ಯಾಶ್ಚರ್ಯ ಉಂಟು ಮಾಡಿತು:

'ಬೇಡ, ಬೇಡ ಆನೆ ನುಂಗಿರುವ ಹೆಬ್ಬಾವಿನ ಚಿತ್ರ ನನಗೆ ಬೇಡ. ಹೆಬ್ಬಾವು ಒಂದು ಅಪಾಯಕಾರಿ ಪ್ರಾಣಿ ಹಾಗೂ ಆನೆ ದೈತ್ಯಾಕಾರದ್ದು. ನಾನು ವಾಸಿಸುವಲ್ಲಿ ಎಲ್ಲವೂ ಚಿಕ್ಕವು. ನನಗೊಂದು ಕುರಿಯ ಚಿತ್ರ ಬಿಡಿಸಿಕೊಡು'.



ನಾನು ಕುರಿಯ ಚಿತ್ರವೊಂದನ್ನು ಬಿಡಿಸಿದೆ.

ಆತ ಅದನ್ನು ಎಚ್ಚರಿಕೆಯಿಂದ ಗಮನಿಸಿ ಹೇಳಿದ:

'ಬೇಡ. ಈ ಕುರಿಗೆ ಆಗಲೇ ಕಾಯಿಲೆ ಬಂದಂತಿದೆ. ಬೇರೊಂದು ಕುರಿಯ ಚಿತ್ರ ಬಿಡಿಸು.' ಮತ್ತೊಂದು ಚಿತ್ರವನ್ನು ಬಿಡಿಸಿದೆ.

ಆ ಚಿತ್ರ ನೋಡಿದ ಆತ ಮುಗುಳ್ನಕ್ಕು, ಮಹಾ ತಾಳ್ಮೆಯುಳ್ಳವನಂತೆ ಹೇಳಿದ:

'ನೋಡಿಲ್ಲಿ. ಇದು ಕುರಿಯಲ್ಲ. ಇದು ಟಗರು. ಇದಕ್ಕೆ ಕೊಂಬುಗಳಿವೆ'.

ಪುನಃ ನಾನು ಮತ್ತೊಂದು ಚಿತ್ರ ಬಿಡಿಸಿದೆ.

'ಇದು ಮುದಿಯಾಗಿದೆ. ನನಗೆ ಬಹಳ ದಿವಸ ಬದುಕಬಲ್ಲ ಕುರಿ ಬೇಕು'! ಅದೂ ತಿರಸ್ಕೃತವಾಯಿತು.

ನನ್ನ ತಾಳ್ಮೆಯ ಎಲ್ಲೆ ಮೀರಿತ್ತು. ನನ್ನ ವಿಮಾನದ ಎಂಜಿನ್ ರಿಪೇರಿಯ ಕೆಲಸ ಪ್ರಾರಂಭಿಸಬೇಕಿತ್ತು. ಈ ಕೆಳಗಿನ ಚಿತ್ರ ಬರೆದು ಆತನ ಕೈಗೆ ಹಾಕಿದೆ.



'ಇದು ಕುರಿಯ ಪೆಟ್ಟಿಗೆ ಮಾತ್ರ. ನೀನು ಕೇಳಿದ ಕುರಿ ಅದರೊಳಗೆ ಇದೆ', ಆ ಚಿತ್ರಕ್ಕೆ ವಿವರಣೆಯೂ ಕೊಟ್ಟೆ.

ನನ್ನ ಪುಟ್ಟ ನ್ಯಾಯಾಧೀಶನ ಮುಖದಲ್ಲಿ ಮಿಂಚು ಕಂಡು ನನಗೆ ಅಚ್ಚರಿಯಾಯಿತು. 'ಇದು ನನಗೆ ಬೇಕಾದ ರೀತಿಯಲ್ಲಿಯೇ ಇದೆ! ಆದರೆ ಈ ಕುರಿಗೆ ಹೆಚ್ಚು ಹುಲ್ಲು ಬೇಕಾಗುತ್ತದೆಯೆ?' ಆತ ಕೇಳಿದ.

'ಏಕೆ?'

'ಏಕೆಂದರೆ, ನಾನಿರುವಲ್ಲಿ ಎಲ್ಲವೂ ಚಿಕ್ಕವು.....'

'ಈ ಕುರಿಗೆ ಬೇಕಾಗುವಷ್ಟು ಹುಲ್ಲು ಅಲ್ಲಿ ಇದ್ದೇ ಇರುತ್ತದೆ. ನಾನು ನಿನಗೆ ಕೊಟ್ಟಿರುವುದು ಬಹಳ ಚಿಕ್ಕ ಕುರಿ', ನಾನು ಹೇಳಿದೆ.

ಆ ಚಿತ್ರದ ಮೇಲೆ ಬಾಗಿ ನೋಡಿದ ಆತ, 'ಅಷ್ಟೇನೂ ಚಿಕ್ಕದಲ್ಲ. ನೋಡು! ಕುರಿ ನಿದ್ದೆ ಮಾಡಿದೆ......'

ಆ ಪುಟ್ಟ ರಾಜಕುಮಾರನೊಂದಿಗೆ ಹೀಗೆ ನನ್ನ ಗೆಳೆತನ ಪ್ರಾರಂಭವಾಯಿತು.

೩

ಆತ ಎಲ್ಲಿಂದ ಬಂದಿದ್ದಾನೆಂಬುದನ್ನು ತಿಳಿದುಕೊಳ್ಳಲು ನನಗೆ ಬಹಳಷ್ಟು ಸಮಯ ಬೇಕಾಯಿತು. ನೂರಾರು ಪ್ರಶ್ನೆಗಳನ್ನು ಕೇಳುತ್ತಿದ್ದ ಆ ಪುಟ್ಟ ರಾಜಕುಮಾರ, ನನ್ನ ಯಾವ ಪ್ರಶ್ನೆಗಳನ್ನೂ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ಆತನ ಮಾತುಗಳಲ್ಲಿ ಅಲ್ಲಲ್ಲಿ ಹೊರಗೆಡಹುತ್ತಿದ್ದ ವಿಷಯಗಳಿಂದ ಸ್ವಲ್ಪ ಸ್ವಲ್ಪವೇ ನಾನು ಆತನ ಬಗ್ಗೆ ಅರಿಯತೊಡಗಿದೆ.

ಉದಾಹರಣೆಗೆ, ಆತ ಮೊದಲ ಬಾರಿಗೆ ನನ್ನ ಏರೋಪ್ಲೇನ್ ಕಂಡಾಗ (ನಾನದರ ಚಿತ್ರ ಬರೆಯುವುದಿಲ್ಲ; ಅದು ನನಗೆ ತುಂಬಾ ಕಷ್ಟಕರ) ಕೇಳಿದ:

'ಆ ವಸ್ತು ಏನು?'

'ಅದು ವಸ್ತುವಲ್ಲ. ಅದು ಹಾರುತ್ತದೆ. ಅದು ಏರೋಪ್ಲೇನ್, ನನ್ನ ಏರೋಪ್ಲೇನ್'.

ನಾನು ಹಾರಬಲ್ಲನೆಂಬುದನ್ನು ಆತನಿಗೆ ತಿಳಿಸಿ ಹೇಳಲು ನನಗೆ ಹೆಮ್ಮೆಯಾಗುತ್ತಿತ್ತು.

ಆತ ಕೂಡಲೆ ಅರಚಿದ: 'ಏನು! ನೀನು ಆಕಾಶದಿಂದ ಇಲ್ಲಿ ಬಿದ್ದೆಯಾ!'

'ಹೌದು' ನಾನು ನಮ್ರನಾಗಿ ಹೇಳಿದೆ.

'ಹೋ! ಎಂಥ ತಮಾಷೆ!'

ಪುಟ್ಟ ರಾಜಕುಮಾರ ಜೋರಾಗಿ ನಕ್ಕ. ಅವನ ನಗು ಮುಗ್ಧ ಮನೋಹರವಾಗಿತ್ತು. ಅದರೆ ನನಗೆ ಕಿರಿಕಿರಿ ಉಂಟುಮಾಡಿತು. ನಿರ್ಜನ ಮರಳುಗಾಡಿನಲ್ಲಿ ವಿಮಾನ ಕೆಟ್ಟು ಬಿದ್ದಿದ್ದವನು ನಾನು. ನನ್ನ ಪರಿಸ್ಥಿತಿ ತಮಾಷೆ ಮಾಡುವಂಥದ್ದಾಗಿರಲಿಲ್ಲ. ನಂತರ ಆತ ಹೇಳಿದ:

'ಹಾಗಾದರೆ ನೀನೂ ಸಹ ಆಕಾಶದಿಂದ ಬಂದವನೆ! ನಿನ್ನ ಗ್ರಹ ಯಾವುದು?'

ಆ ಕ್ಷಣ ಅವನ ಕಣ್ಣಲ್ಲಿ ತನ್ನ ಅಸ್ತಿತ್ವದ ನಿಗೂಢತೆಯ ಹೊಳಪನ್ನು ಕಂಡೆ; ಕೂಡಲೆ ನಾನೂ ಕೇಳಿದೆ:

'ನೀನು ಬೇರೊಂದು ಗ್ರಹದಿಂದ ಬಂದವನೆ?'

ಆತ ಉತ್ತರಿಸಲೇ ಇಲ್ಲ. ನನ್ನ ಏರೋಪ್ಲೇನಿನ ಮೇಲೆ ನೆಟ್ಟ ದೃಷ್ಟಿ ನೆಟ್ಟಂತೆಯೇ,

'ಆ ವಾಹನದಲ್ಲಿ ನೀನು ಬಹಳ ದೂರದಿಂದ ಬಂದಿರಲು ಸಾಧ್ಯವೇ ಇಲ್ಲ....... ' ಎಂದು ಹೇಳಿ ಯಾವುದೋ ಧ್ಯಾನಪ್ರಪಂಚ ಪ್ರವೇಶಿಸಿದ. ಬಹಳ ಹೊತ್ತಿನ ಬಳಿಕ ತನ್ನ ಕಿಸೆಯಿಂದ ನಾನು ಬರೆದ ಕುರಿಯ ಚಿತ್ರ ಹೊರತೆಗೆದು ಅದು ತನ್ನ ಅತ್ಯಮೂಲ್ಯ ಆಸ್ತಿ ಎಂಬಂತೆ ಅದನ್ನೇ ನೋಡತೊಡಗಿದ.

ಅವನು ಹೇಳಿದ 'ಬೇರೊಂದು ಗ್ರಹ' ಎಂಬ ಮಾತಿನಿಂದ ನನ್ನ ಕುತೂಹಲ ಹೇಗೆ ಜಾಗೃತಗೊಂಡಿರಬಹುದು ಎಂದು ನೀವು ಊಹಿಸಿಕೊಳ್ಳಬಹುದು. ಈ ವಿಷಯದ ಬಗ್ಗೆ ಇನ್ನಷ್ಟು ತಿಳಿಯಲು ನಾನು ಬಹಳ ಪ್ರಯತ್ನಿಸಿದೆ.

'ನನ್ನ ಪುಟ್ಟ ಮನುಷ್ಯನೆ, ನೀನು ಬಂದಿರುವುದು ಎಲ್ಲಿಂದ? ನಾನಿರುವೆಡೆಯಲ್ಲಿ ಎನ್ನುತ್ತೀಯಲ್ಲ ಆ ಸ್ಥಳ ಯಾವುದು? ಈ ಕುರಿಯನ್ನು ನೀನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು?'

ಅವನು ಅಂತರ್ಮುಖನಾದ. ದೀರ್ಘಮೌನದ ನಂತರ ಆತ ಹೇಳಿದ,

'ನನಗೆ ಕೊಟ್ಟಿರುವ ಈ ಪೆಟ್ಟಿಗೆಯ ಮತ್ತೊಂದು ಅನುಕೂಲವೆಂದರೆ, ರಾತ್ರಿ ಹೊತ್ತು ಕುರಿ ಅದನ್ನು ತನ್ನ ಮನೆಯಾಗಿ ಮಾಡಿಕೊಳ್ಳಬಹುದು'.

'ಹೌದೇನು? ನೀನು ಒಳ್ಳೆಯವನಾದಲ್ಲಿ ಒಂದು ಹಗ್ಗ ಹಾಗೂ ಗೂಟವನ್ನೂ ಕೊಡುತ್ತೇನೆ. ಹಗಲುಹೊತ್ತು ನೀನು ಕುರಿಯನ್ನು ಕಟ್ಟಿಹಾಕಬಹುದು'.

ನನ್ನ ಮಾತಿನಿಂದಾಗಿ ಪುಟ್ಟ ರಾಜಕುಮಾರನಿಗೆ ಸಂತೋಷವಾಗುವುದರ ಬದಲಿಗೆ ಅಘಾತವಾದಂತಾಯಿತು. 'ಕಟ್ಟಿಹಾಕಬೇಕೆ? ಎಂಥ ವಿಚಿತ್ರ ಆಲೋಚನೆ!' ಎಂದ.

'ಹೌದು, ನೀನದನ್ನು ಕಟ್ಟಿ ಹಾಕದಿದ್ದಲ್ಲಿ, ಅಲ್ಲಿ ಇಲ್ಲಿ ಹೋಗಿ ಅದು ಕಳೆದುಹೋಗಬಹುದು'.

ಮತ್ತೊಮ್ಮೆ ನನ್ನ ಗೆಳೆಯ ನಗುವಿನ ಅಲೆಯನ್ನೇ ಉಕ್ಕಿಸಿದ.

'ಆ ಕುರಿ ಎಲ್ಲಿಗೆ ಹೋಗಬಹುದು ಎಂದುಕೊಂಡಿದ್ದೀಯ?'

'ಎಲ್ಲಿಗಾದರೂ..... ಅದರ ಕಾಲು ಎಳೆದೊಯ್ಯುವ ಕಡೆಗೆ'. ಪುಟ್ಟ ರಾಜಕುಮಾರ ಶಾಂತವಾಗಿ ಹೇಳಿದ,

'ಅದು ಸಮಸ್ಯೆಯಲ್ಲ. ಏಕೆಂದರೆ ನಾನಿರುವಲ್ಲಿ ಎಲ್ಲವೂ ಬಹಳ ಚಿಕ್ಕದಾಗಿದೆ'.

ನಂತರ ಒಂದು ರೀತಿಯ ದುಃಖಭರಿತ ಧ್ವನಿಯಲ್ಲಿ ಹೇಳಿದ, 'ಅದರ ಕಾಲು ಎಳೆದೊಯ್ಯುವ ಕಡೆ ಹೋದರೂ ಅದು ತುಂಬಾ ದೂರ ಹೋಗಲಾರದು......'

೪

ಈ ಮಾತುಕತೆಯಿಂದ ನಾನು ಮತ್ತೊಂದು ಬಹಳ ಮುಖ್ಯ ವಿಷಯವನ್ನು ಅರಿತೆ: ಈ ಪುಟ್ಟ ರಾಜಕುಮಾರ ಬಂದಿರುವ ಗ್ರಹ ಒಂದು ಮನೆಗಿಂತ ದೊಡ್ಡದಲ್ಲ!

ಆದರೆ ನನಗೆ ಅದರಿಂದ ಅಚ್ಚರಿಯೇನೂ ಆಗಲಿಲ್ಲ. ಏಕೆಂದರೆ ನಮ್ಮ ಕಣ್ಣಿಗೆ ಬೀಳುವ ಹಾಗೂ ನಾವು ಹೆಸರು ಕೊಟ್ಟಿರುವಂತಹ ಭೂಮಿ, ಗುರು, ಮಂಗಳ, ಶುಕ್ರ ಗ್ರಹಗಳೇ ಅಲ್ಲದೆ ಜೊತೆಗೆ ದೂರದರ್ಶಕದಲ್ಲಿಯೂ ಕಾಣದಂತಹ ನೂರಾರು ಕ್ಷುದ್ರಗ್ರಹ(Asteroid)ಗಳಿವೆಯೆಂದು ನನಗೆ ಗೊತ್ತಿತ್ತು. ಯಾರಾದರೂ ಖಗೋಳವಿಜ್ಞಾನಿ ಕ್ಷುದ್ರಗ್ರಹವೊಂದನ್ನು ಕಂಡು ಹಿಡಿದಾಗ ಆತ ಅದಕ್ಕೆ ಯಾವುದೇ ಹೆಸರಿಡುವುದಿಲ್ಲ, ಬದಲಿಗೆ 'ಕ್ಷುದ್ರಗ್ರಹ 325' ಎನ್ನಬಹುದು.

ಈ ಪುಟ್ಟ ರಾಜಕುಮಾರ ಬಿ–612 ಎನ್ನುವ ಕ್ಷುದ್ರಗ್ರಹದಿಂದ ಬಂದಿದ್ದಾನೆಂದು ನಂಬಲು ನನ್ನಲ್ಲಿ ಬಲವಾದ ಕಾರಣವಿದೆ.

ಈ ಕ್ಷುದ್ರಗ್ರಹ ದೂರದರ್ಶಕದ ಮೂಲಕ ಒಂದೇ ಒಂದು ಸಾರಿ ಕಣ್ಣಿಗೆ ಬಿದ್ದಿದೆ. ಅದು 1909ರಲ್ಲಿ, ಒಬ್ಬ ಟರ್ಕಿ ದೇಶದ ಖಗೋಳ ವಿಜ್ಞಾನಿಗೆ.

ತನ್ನ ಆವಿಷ್ಕಾರವನ್ನು ಅತ್ಯಂತ ಸಂಭ್ರಮದಿಂದ ಆತ ಅಂತರರಾಷ್ಟ್ರೀಯ ಖಗೋಳವಿಜ್ಞಾನ ಸಮಾವೇಶದಲ್ಲಿ ವಿವರಿಸಿದ್ದ. ಆದರೆ ಅತ ತನ್ನ ಟರ್ಕಿ ದೇಶದ ಉಡುಗೆ ತೊಟ್ಟಿದ್ದುದರಿಂದ ಆತನ ಮಾತನ್ನು ಯಾರೂ ನಂಬಲಿಲ್ಲ. ದೊಡ್ಡವರೇ ಹಾಗೆ..........

ಅದೃಷ್ಟವಶಾತ್, ಟರ್ಕಿಯ ಆಗಿನ ಸರ್ವಾಧಿಕಾರಿಯೊಬ್ಬ ತನ್ನ ಪ್ರಜೆಗಳೆಲ್ಲ ಯುರೋಪಿಯನ್ ಉಡುಗೆ ಧರಿಸಬೇಕು ಇಲ್ಲದಿದ್ದರೆ ಸಾವಿನ ಶಿಕ್ಷೆಯಾಗುತ್ತದೆ ಎಂಬ ಆಜ್ಞೆ ಹೊರಡಿಸಿದ. ಹಾಗಾಗಿ ಅದೇ ಖಗೋಳ ವಿಜ್ಞಾನಿ 1920ರಲ್ಲಿ ಆಕರ್ಷಕ ಹಾಗೂ ಸೊಬಗಿನ ಉಡುಗೆ ಧರಿಸಿ ತಾನು ಕಂಡು ಹಿಡಿದ ಕ್ಷುದ್ರಗ್ರಹದ ಬಗ್ಗೆ ವಿವರ ನೀಡಿದಾಗ ಎಲ್ಲರೂ ಆ ಕ್ಷುದ್ರಗ್ರಹ ಬಿ–612ರ ಅಸ್ತಿತ್ವವನ್ನು ಒಪ್ಪಿಕೊಂಡಿದ್ದರು.

ನಾನು ನಿಮಗೆ ಆ ಕ್ಷುದ್ರಗ್ರಹದ ಈ ವಿವರಗಳನ್ನು ಹಾಗೂ ಅದರ ಗುರುತಿನ ಸಂಖ್ಯೆಯನ್ನು ಹೇಳುತ್ತಿದ್ದೇನೆಂದರೆ ನಾನು ದೊಡ್ಡವರ ರೀತಿ ನೀತಿ ವಿಧಾನಗಳನ್ನು ಅನುಸರಿಸುತ್ತಿದ್ದೇನೆ ಎಂದು ಅಲ್ಲ. ದೊಡ್ಡವರಿಗೆ ಅಂಕಿಸಂಖ್ಯೆಗಳೆಂದರೆ ಬಹಳ ಇಷ್ಟ. ನಿಮಗೆ ಯಾರಾದರೂ



ಹೊಸ ಗೆಳೆಯರು ದೊರೆತ ವಿಷಯ ಅವರಿಗೆ ತಿಳಿಸಿದರೆ, ಅವರು ಅತ್ಯವಶ್ಯಕ ವಿಷಯಗಳ ಬಗ್ಗೆ ವಿಚಾರಿಸುವುದೇ ಇಲ್ಲ. 'ಆತನ ಧ್ವನಿ ಹೇಗಿದೆ? ಆತನಿಗೆ ಯಾವ್ಯಾವ ಆಟಗಳೆಂದರೆ ಇಷ್ಟ? ಆತ ಚಿಟ್ಟೆಗಳನ್ನು ಸಂಗ್ರಹಿಸುತ್ತಾನೆಯೆ?' ಎಂಬುದನ್ನು ಅವರು ಕೇಳುವುದೇ ಇಲ್ಲ.



ಬದಲಿಗೆ, 'ಆತನ ವಯಸ್ಸೆಷ್ಟು? ಆತನಿಗೆಷ್ಟು ಜನ ಅಣ್ಣತಮ್ಮಂದಿರು? ಆತನ ತೂಕವೆಷ್ಟು? ಆತನ ತಂದೆ ಎಷ್ಟು ಹಣ ಸಂಪಾದಿಸುತ್ತಾರೆ?' ಎಂಬ ಪ್ರಶ್ನೆಗಳನ್ನೇ ಕೇಳುತ್ತಾರೆ. ಈ ರೀತಿಯ ಅಂಕಿಅಂಶಗಳಿಂದಲೇ ಮನುಷ್ಯರನ್ನು ಅರಿಯಬಹುದೆಂಬ ಭಾವನೆ ಅವರದು.

ನೀವೇನಾದರು ದೊಡ್ಡವರಿಗೆ, 'ಗುಲಾಬಿ ಬಣ್ಣದ ಇಟ್ಟಿಗೆಗಳಿಂದ ಕಟ್ಟಿದ, ಕಿಟಕಿಗಳಲ್ಲಿ ಜಿರೇನಿಯಂ ಹೂಗಳಿರುವ ಹಾಗೂ ಮಚ್ಚಿನ ಮೇಲೆ ಪಾರಿವಾಳಗಳು ಕೂತಿರುವ ಸುಂದರ ಮನೆ ನೋಡಿದೆ' ಎಂದು ಹೇಳಿದರೆ, ಅವರಿಗೆ ಆ ಮನೆ ಹೇಗಿರಬಹುದೆಂದು ಊಹಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ. ಅದೇ ನೀವು 4000 ಪೌಂಡ್‌ಗಳ ಒಂದು ಮನೆ ನೋಡಿದೆ' ಎಂದು ಹೇಳಿದಲ್ಲಿ, 'ವಾಹ್! ಎಷ್ಟು ಸುಂದರ ಮನೆ!' ಎಂದು ಉದ್ಗರಿಸುತ್ತಾರೆ.

ಅದೇ ರೀತಿ, 'ಪುಟ್ಟ ರಾಜಕುಮಾರ ಅಸ್ತಿತ್ವದಲ್ಲಿದ್ದಾನೆನ್ನಲು ಆತ ಮುದ್ದಾಗಿರುವುದು, ಮುಗ್ಧನಗು ಹೊಂದಿರುವುದು ಹಾಗೂ ಒಂದು ಕುರಿಯನ್ನು ಹುಡುಕುತ್ತಿರುವುದೇ ಸಾಕ್ಷಿ. ಆತನಿಗೆ ಕುರಿಯೊಂದು ಬೇಕಾಗಿರುವುದೇ ಆತ ಅಸ್ತಿತ್ವದಲ್ಲಿದ್ದಾನೆನ್ನಲು ಸಾಕ್ಷಿ' ಎಂದು ಯಾರಾದರೂ ದೊಡ್ಡವರಿಗೆ ಹೇಳಿದಲ್ಲಿ ಅವರಿಗೇನನ್ನಿಸುತ್ತದೆ? ಅವರು ಸುಮ್ಮನೆ ಭುಜ ಕುಣಿಸಿ ನಿಮ್ಮನ್ನು ಪ್ರಪಂಚ ಜ್ಞಾನವಿಲ್ಲದ ಚಿಕ್ಕಮಗುವೆಂದು ಭಾವಿಸುತ್ತಾರೆ. ಅದೇ ನೀವು, 'ಆತ ಬಂದಿರುವುದು ಬಿ–612 ಎಂಬ ಕ್ಷುದ್ರಗ್ರಹದಿಂದ' ಎಂದಲ್ಲಿ ಅವರ ಎಲ್ಲಾ ಸಂಶಯಗಳು ಪರಿಹಾರವಾಗಿ, ಪುಟ್ಟ ರಾಜಕುಮಾರನಿರುವುದು ಮನದಟ್ಟಾಗಿ ಹೆಚ್ಚಿನ ಪ್ರಶ್ನೆಗಳನ್ನು ಕೇಳದೆ ಸುಮ್ಮನಾಗುತ್ತಾರೆ.

ದೊಡ್ಡವರೇ ಹಾಗೆ. ಅವರಿಗೆ ಏನೂ ಎದುರು ಹೇಳಬಾರದು. ಮಕ್ಕಳು ದೊಡ್ಡವರ ಬಳಿ ಆದಷ್ಟು ತಾಳ್ಮೆಯಿಂದ ಇರಬೇಕು.

ಆದರೆ ಬದುಕನ್ನು ಅರಿತಿರುವ ನಮ್ಮಂತಹವರಿಗೆ ಅಂಕಿಸಂಖ್ಯೆಗಳು ಏನೂ ಅನ್ನಿಸುವುದಿಲ್ಲ. ನಾನು ಈ ಕತೆಯನ್ನು ಯಕ್ಷಿಣಿ ಕತೆಯ ರೀತಿ ಪ್ರಾರಂಭಿಸಬೇಕೆಂದಿದ್ದೆ. 'ಒಂದಾನೊಂದು ಕಾಲದಲ್ಲಿ ಒಬ್ಬ ಪುಟ್ಟ ರಾಜಕುಮಾರನಿದ್ದ. ಆತ ತನಗಿಂತ ತುಸು ದೊಡ್ಡದಾದ ಕ್ಷುದ್ರ ಗ್ರಹವೊಂದರ ಮೇಲೆ ವಾಸಿಸುತ್ತಿದ್ದ ಹಾಗೂ ಆತನಿಗೆ ಗೆಳೆಯನೊಬ್ಬನ ಅವಶ್ಯಕತೆ ಇತ್ತು.........' ಹೀಗೆ ನನ್ನ ಕತೆಯನ್ನು ಪ್ರಾರಂಭಿಸಲು ಇಷ್ಟವಿತ್ತು.

ಬದುಕನ್ನು ಅರಿತವರಿಗೆ ನನ್ನ ಕತೆ ಹೆಚ್ಚು ವಾಸ್ತವ ಎನ್ನಿಸುತ್ತಿತ್ತು.

ಏಕೆಂದರೆ ಯಾರೂ ನನ್ನ ಪುಸ್ತಕವನ್ನು ತಾತ್ಸಾರದಿಂದ, ನಿರ್ಲಕ್ಷ್ಯದಿಂದ ಓದಬಾರದು. ನನ್ನ ನೆನಪುಗಳನ್ನು ಇಲ್ಲಿ ದಾಖಲಿಸುವಾಗ ಬಹಳಷ್ಟು ನೋವು ಅನುಭವಿಸಿದ್ದೇನೆ. ನನ್ನ ಪುಟ್ಟ ಗೆಳೆಯ ತನ್ನ ಕುರಿಯೊಂದಿಗೆ ಹೊರಟುಹೋಗಿ ಆರು ವರ್ಷಗಳೇ ಕಳೆದಿವೆ. ಆತನನ್ನು ವಿವರಿಸುವ ನನ್ನ ಪ್ರಯತ್ನದ ಅರ್ಥವೆಂದರೆ ನಾನು ಆತನನ್ನು ಮರೆತಿಲ್ಲವೆಂಬುದು. ಗೆಳೆಯನೊಬ್ಬನನ್ನು ಮರೆಯುವುದು ಅತ್ಯಂತ ನೋವಿನ ವಿಷಯ. ಎಲ್ಲರಿಗೂ ಗೆಳೆಯರಿರುವುದಿಲ್ಲ. ನಾನೇನಾದರೂ ಆತನನ್ನು ಮರೆತಲ್ಲಿ ನಾನೂ ಸಹ ಎಲ್ಲ ದೊಡ್ಡವರಂತೆ, ಅಂಕಿಅಂಶಗಳನ್ನು ಬಿಟ್ಟು ಮತ್ತಾವುದರಲ್ಲೂ ಆಸಕ್ತಿ ಇಲ್ಲದವನಂತಾಗಿ ಬಿಡುತ್ತೇನೆ.

ಆ ಉದ್ದೇಶಕ್ಕಾಗಿಯೇ ನಾನು ಬಣ್ಣಗಳ ಒಂದು ಪೆಟ್ಟಿಗೆ ಹಾಗೂ ಕೆಲವು ಪೆನ್ಸಿಲ್‌ಗಳನ್ನು ಮತ್ತೆ ತಂದಿದ್ದೇನೆ. ನಾನು ಆರು ವರ್ಷದವನಾಗಿದ್ದಾಗ ಹಾವು ಹೊರಗಿನಿಂದ ಕಾಣುವಂತೆ ಹಾಗೂ ಅದನ್ನೇ ಅದರ ಒಳಭಾಗ ಕಾಣುವಂತೆ ಚಿತ್ರ ಬಿಡಿಸಿದ್ದನ್ನು ಬಿಟ್ಟರೆ ಮತ್ತೆಂದೂ ಚಿತ್ರ ಬರೆದಿರಲಿಲ್ಲ. ಈಗ ಈ ವಯಸ್ಸಿನಲ್ಲಿ ಮತ್ತೆ ಚಿತ್ರ ರಚನೆ ಆರಂಭಿಸುವುದು ಕಷ್ಟದ ಕೆಲಸವೆ. ನನ್ನ ಚಿತ್ರಗಳು ಆದಷ್ಟೂ ವಾಸ್ತವವಾಗಿರುವಂತೆ ರಚಿಸಲು ಖಂಡಿತಾ ಪ್ರಯತ್ನಿಸುತ್ತೇನೆ. ಆದರೆ ಯಶಸ್ಸಿನ ಬಗೆಗೆ ನನಗೆ ನಂಬಿಕೆಯೇ ಇಲ್ಲ. ಮೊದಲನೆ ಚಿತ್ರ ಚೆನ್ನಾಗಿ ಬರುತ್ತದೆ. ಆದರೆ, ಎರಡನೆಯದು, ಅದೇನೆಂದು ಗುರುತು ಸಿಗದಂತಿರುತ್ತದೆ. ಪುಟ್ಟ ರಾಜಕುಮಾರನನ್ನು ಚಿತ್ರಿಸುವಾಗ ಆತನ ಎತ್ತರಕ್ಕೆ ಸಂಬಂಧಪಟ್ಟಂತೆ ಹಲವು ತಪ್ಪುಗಳನ್ನು ಮಾಡಿದ್ದೇನೆ: ಕೆಲವು ಚಿತ್ರಗಳಲ್ಲಿ ಆತ ತೀರಾ ಉದ್ದವಾಗಿದ್ದಾನೆ, ಇನ್ನು ಕೆಲವು ಚಿತ್ರಗಳಲ್ಲಿ ತೀರ ಕುಳ್ಳಗಿದ್ದಾನೆ. ಚಿತ್ರದಲ್ಲಿನ ಆತನ ಉಡುಗೆಯ ಬಣ್ಣದ ಬಗ್ಗೆಯೂ ನನಗೆ ಸಂಶಯವಿದೆ. ಆದರೂ ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಒಳ್ಳೆಯ ಚಿತ್ರ ರಚಿಸಲು ಶತಪ್ರಯತ್ನ ನಡೆಸುತ್ತಿದ್ದೇನೆ. ಕೆಲವು ಉತ್ತಮ, ಕೆಲವು ಕಳಪೆ– ಒಟ್ಟಿನಲ್ಲಿ ಸರಾಸರಿ ಚಿತ್ರಗಳು.

ಕೆಲವು ಮುಖ್ಯ ವಿಷಯಗಳಲ್ಲೂ ನಾನು ತಪ್ಪು ಮಾಡಿದ್ದೇನೆ. ಆದರೆ ಅದಕ್ಕೆ ನಾನು ಕಾರಣನಲ್ಲ. ನನ್ನ ಗೆಳೆಯ ನನಗೆ ಏನನ್ನೂ ವಿವರಿಸಿ ಹೇಳಿಲ್ಲ. ನಾನೂ ಸಹ ಆತನ ಹಾಗೆ ಇದ್ದೇನೆಂದು ಆತ ಭಾವಿಸಿದ್ದಿರಬಹುದು. ಆದರೆ ನನಗೆ, ಮುಚ್ಚಿರುವ ಪೆಟ್ಟಿಗೆಯ ಚಿತ್ರದೊಳಗಿರುವ ಕುರಿಯನ್ನು ಕಾಣಲು ಸಾಧ್ಯವಿಲ್ಲ. ಬಹುಶಃ ನಾನು ಸ್ವಲ್ಪ ದೊಡ್ಡವರ ಹಾಗಾಗಿರಬಹುದು. ಆದರೆ....ನಾನು ಬೆಳೆದು ದೊಡ್ಡವನಾಗಲೇ ಬೇಕಿತ್ತು.

5

ದಿನಗಳು ಕಳೆದಂತೆ ನಮ್ಮ ನಡುವಿನ ಮಾತುಗಳಿಂದ ಪುಟ್ಟ ರಾಜಕುಮಾರನ ಗ್ರಹದ ಬಗೆಗೆ, ಅಲ್ಲಿಂದ ಆತ ಹೊರಟ ಬಗೆಗೆ, ಆತನ ಪ್ರಯಾಣದ ಬಗೆಗೆ ಸ್ವಲ್ಪಸ್ವಲ್ಪವೇ ಅರಿಯತೊಡಗಿದೆ. ಮಾಹಿತಿ ಚೂರು ಚೂರೇ ದೊರೆಯುತ್ತಿತ್ತು. ಆತನ ಆಲೋಚನೆಗಳಿಂದ ಅಕಸ್ಮಾತ್ ಉದುರಿಬೀಳುವ ಹಾಗೆ. ಮೂರನೇ ದಿನ ನಾನು ಆನೆಹುಣಿಸೆ ಮರಗಳ ದುರಂತದ ಬಗೆಗೆ ಕೇಳಿದ್ದು ಹೀಗೆಯೇ.

ಅದಕ್ಕೆ ನಾನು ಆ ಕುರಿಯನ್ನು ವಂದಿಸಬೇಕು. ಏಕೆಂದರೆ, ಮಾತಿನ ನಡುವೆ ಪುಟ್ಟ ರಾಜಕುಮಾರ ಇದ್ದಕ್ಕಿದ್ದಂತೆ ಕೇಳಿದ, 'ಕುರಿ ಚಿಕ್ಕಚಿಕ್ಕ ಪೊದೆಗಳನ್ನು ತಿನ್ನುತ್ತದೆಯಲ್ಲವೆ?' ಅವನ ಮಾತಿನಲ್ಲಿ ಸಂಶಯ ತುಂಬಿತ್ತು.

'ಹೌದು'

'ಹಾ! ನನಗೆ ಸಂತೋಷವಾಗುತ್ತಿದೆ!'

ಕುರಿ ಚಿಕ್ಕಚಿಕ್ಕ ಪೊದೆಗಳನ್ನು ತಿನ್ನುವುದು ಅಷ್ಟು ಮುಖ್ಯವಾದ ವಿಷಯ ಹೇಗೆಂದು ನನಗರ್ಥವಾಗಲಿಲ್ಲ. ಆದರೆ ಪುಟ್ಟ ರಾಜಕುಮಾರ ತನ್ನ ಮಾತು ಮುಂದುವರಿಸಿದ:

'ಪೊದೆಗಳನ್ನು ತಿನ್ನುವ ಹಾಗಿದ್ದರೆ ಆನೆಹುಣಿಸೆ ಮರಗಳನ್ನು ತಿನ್ನುತ್ತದೆಯಲ್ಲವೆ?'

ಆನೆಹುಣಿಸೆ ಮರಗಳು ಪೊದೆಗಳಲ್ಲವೆಂದೂ, ಅವು ಅರಮನೆ ಎತ್ತರದ ದೊಡ್ಡ ಮರಗಳೆಂದೂ; ಆನೆಯ ಇಡೀ ಹಿಂಡನ್ನೇ ಕರೆದುತಂದರೂ ಅವುಗಳಿಂದ ಒಂದು ಆನೆಹುಣಿಸೆ ಮರವನ್ನೂ ತಿನ್ನಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆ.



ಆನೆಯ ಹಿಂಡಿನ ವಿಷಯ ಪುಟ್ಟ ರಾಜಕುಮಾರನನ್ನು ನಗುವಂತೆ ಮಾಡಿತು.

'ಆನೆಗಳನ್ನು ಒಂದರ ಮೇಲೆ ಮತ್ತೊಂದನ್ನು ನಿಲ್ಲಿಸಬೇಕಾಗುತ್ತದೆ', ಆತ ನಗುತ್ತಾ ಹೇಳಿದ.

ಆದರೆ ಒಂದು ಜಾಣ್ಮೆಯ ಮಾತನ್ನೂ ಹೇಳಿದ:

'ಆನೆಹುಣಿಸೆ ಮರಗಳು ದೊಡ್ಡವಾಗುವ ಮೊದಲು ಚಿಕ್ಕ ಸಸಿಯಾಗೇ ಆರಂಭವಾಗುತ್ತವೆ'.

'ಅದಂತೂ ನಿಜ' ನಾನು ಹೇಳಿದೆ. 'ಆದರೆ ಕುರಿ ಆನೆಹುಣಿಸೆ ಸಸಿಗಳನ್ನು ತಿನ್ನಬೇಕೆಂದು ಏಕೆ ಬಯಸುತ್ತೀಯೆ?'

ಆತ ಕೂಡಲೆ, 'ಹೋ! ಬಿಡು, ಬಿಡು!' ಎಂದ. ಇವೆಲ್ಲ ತನ್ನಷ್ಟಕ್ಕೆ ತಾನೇ ಅರ್ಥವಾಗುವ ವಿಷಯವೆಂಬಂತೆ. ಈ ಸಮಸ್ಯೆಯನ್ನು ಯಾವುದೇ

ಸಹಾಯವಿಲ್ಲದೆ ಅರ್ಥಮಾಡಿಕೊಳ್ಳುವ ಬೌದ್ಧಿಕ ಪ್ರಯತ್ನ ನಡೆಸುವುದು ನನಗೆ ಅನಿವಾರ್ಯವಾಯಿತು.

ಪುಟ್ಟ ರಾಜಕುಮಾರ ವಾಸಿಸುವ ಗ್ರಹದ ಮೇಲೂ ಇತರ ಎಲ್ಲ ಗ್ರಹಗಳಲ್ಲಿರುವ ಹಾಗೆಯೇ ಕೆಟ್ಟ ಹಾಗೂ ಒಳ್ಳೆಯ ಮರಗಳಿವೆ ಎಂಬುದನ್ನೂ ನಿಧಾನವಾಗಿ ಅರಿತೆ. ಒಳ್ಳೆಯ ಸಸ್ಯಗಳಿಂದ ಒಳ್ಳೆಯ ಬೀಜಗಳೂ ಹಾಗೂ ಕೆಟ್ಟ ಸಸ್ಯಗಳಿಂದ ಕೆಟ್ಟ ಬೀಜಗಳೂ ಉತ್ಪತ್ತಿಯಾಗುತ್ತವೆ. ಆದರೆ ಬೀಜಗಳು ಕಣ್ಣಿಗೆ ಬೀಳುವುದಿಲ್ಲ; ಅವು ಭೂಗರ್ಭದ ಕತ್ತಲ ನಾಡಿನಲ್ಲಿ ಸುಪ್ತವಾಗಿ ನಿದ್ರಿಸುತ್ತಿರುತ್ತವೆ. ಕೊನೆಗೊಂದು ದಿನ ಅವಗಳಲ್ಲೊಂದಕ್ಕೆ ಎಚ್ಚರವಾಗಿ ಮೊಳಕೆಯೊಡೆಯುವ ಮಹತ್ವಾಕಾಂಕ್ಷೆ ಉಂಟಾಗಬಹುದು. ಆ ಪುಟ್ಟ ಬೀಜ ಆಕಳಿಸಿ ಮೈಮುರಿದು ಮೊದಲಿಗೆ ಬಹಳ ನಮ್ರತೆಯಿಂದ ಮಣ್ಣು ಸರಿಸಿ ಸೂರ್ಯನ ಕಡೆಗೆ ಕೈ ಚಾಚುತ್ತದೆ. ಅದು ಮೂಲಂಗಿಯದೋ ಅಥವಾ ಗುಲಾಬಿಯ ಚಿಗುರೋ ಆಗಿದ್ದಲ್ಲಿ ಎಲ್ಲೆಂದರಲ್ಲಿ ಬೆಳೆಯಲು ಅದಕ್ಕೇನೂ ತೊಡಕುಂಟಾಗುವುದಿಲ್ಲ. ಅದೇ ಕೆಟ್ಟ ಸಸಿಯಾಗಿದಲ್ಲಿ ಅದರ ಮೊಳಕೆ ಕಂಡ ತಕ್ಷಣ ಅದನ್ನು ನಾಶ ಮಾಡಬೇಕಾಗುತ್ತದೆ.

ಈಗ ಪುಟ್ಟ ರಾಜಕುಮಾರನ ಗ್ರಹದಲ್ಲಿ ಕೆಲವು ಭಯಂಕರ ಬೀಜಗಳು ಕಾಣಿಸಿಕೊಂಡಿದ್ದವು; ಅವೇ ಆನೆಹುಣಿಸೆ ಬೀಜಗಳು. ಆ ಗ್ರಹದ ಮಣ್ಣೆಲ್ಲ ಆ ಬೀಜಗಳಿಂದ ತುಂಬಿತ್ತು. ನೀವು ಉದಾಸೀನ ಮಾಡಿದಲ್ಲಿ ಅವುಗಳಿಂದ ಬಿಡುಗಡೆ ಹೊಂದುವುದೇ ಸಾಧ್ಯವಾಗುವುದಿಲ್ಲ. ಸ್ವಲ್ಪ ದಿನಗಳಲ್ಲೇ ಇಡೀ ಗ್ರಹವನ್ನು ಆವರಿಸಿಕೊಂಡು ತನ್ನ ಬೇರುಗಳಿಂದ ಗ್ರಹವನ್ನು ಕೊರೆದುಬಿಡುತ್ತವೆ. ಗ್ರಹ ತುಂಬಾ ಚಿಕ್ಕದಾಗಿದ್ದರಂತೂ ಚೂರುಚೂರಾಗಿಬಿಡುತ್ತದೆ.

'ಅದೊಂದು ರೀತಿಯ ಶಿಸ್ತಿನ ನಡವಳಿಕೆ', ನಂತರ ಪುಟ್ಟ ರಾಜಕುಮಾರ ಹೇಳಿದ್ದ. 'ಬೆಳಿಗ್ಗೆ ನಿಮ್ಮ ಶೌಚಕಾರ್ಯಗಳನ್ನು ಮುಗಿಸಿಕೊಂಡ ನಂತರ, ನಿಮ್ಮ ಗ್ರಹದ ಶೌಚಕಾರ್ಯದ ಬಗ್ಗೆ ಗಮನ ಹರಿಸಬೇಕು, ಅದರ ಆರೈಕೆ ಮಾಡಬೇಕು. ಗುಲಾಬಿ ಸಸಿಗಳ ಹಾಗೇ ಕಾಣುವ ಆನೆಹುಣಿಸೆ ಸಸಿಗಳನ್ನು ಗುರುತಿಸಿದ ತಕ್ಷಣವೇ ಕಿತ್ತೆಸೆಯಬೇಕು. ಇದು ಒಂದು ರೀತಿಯ ಬೇಸರದ ಕೆಲಸ, ಆದರೆ ಅಷ್ಟೇ ಸುಲಭದ ಕೆಲಸ'.

ಮತ್ತೊಂದು ದಿನ ಆತ ಹೇಳಿದ: 'ಆನೆಹುಣಿಸೆ ಮರದ ಒಂದು ಚಿತ್ರ ರಚಿಸು, ಅದು ಹೇಗಿದೆಯೆಂದು ಮಕ್ಕಳೆಲ್ಲಾ ನೋಡಲಿ. ಎಂದಾದರೊಂದು ದಿನ ಅವರು ಆ ಗ್ರಹಕ್ಕೆ ಪ್ರಯಾಣ ಮಾಡಿದರೆ ಚಿತ್ರದ ನೆನಪು ಅವರಿಗೆ ಉಪಯೋಗಕ್ಕೆ ಬರಬಹುದು'. ಹಾಗೆಯೇ ಮುಂದುವರಿಸಿದ, 'ಮತ್ತೊಂದು ದಿನದವರೆಗೂ ಯಾವುದಾದರೂ ಕೆಲಸವನ್ನು ಮುಂದೂಡುವುದರಿಂದ ಏನೂ

ತೊಂದರೆಯಾಗುವುದಿಲ್ಲ. ಆದರೆ ಆನೆಹುಣಿಸೆಯ ವಿಷಯ ಹಾಗಲ್ಲ– ಆ ರೀತಿ ಕೆಲಸ ಮುಂದೂಡಿದಲ್ಲಿ ಮುಂದೆ ದುರಂತವೇ ಕಾದಿರುತ್ತದೆ. ಗ್ರಹವೊಂದರಲ್ಲಿದ್ದ ಒಬ್ಬ ಸೋಮಾರಿಯ ಕತೆ ನನಗೆ ಗೊತ್ತಿದೆ. ಆತ ಈ ರೀತಿ ಆನೆಹುಣಿಸೆಯ ಸಣ್ಣ ಮೂರು ಸಸಿಗಳನ್ನು ನಿರ್ಲಕ್ಷಿಸಿದ....'

ಪುಟ್ಟ ರಾಜಕುಮಾರ ಇದನ್ನು ವಿವರಿಸುತ್ತಿದ್ದಂತೆ, ಆ ಗ್ರಹದ ಚಿತ್ರವೊಂದು ಬಿಡಿಸಿದೆ. ನೀತಿಬೋಧಕನೊಬ್ಬನ ರೀತಿ ಮಾತನಾಡುವುದು ನನಗಿಷ್ಟವಿಲ್ಲ. ಆದರೂ, ಈ ಆನೆಹುಣಿಸೆಯ ಅಪಾಯದ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲದಿರುವುದರಿಂದ ಹಾಗೂ ಯಾರಾದರೂ ದಾರಿತಪ್ಪಿ ಕ್ಷುದ್ರಗ್ರಹವೊಂದರಲ್ಲಿ ಕಳೆದುಹೋದರೆ ಈ ರೀತಿಯ ಅಪಾಯಗಳನ್ನು ಎದುರಿಸಬೇಕಾಗುವುದರಿಂದ ನಾನು ಈ ರೀತಿ ಹೇಳಲೇಬೇಕಾಗಿದೆ– 'ಮಕ್ಕಳೇ, ಆನೆಹುಣಿಸೆಯ ಬಗ್ಗೆ ಎಚ್ಚರದಿಂದಿರಿ!'

ನನ್ನ ಹಲವಾರು ಗೆಳೆಯರು ತಮಗರಿವಿಲ್ಲದೆ ಈ ರೀತಿಯ ಅಪಾಯದ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ; ಅಂತಹವರಿಗಾಗಿ ಈ ಚಿತ್ರ ಬರೆಯಲು

ನಾನು ಅಷ್ಟೊಂದು ಶ್ರಮವಹಿಸಿದ್ದೇನೆ. ಇದರ ಮೂಲಕ ನನ್ನ ಸಂದೇಶ ಅವರಿಗೆ ತಲುಪಿದಲ್ಲಿ ನನ್ನ ಶ್ರಮ ಸಾರ್ಥಕವಾದಂತೆ.

ಬಹುಶಃ ನೀವು ಕೇಳಬಹುದು, 'ಈ ಆನೆಹುಣಿಸೆ ಮರಗಳ ಚಿತ್ರದಷ್ಟು ಭವ್ಯವಾಗಿ ಹಾಗೂ ವಿಚಾರ ಮನದಟ್ಟು ಮಾಡುವಂತೆ ಈ ಪುಸ್ತಕದಲ್ಲಿ ಬೇರಾವ ಚಿತ್ರವೂ ಏಕಿಲ್ಲ?'

ಅದಕ್ಕೆ ಉತ್ತರ ತುಂಬಾ ಸರಳ. ನಾನು ಪ್ರಯತ್ನಿಸಿದ್ದೇನೆ. ನನ್ನ ಪ್ರಯತ್ನಗಳು ಫಲಕಾರಿಯಾಗಿಲ್ಲ. ಆದರೆ ಆನೆಹುಣಿಸೆ ಮರಗಳ ಚಿತ್ರ ಬಿಡಿಸುವಾಗ ಅತ್ಯಂತ ಅವಶ್ಯಕತೆಯ ಪ್ರಚೋದಕ ಶಕ್ತಿ ನನ್ನನ್ನಾವರಿಸಿತ್ತು.

6

ಹೋ, ಪುಟ್ಟ ರಾಜಕುಮಾರನೆ! ನಿನ್ನ ವಿಷಾದಕರ ಬದುಕಿನ ಬಗ್ಗೆ ನನಗೆ ಸ್ವಲ್ಪ ಸ್ವಲ್ಪವೇ ಅರಿವಾಗುತ್ತಿದೆ........... ಬಹಳಷ್ಟು ಕಾಲ ಪ್ರಶಾಂತ ಸೂರ್ಯಾಸ್ತವನ್ನು ವೀಕ್ಷಿಸುವುದು ಮಾತ್ರ ನಿನಗೆ ದೊರಕುತ್ತಿದ್ದ ಮನರಂಜನೆಯಾಗಿತ್ತಲ್ಲವೆ? ನಾಲ್ಕನೆಯ ದಿನ ಬೆಳಿಗ್ಗೆ ನೀನು, 'ನನಗೆ ಸೂರ್ಯಾಸ್ತವೆಂದರೆ ಇಷ್ಟ, ನಡೆ ಹೋಗಿ ನೋಡೋಣ' ಎಂದು ಹೇಳಿದಾಗಲೇ ನನಗೆ ಆ ಹೊಸ ವಿಷಯ ತಿಳಿದದ್ದು.

'ಆದರೆ ನಾವದಕ್ಕೆ ಕಾಯಬೇಕು', ನಾನು ಹೇಳಿದ್ದೆ.

'ಕಾಯಬೇಕು? ಯಾವುದಕ್ಕೆ?'

'ಸೂರ್ಯಾಸ್ತಮಾನಕ್ಕೆ. ಸೂರ್ಯ ಮುಳುಗುವ ಸಮಯ ಬರುವವರೆಗೂ ಕಾಯಬೇಕು'.

ನನ್ನ ಮಾತಿನಿಂದ ನಿನಗೆ ಮೊದಲಿಗೆ ಆಶ್ಚರ್ಯವಾಗಿತ್ತು. ನಂತರ ನಿನ್ನಷ್ಟಕ್ಕೆ ನೀನೇ ನಕ್ಕು ನನಗೆ ಹೇಳಿದ್ದೆ,

'ಹೋ, ನಾನು ಸದಾ ನನ್ನ ಗ್ರಹದಲ್ಲಿದ್ದೇನೆಂದೇ ಆಲೋಚಿಸುತ್ತಿರುತ್ತೇನೆ.'

'ಹೌದು. ಅಮೆರಿಕಾದಲ್ಲಿ ಮಧ್ಯಾಹ್ನವಾಗಿರುವಾಗ ಫ್ರಾನ್ಸ್‌ನಲ್ಲಿ ಸೂರ್ಯ ಮುಳುಗುತ್ತಿರುತ್ತಾನೆಂಬುದು ಎಲ್ಲರಿಗೂ ತಿಳಿದ ವಿಷಯ. ನೀನು ಒಂದು ನಿಮಿಷದಲ್ಲಿ ಅಮೆರಿಕಾದಿಂದ ಫ್ರಾನ್ಸಿಗೆ ಹಾರಬಲ್ಲೆಯಾದರೆ, ಮಧ್ಯಾಹ್ನದಿಂದ ನೇರ ಸೂರ್ಯಾಸ್ತಮಾನದ ಸಮಯಕ್ಕೇ ಹೋಗಿಬಿಡುತ್ತೀಯ. ದುರದೃಷ್ಟವಶಾತ್ ಫ್ರಾನ್ಸ್ ತುಂಬಾ ದೂರದಲ್ಲಿದೆ. ಆದರೆ ನಿನ್ನ ಚಿಕ್ಕ ಕ್ಷುದ್ರಗ್ರಹದಲ್ಲಿ, ಪುಟ್ಟ ರಾಜಕುಮಾರನೇ, ನಿನ್ನ ಕುರ್ಚಿಯನ್ನು ಕೊಂಚ ಅತ್ತ ಸರಿಸಿದರೆ ಸಾಕು, ನೀನು ಸೂರ್ಯಾಸ್ತವನ್ನು ಮತ್ತು ನಸುಬೆಳಕನ್ನು ನಿನಗೆ ಬೇಕೆಂದಾಗ ನೋಡಬಹುದು......

ನೀನು ನನಗೆ ಹೇಳಿದ್ದೆ, 'ಒಂದು ದಿನ ನಾನು ಸೂರ್ಯಾಸ್ತವನ್ನು ನಲ್ವತ್ತನಾಲ್ಕು ಬಾರಿ ನೋಡಿದ್ದೆ!' ಎಂದು. 'ದುಃಖದಲ್ಲಿರುವವರು

ಸೂರ್ಯಾಸ್ತವನ್ನು ಇಷ್ಟಪಡುತ್ತಾರೆ ಅಲ್ಲವೆ?' ಎಂದು ಕೊಂಚಹೊತ್ತಿನ ನಂತರ ಕೇಳಿದ್ದೆ.

'ಆ ದಿನ, ನೀನು ನಲ್ವತ್ತನಾಲ್ಕು ಸೂರ್ಯಾಸ್ತಗಳನ್ನು ಕಂಡಾಗ ನೀನು ದುಃಖದಲ್ಲಿದ್ದೆಯಾ?' ಎಂಬ ನನ್ನ ಪ್ರಶ್ನೆಗೆ ನಿನ್ನ ಮೌನವೇ ಉತ್ತರವಾಗಿತ್ತು.

7

ಐದನೇ ದಿನ, ಎಂದಿನಂತೆ ಕುರಿಯಿಂದಾಗಿಯೆ ಪುಟ್ಟ ರಾಜಕುಮಾರನ ಬದುಕಿನ ರಹಸ್ಯ ಪುಟಗಳು ನನ್ನೆದುರು ತೆರೆದುಕೊಳ್ಳಲಾರಂಭಿಸಿದವು. ಆತ ಯಾವುದೇ ಪ್ರಚೋದನೆ ಇಲ್ಲದೆ, ತನ್ನ ಸಮಸ್ಯೆಯ ಬಗೆಗೆ ಧ್ಯಾನಾವಸ್ಥೆಯ ದೀರ್ಘಾವಲೋಕನ ಮಾಡಿದವನಂತೆ ಇದ್ದಕ್ಕಿದ್ದಂತೆ ಕೇಳಿದ:

'ಕುರಿ ಸಣ್ಣ ಪೊದೆಗಳನ್ನು ತಿನ್ನಬಲ್ಲುದಾದಲ್ಲಿ ಹೂಗಳನ್ನೂ ತಿನ್ನುತ್ತದಲ್ಲವೆ?'

'ಕುರಿ', ನಾನು ಹೇಳಿದೆ, 'ಅದಕ್ಕೆ ಸಿಗುವಂಥದನ್ನೆಲ್ಲ ತಿನ್ನುತ್ತದೆ'.

'ಮುಳ್ಳಿರುವ ಹೂವನ್ನೂ ಸಹ?'

'ಹೌದು, ಮುಳ್ಳಿರುವ ಹೂವನ್ನೂ ಸಹ'.

'ಹಾಗಾದರೆ ಗಿಡದಲ್ಲಿ ಮುಳ್ಳಿರುವುದಾದರೂ ಏಕೆ?'

ಆ ಪ್ರಶ್ನೆಗೆ ಉತ್ತರ ನನಗೆ ತಿಳಿದಿರಲಿಲ್ಲ. ಅಲ್ಲದೆ ಆ ಕ್ಷಣ ನನ್ನ ಏರೋಪ್ಲೇನಿನ ಇಂಜಿನ್‌ನಲ್ಲಿ ಸಿಕ್ಕಿಹಾಕಿಕೊಂಡಿರುವ ಬೋಲ್ಟ್ ಒಂದನ್ನು ತೆರೆಯುವುದರಲ್ಲಿ ಮಗ್ನನಾಗಿದ್ದೆ. ನನ್ನ ವಿಮಾನದಲ್ಲೇನೋ ತೀರಾ ತೊಂದರೆ ಇದೆಯೆಂಬುದು ನನ್ನನ್ನು ಚಿಂತಾಕ್ರಾಂತನನ್ನಾಗಿ ಮಾಡಿತ್ತು. ನನ್ನ ಬಳಿ ಸ್ವಲ್ಪವೇ ಕುಡಿಯುವ ನೀರು ಉಳಿದಿದ್ದು, ಮುಂದಿನದನ್ನು ಊಹಿಸಿಕೊಳ್ಳಲೂ ಆಗದಷ್ಟು ಹೆದರಿಕೆ ಆರಂಭವಾಗಿತ್ತು.

'ಹಾಗಾದರೆ, ಮುಳ್ಳಿರುವುದು ಏತಕ್ಕೆ?'

ಒಮ್ಮೆ ಪ್ರಶ್ನೆಯ ಬೆನ್ನು ಹತ್ತಿದನೆಂದರೆ ಪುಟ್ಟ ರಾಜಕುಮಾರ ಅದನ್ನು ಬಿಡುವಂಥವನೇ ಅಲ್ಲ. ಹೊರಬರದ ಬೋಲ್ಟ್ ಬಗ್ಗೆ ಯೋಚನೆ ಮಾಡಿ ನನ್ನ ತಲೆ ಬಿಸಿಯಾಗಿತ್ತು. ನನ್ನ ಮನಸ್ಸಿಗೆ ಕೂಡಲೇ ತೋಚಿದ್ದನ್ನು ನಾನು ಹೇಳಿದೆ,

'ಮುಳ್ಳುಗಳು ಕೆಲಸಕ್ಕೆ ಬಾರದವು. ಹೂಗಳು ಹಗೆತನ ಸಾಧಿಸಲು ಮುಳ್ಳುಗಳನ್ನು ಹೊಂದಿರುತ್ತವೆ ಅಷ್ಟೆ!'

'ಹೋ!'

ಒಂದರೆಕ್ಷಣ ನೀರವ ಮೌನ ಆವರಿಸಿತು. ನಂತರ ಒಂದು ರೀತಿಯ ಅಸಹನೆಯಿಂದ ಆತ ಹೇಳಿದ,

'ನಿನ್ನ ಮಾತು ನಾನು ನಂಬುವುದಿಲ್ಲ! ಹೂಗಳು ಪಾಪದವು; ನಿಷ್ಕಪಟ, ಸ್ವಯಂಸಾಂತ್ವನ ಜೀವಿಗಳು. ಅವು ಮುಳ್ಳುಗಳನ್ನು ಹಿಂಸೆಯ ಅಸ್ತ್ರಗಳೆಂದು ಭಾವಿಸುತ್ತವೆಂದರೆ...........'

ನಾನೇನೂ ಹೇಳಲಿಲ್ಲ. ಆ ಕ್ಷಣ ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ: ಈ ಬೋಲ್ಟ್ ಸಡಿಲಗೊಂಡು ಬರದಿದ್ದಲ್ಲಿ ನಾನದನ್ನು ಸುತ್ತಿಗೆಯಿಂದ ಹೊಡೆದು ತೆಗೆಯುತ್ತೇನೆ'. ಮತ್ತೆ ಪುಟ್ಟ ರಾಜಕುಮಾರ ನನ್ನ ಆಲೋಚನೆಗಳಿಗೆ ಅಡಚಣೆಯುಂಟುಮಾಡಿದ.

'ನೀನು ನಿಜವಾಗಿಯೂ ಹೂಗಳನ್ನು ಆ ರೀತಿಯವು ಎಂದು ನಂಬುತ್ತೀಯಾ....'.

ನನ್ನ ತಾಳ್ಮೆಯ ಮಿತಿ ಮೀರಿತ್ತು. 'ಹೋ ಇಲ್ಲ!', ನಾನು ಅರಚಿದೆ. 'ಇಲ್ಲ, ಇಲ್ಲ, ಇಲ್ಲ! ನಾನು ಯಾವುದನ್ನೂ ನಂಬುವುದಿಲ್ಲ. ನನ್ನ ಮನಸ್ಸಿಗೆ ತೋಚಿದ್ದನ್ನು ಹೇಳಿದೆ ಅಷ್ಟೆ. ನೋಡಿಲ್ಲಿ, ಕಾಣುವುದಿಲ್ಲವೆ? ನಾನು ಬಹಳ ಮುಖ್ಯ ವಿಷಯದಲ್ಲಿ ತಲೆಕೆಡಿಸಿಕೊಂಡಿದ್ದೇನೆ!'

ಆತ ಅಘಾತಗೊಂಡವನಂತೆ ನನ್ನನ್ನೇ ದಿಟ್ಟಿಸಿ ನೋಡಿದ.

'ಬಹಳ ಮುಖ್ಯ ವಿಷಯದಲ್ಲಿ!'

ಕೈ, ಮೈಯೆಲ್ಲಾ ಇಂಜಿನ್ ಗ್ರೀಸಿನಿಂದ ಮಸಿ ಮಾಡಿಕೊಂಡು, ಕೈಯಲ್ಲಿ ಸುತ್ತಿಗೆ ಹಿಡಿದು ನಿಂತಿದ್ದ ನನ್ನನ್ನು ನೋಡುತ್ತಲೇ ಇದ್ದು........

'ನೀನೂ ದೊಡ್ಡವರ ರೀತಿಯೇ ಮಾತನಾಡುತ್ತಿದ್ದೀಯ!' ಎಂದ.

ನನಗೆ ಅತೀವ ನಾಚಿಕೆಯಾದಂತೆನಿಸಿತು. ಆತ ತನ್ನ ಮಾತು ಮುಂದುವರೆಸಿದ:

'ನೀನು ಎಲ್ಲವನ್ನೂ ಕಲಸುಮೇಲೋಗರ ಮಾಡುತ್ತೀಯ.... ಎಲ್ಲಾ ಗೊಂದಲಮಯ.......'

ಪುಟ್ಟ ರಾಜಕುಮಾರನಿಗೆ ತುಂಬ ಸಿಟ್ಟು ಬಂದಿತ್ತು. ಬೀಸುವ ಗಾಳಿಗೆ ತನ್ನ ಹೊನ್ನ ಬಣ್ಣದ ಮುಂಗುರುಳನ್ನು ಹಾರಿಸಿ ಹೇಳಿದ,

'ನನಗೆ ಗೊತ್ತಿರುವ ಗ್ರಹವೊಂದರಲ್ಲಿ ಕೆಂಪು ಮುಖದ ಮನುಷ್ಯನೊಬ್ಬನಿದ್ದಾನೆ. ಆತನಿಗೆ ಹೂವಿನ ಸುವಾಸನೆ ಎಂದರೇನೆಂದು ತಿಳಿದಿಲ್ಲ. ಆತ ಮಿನುಗುವ ತಾರೆಯನ್ನು ಎಂದೂ ತಲೆ ಎತ್ತಿ ನೋಡಿಲ್ಲ ಹಾಗೂ ಎಂದಿಗೂ ಯಾರನ್ನೂ ಪ್ರೀತಿಸಿಲ್ಲ. ಆತ ತನ್ನ ಬದುಕೆಲ್ಲಾ ಅಂಕಿಸಂಖ್ಯೆಗಳನ್ನು ಕೂಡಿಕಳೆಯುವುದು ಬಿಟ್ಟರೆ ಮತ್ತೇನನ್ನೂ ಮಾಡಿಲ್ಲ. ಆತ ಪ್ರತಿ ದಿನ, ಪ್ರತಿಕ್ಷಣ ನಿನ್ನ ಹಾಗೆ, ತಾನೂ ಬಹಳ ಮುಖ್ಯ ವಿಷಯಗಳಲ್ಲಿ ತೊಡಗಿದ್ದೇನೆ ಎನ್ನುತ್ತಿರುತ್ತಾನೆ. ಆ ಮಾತುಗಳನ್ನು ಹೇಳಲು ಆತನಿಗೇನೋ ಹೆಮ್ಮೆ. ಆತ ಮನುಷ್ಯನೇ ಅಲ್ಲ– ಆತ ಒಂದು ಅಣಬೆ!'

'ಆತ ಏನು?'

'ಒಂದು ಅಣಬೆ!'

ಸಿಟ್ಟಿನಿಂದ ಪುಟ್ಟ ರಾಜಕುಮಾರನ ಮುಖ ಕೆಂಪೇರಿತ್ತು.

'ಲಕ್ಷಾಂತರ ವರ್ಷಗಳಿಂದ ಹೂಗಳು ಮುಳ್ಳುಗಳನ್ನು ಬೆಳೆಯುತ್ತಿವೆ. ಲಕ್ಷಾಂತರ ವರ್ಷಗಳಿಂದ ಕುರಿಗಳು ಅವುಗಳನ್ನು ತಿನ್ನುತ್ತಲೇ ಇವೆ. ತಮಗೇನೂ ಉಪಯೋಗಕ್ಕೆ ಬಾರದ ಮುಳ್ಳುಗಳನ್ನು ಹೂಗಳು ಏಕೆ ಬೆಳೆಸಿಕೊಳ್ಳುತ್ತವೆ ಎಂಬುದನ್ನು ಅರಿತುಕೊಳ್ಳಲು ಪ್ರಯತ್ನಿಸುವುದು ತತ್ಪರಿಣಾಮಗಳ ವಿಷಯವಲ್ಲವೆ? ಕುರಿ ಮತ್ತು ಹೂಗಳ ನಡುವಿನ ಯುದ್ಧ ಅಷ್ಟೊಂದು ಮುಖ್ಯವಲ್ಲವೆ? ಕೆಂಪು ಮುಖದ ಮನುಷ್ಯನ ಅಂಕಿಸಂಖ್ಯೆಗಳಿಗಿಂತ ಇದು ಹೆಚ್ಚು ಮುಖ್ಯ ವಿಷಯವಲ್ಲವೆ?'

ಆತನಿಗೆ ಹೆಚ್ಚೇನೂ ಹೇಳಲಾಗಲಿಲ್ಲ. ಆತನ ಅಳುವಿನ ಬಿಕ್ಕಳಿಕೆಯಲ್ಲಿ ಮಾತುಗಳು ಮುಚ್ಚಿಹೋದವು.

ಸೂರ್ಯಾಸ್ತವಾದದ್ದು ನಮ್ಮ ಗಮನಕ್ಕೇ ಬಂದಿರಲಿಲ್ಲ. ಕತ್ತಲಾಗ ತೊಡಗಿತ್ತು. ನನ್ನ ಕೈಯಲ್ಲಿದ್ದ ಸುತ್ತಿಗೆ ಜಾರಿ ಬಿತ್ತು. ಆ ಕ್ಷಣ ನನ್ನ ಸುತ್ತಿಗೆ, ಇಂಜಿನ್ನಿನಲ್ಲಿ ಸಿಕ್ಕಿಕೊಂಡ ಬೋಲ್ಟ್, ನೀರಡಿಕೆ ಅಥವಾ ಸಾವು.......... ಅವೆಲ್ಲಾ ಅರ್ಥಹೀನ ಎನ್ನಿಸಿತು. ಈ ಭೂಮಿಯೆಂಬ ನನ್ನ ಗ್ರಹದಲ್ಲಿ ನನ್ನೆದುರಿಗೆ ಸಾಂತ್ವನದ ಅವಶ್ಯಕತೆ ಇದ್ದ ಯಾವುದೋ ಒಂದು ಗ್ರಹದ ಪುಟ್ಟ ರಾಜಕುಮಾರನೊಬ್ಬ ಇದ್ದ. ಆತನನ್ನು ಬರಸೆಳೆದು ಎದೆಗವಚಿಕೊಂಡೆ, ಸಂತೈಸಿದೆ,

'ಹೆದರಿಕೋಬೇಡ. ನಿನ್ನ ಪ್ರೀತಿಯ ಹೂವಿಗೆ ಯಾವುದೇ ಅಪಾಯ ಬರುವುದಿಲ್ಲ. ಹೂ ತಿನ್ನಲಾಗದಂತೆ ನಿನ್ನ ಕುರಿಗೊಂದು ಬಾಯಿಕುಕ್ಕೆ ಬರೆದುಕೊಡುತ್ತೇನೆ. ನಿನ್ನ ಹೂವಿನ ಸಸಿಯ ಸುತ್ತ ರಕ್ಷಣೆಗೆಂದು ಬೇಲಿ ಬರೆದುಕೊಡುತ್ತೇನೆ. ನಾನು......' ನನಗೆ ಮುಂದೆ ಏನು ಹೇಳಬೇಕೆಂದು ತೋಚಲಿಲ್ಲ. ನನಗೇ ಕೆಟ್ಟದೆನ್ನಿಸುತ್ತಿತ್ತು...... ಮಾತು ತೊದಲುತ್ತಿತ್ತು. ಪುಟ್ಟ ರಾಜಕುಮಾರ ನನಗಿಂತ ಬಹಳ ಮುಂದೆ ಹೋಗಿದ್ದ. ಆತನನ್ನು ತಲುಪಿ ಮತ್ತೊಮ್ಮೆ ಅವನ ಕೈ ಹಿಡಿದು ಹೊರಡುವುದು ಹೇಗೆಂದು ನನಗೆ ತಿಳಿಯಲಿಲ್ಲ.

ಆತನಿರುವುದು ತೀರ ರಹಸ್ಯ ಪ್ರದೇಶ... ಅದೊಂದು ಕಣ್ಣೀರಿನ ಸಾಮ್ರಾಜ್ಯ.

8

ನಾನು ಬಹಳ ಬೇಗ ಪುಟ್ಟ ರಾಜಕುಮಾರನ ಹೂವಿನ ಬಗ್ಗೆ ಬಹಳಷ್ಟು ಮಾಹಿತಿ ಸಂಗ್ರಹಿಸಿದೆ. ಪುಟ್ಟ ರಾಜಕುಮಾರನ ಗ್ರಹದ ಮೇಲೆ ಹೂಗಳು ಬಹಳಷ್ಟು ಸರಳವಾಗಿರುವಂಥವು. ಅವುಗಳಿಗೆ ಒಂದೇ ಸುತ್ತಿನ ಹೂ ದಳಗಳಿರುತ್ತವೆ; ಅವು ಹೆಚ್ಚು ಸ್ಥಳವನ್ನು ಆಕ್ರಮಿಸಿಕೊಳ್ಳುವುದಿಲ್ಲ; ಯಾರಿಗೂ ತೊಂದರೆ ಕೊಡುವುದಿಲ್ಲ. ಒಂದು ಸುಂದರ ಬೆಳಿಗ್ಗೆ ಹುಲ್ಲಿನ ನಡುವೆ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ, ಸಂಜೆ ಕತ್ತಲಾಗುವಷ್ಟರಲ್ಲಿ ಶಾಂತವಾಗಿ ಸೊರಗಿಹೋಗುತ್ತವೆ. ಒಂದು ದಿನ ಅದೆಲ್ಲಿಂದ ಬೀಜ ಹಾರಿಬಂದಿತ್ತೋ, ಒಂದು ಹೊಸ ಸಸಿ ಕಾಣಿಸಿ ಕೊಂಡಿತ್ತು; ಪುಟ್ಟ ರಾಜಕುಮಾರ ಅದನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿದ್ದ– ಅದು ಇನ್ನಿತರ ಸಸಿಯ ಚಿಗುರುಗಳ ಹಾಗಿರಲಿಲ್ಲ. ಇದು ಹೊಸ ರೀತಿಯ ಆನೆಹುಣಿಸೆ ಆಗಿರಬಹುದೆ?



ಸ್ವಲ್ಪ ದಿನಗಳಲ್ಲೇ ಆ ಸಸಿ ಬೆಳೆಯುವುದು ನಿಂತಿತು ಹಾಗೂ ಹೂ ಬಿಡಲು ತಯಾರಾಯಿತು. ಆ ಗಿಡದಲ್ಲಿ ದೊಡ್ಡದಾದ ಮೊಗ್ಗೊಂದು ಕಂಡಾಗ ಪುಟ್ಟ ರಾಜಕುಮಾರನಿಗೆ ಅದೊರಳಗಿನಿಂದ ಯಾವುದಾದರೂ ಮಾಯಾ ಆಕೃತಿ ಹೊರಬಹುದೇನೋ ಎನ್ನಿಸಿತು. ಆದರೆ ಆ ಹೂವೆಂಬ ವೈಯ್ಯಾರಿ ಸುಂದರಿ ಅಷ್ಟು ಸುಲಭವಾಗಿ ಅರಳುವವಳಾಗಿರಲಿಲ್ಲ. ತನ್ನ ಮೊಗ್ಗಿನ ಹಸಿರುಕೋಣೆಯಲ್ಲೇ ತನ್ನ ಸಿಂಗಾರದ ತಯಾರಿ ನಡೆಸಿದ್ದಳು. ಅವಳು ತನಗೆ ಬೇಕಾದ ಬಣ್ಣಗಳನ್ನು ಎಚ್ಚರಿಕೆಯಿಂದ ಆಯ್ದುಕೊಂಡಳು. ದಳಗಳನ್ನು ಒಂದೊಂದಾಗಿ ಜೋಡಿಸಿಕೊಂಡಳು. ನಿಧಾನವಾಗಿ ತನ್ನ ಸಿಂಗಾರಕಾರ್ಯ ನಡೆಸಿದಳು. ಕಳೆತುಂಬಿದ ಹೊಲಗಳಲ್ಲಿ ಬೆಳೆಯುವ ಅಫೀಮಿನ ಹಾಗೆ ಸಿಕ್ಕುಸಿಕ್ಕಾಗಿ ಹೊರಬರಲು ಆಕೆ ತಯಾರಿರಲಿಲ್ಲ. ತನ್ನೆಲ್ಲ ಸಂಪೂರ್ಣ ಸೌಂದರ್ಯದ ಪ್ರಜ್ವಲತೆಯಲ್ಲಿ ಪ್ರತ್ಯಕ್ಷವಾಗಬೇಕೆಂದಿದ್ದಳು. ಹೋ! ಹೌದು! ಅವಳು ಬಿನ್ನಾಣಗಿತ್ತಿ ಸುಂದರಿ! ಅವಳ ರಹಸ್ಯ ಸಿಂಗಾರ ಬಹಳಷ್ಟು ದಿನ ಮೊಗ್ಗಿನ ಒಳಗೇ ನಡೆಯಿತು.

ಕೊನೆಗೊಂದು ದಿನ, ನಸುಕಿನಲ್ಲೇ ಸೂರ್ಯಹುಟ್ಟುವ ಸಮಯಕ್ಕೆ ಸರಿಯಾಗಿ ಕಾಣಿಸಿಕೊಂಡಳು. ಇಷ್ಟೂ ದಿನ ಸಿದ್ಧತೆಯಲ್ಲಿದ್ದ ಅವಳು ಆಕಳಿಸಿ, ಮೈಮುರಿದು ಹೇಳಿದಳು:

‘ಆಹ್! ನನ್ನ ನಿದ್ದೆಯ ಮಂಪರಿನ್ನೂ ಹೋಗಿಲ್ಲ. ಕ್ಷಮಿಸು. ನನ್ನ ದಳಗಳು ಇನ್ನೂ ಸರಿಯಾಗಿ ಜೋಡಣೆಯಾಗಿಲ್ಲ......’ ಆದರೆ ಪುಟ್ಟ ರಾಜಕುಮಾರನಿಗೆ ತನ್ನ ಭಾವನೆಯ ಮಹಾಪೂರವನ್ನು ತಡೆಹಿಡಿಯುವುದು ಸಾಧ್ಯವಾಗಲಿಲ್ಲ. ಅವನು ಹೇಳಿದ:

‘ಓಹ್! ಎಷ್ಟು ಸುಂದರವಾಗಿದ್ದೀಯ!’

‘ಅಲ್ಲವೆ ಮತ್ತೆ’, ಹೂ ಮಧುರಧ್ವನಿಯಲ್ಲಿ ಹೇಳಿತು, ‘ಸೂರ್ಯ ಹುಟ್ಟಿದ ಕ್ಷಣವೇ ನಾನೂ ಹುಟ್ಟಿದ್ದು...... ’

ಅವಳು ವಿನಯಶೀಲಳಷ್ಟೇ ಅಲ್ಲ– ಭಾವನೆಗಳನ್ನು ಬಡಿದೆಬ್ಬಿಸುವ ಹಾಗಿದ್ದಾಳೆ ಎಂದುಕೊಂಡ ಪುಟ್ಟ ರಾಜಕುಮಾರ.

‘ಈಗ ಉಪಾಹಾರದ ಸಮಯವಲ್ಲವೆ’ ಹೇಳಿದಳು ಪುಷ್ಪಸುಂದರಿ, ‘ನನ್ನ ಅವಶ್ಯಕತೆಗಳ ಬಗ್ಗೆ ಗಮನ ಹರಿಸುವ ಕರುಣೆ ತೋರಬಲ್ಲೆಯಾ?’

ಪುಟ್ಟ ರಾಜಕುಮಾರನಿಗೆ ನಾಚಿಕೆಯಾಗಿ ಕೂಡಲೆ ಓಡಿಹೋಗಿ ನೀರಿನ ಕ್ಯಾನ್ ತಂದು ಪುಷ್ಪಸುಂದರಿಗೆ ನೀರು ಹನಿಸಿದ.

ಅದಾದ ನಂತರ ಆತನನ್ನು ಆಕೆ ತನ್ನ ಜಂಬದ ಮಾತುಗಳಿಂದ ಕಾಡಲು ಆರಂಭಿಸಿದಳು. ಅದನ್ನು ನಿಭಾಯಿಸಲು ಆತನಿಗೆ ಕಷ್ಟವೇ ಆಯಿತು. ಉದಾಹರಣೆಗೆ, ಒಮ್ಮೆ ಆಕೆ ತನ್ನ ನಾಲ್ಕು ಮುಳ್ಳುಗಳ ಬಗ್ಗೆ ಮಾತನಾಡುತ್ತಾ ಪುಟ್ಟ ರಾಜಕುಮಾರನಿಗೆ ಹೇಳಿದಳು:

'ಹುಲಿಗಳು ತಮ್ಮ ಪಂಜಗಳೊಂದಿಗೆ ನನ್ನ ಬಳಿ ಬರಲಿ ನೋಡೋಣ!'

'ಇಲ್ಲಿ, ನನ್ನ ಗ್ರಹದಲ್ಲಿ ಹುಲಿಗಳೇ ಇಲ್ಲ. ಇದ್ದರೂ ಕಳೆಗಳನ್ನು ತಿನ್ನುವುದಿಲ್ಲವಲ್ಲ' ಹೇಳಿದ ಪುಟ್ಟ ರಾಜಕುಮಾರ.

'ನಾನೇನೂ ಕಳೆ ಅಲ್ಲವಲ್ಲ' ಬಳುಕುತ್ತಾ ಮಧುರಧ್ವನಿಯಲ್ಲಿ ಹೇಳಿದಳು ಪುಷ್ಪಸುಂದರಿ.

'ಕ್ಷಮಿಸು, ಏನು ಹೇಳಿದೆ..........'

'ನಾನು ಹುಲಿಗಳಿಗೆಂದೂ ಹೆದರಿದವಳಲ್ಲ' ಆಕೆ ಹೇಳುತ್ತಾ ಹೋದಳು, 'ಆದರೆ ನನಗೆ ಬಿಸಿಲ ಬೇಗೆ ಎಂದರೆ ಹೆದರಿಕೆ. ನನಗೆ ನೆರಳು ಕೊಡುವಂತಹ ಪರದೆಯ ವ್ಯವಸ್ಥೆ ಮಾಡಬಲ್ಲೆಯಾ?'

'ಬಿಸಿಲ ಬೇಗೆಯ ಹೆದರಿಕೆ? ಸಸ್ಯಗಳ ದುರದೃಷ್ಟ' ಎಂದು ಹೇಳಿದ ಪುಟ್ಟ ರಾಜಕುಮಾರ 'ಈ ಹೂವು ಒಂದು ವಿಚಿತ್ರದ ಜೀವಿ....... ' ಎಂದು ತನ್ನಲ್ಲೇ ಗೊಣಗಿಕೊಂಡ.

'ರಾತ್ರಿ ನನ್ನ ಮೇಲೆ ಒಂದು ಗಾಜಿನ ಬೋಗುಣಿ ಹೊದಿಸು. ಇಲ್ಲಿ ಬಹಳ ಚಳಿಯಿದೆ. ಆದರೆ ನಾನು ಬಂದಿರುವ ಸ್ಥಳದಲ್ಲಿ....... '

ತಕ್ಷಣ ಮಾತು ಅಲ್ಲಿಗೇ ನಿಲ್ಲಿಸಿದಳು. ಆಕೆ ಅಲ್ಲಿಗೆ ಬಂದಿದ್ದು ಬೀಜದ ರೂಪದಲ್ಲಿ. ಹಾಗಿರುವಾಗ

ಇತರ ಪ್ರಪಂಚಗಳ ವಿಷಯ ಆಕೆಗೆ ಹೇಗೆ ತಿಳಿದಿರಲು ಸಾಧ್ಯ. ತನ್ನ ಮಾತಿನ ಸುಳ್ಳಿನಿಂದ ಸಿಕ್ಕಿಹಾಕಿಕೊಳ್ಳುವೆನೆಂದು ಅರಿತ ಆಕೆ ಕೊಂಚ ಕಸಿವಿಸಿಗೊಂಡಳು. ಪುಟ್ಟ ರಾಜಕುಮಾರನಿಗೆ ಆ ಕಸಿವಿಸಿ ತಿಳಿಯದಿರಲೆಂದು ಎರಡು ಮೂರು ಸಾರಿ ಕೆಮ್ಮಿ ಮಾತು ಬದಲಿಸಿ,

'ಅದೇ ನಾನು ಹೇಳಿದ ಪರದೆಯ ವಿಷಯ?' ಎಂದಳು.

'ಹಾ! ನಾನು ಅದನ್ನು ತರಲೆಂದೇ ಹೊರಟಿದ್ದೆ. ಅಷ್ಟರಲ್ಲಿ ನೀನೇ ಮಾತನಾಡಿದೆ......'

ಪುಷ್ಪಸುಂದರಿ ಮತ್ತೊಮ್ಮೆ ಕೆಮ್ಮಿದಳು, ಪುಟ್ಟ ರಾಜಕುಮಾರ ತಡ ಮಾಡಿದಷ್ಟೂ ತನಗೆ ಶೀತ ಹೆಚ್ಚಾಗುತ್ತದೆಂದು ತೋರಿಸುವಂತೆ.

ಪುಟ್ಟ ರಾಜಕುಮಾರನಿಗೆ ಆ ಹೂವಿನ ಮೇಲೆ ಬಹಳಷ್ಟು ಪ್ರೀತಿ ಇದ್ದರೂ ಸಹ, ಬಹಳ ಬೇಗ ಆಕೆಯನ್ನು ಅಪನಂಬಿಕೆಯಿಂದ ನೋಡಲಾರಂಭಿಸಿದ್ದ. ಆಕೆಯ ಹಗುರವಾದ ಮಾತುಗಳಿಗೆ ತಾನು ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದುದರಿಂದ ತಂತಾನೆ ಅಸಂತುಷ್ಟನಾಗಿದ್ದ.

ಒಮ್ಮೆ ಆತ ನನ್ನಲ್ಲಿ ಹೇಳಿಕೊಂಡಿದ್ದ, 'ನಾನು ಆಕೆಯ ಮಾತುಗಳನ್ನು ಕೇಳಬಾರದಿತ್ತು. ಹೂಗಳ ಮಾತು ಎಂದಿಗೂ ಕೇಳಬಾರದು. ಸುಮ್ಮನೆ ಅವುಗಳ ಸೌಂದರ್ಯ ನೋಡಿ ಅವುಗಳ ಸುವಾಸನೆ ಮೂಸಬೇಕು ಅಷ್ಟೆ.. ನನ್ನ ಹೂವಿನ ಸುವಾಸನೆಯಾದರೋ ಇಡೀ ಗ್ರಹವನ್ನೇ ಆವರಿಸಿತ್ತು. ಅವಳ ಮನೋಹರ ರೂಪವನ್ನು ಸವಿಯುವುದು ಹೇಗೆಂದು ನನಗೆ ತಿಳಿದಿರಲಿಲ್ಲ. ಈ ಹುಲಿಯ ಪಂಜದ ಕತೆ ನನ್ನ ಮನಸ್ಸನ್ನು ಎಷ್ಟು ಕಲಕಿತೆಂದರೆ, ನನ್ನ ಮನಸ್ಸು ಕರಗಿ ಕರುಣೆಯ ಮಹಾಪೂರವೇ ಹರಿಯಿತು.'

ಪುಟ್ಟ ರಾಜಕುಮಾರ ಹೇಳುತ್ತಾ ಹೋದ:

‘ಸತ್ಯವೇನೆಂದರೆ, ನನ್ನಲ್ಲಿ ಯಾವುದನ್ನೂ ಅರಿಯುವ ಸಾಮರ್ಥ್ಯವಿರಲಿಲ್ಲ. ಕೃತ್ಯವನ್ನು ನೋಡಿ ನಿರ್ಧರಿಸಬೇಕಿತ್ತೇ ಹೊರತು, ಮಾತಿಗೆ ಮರಳಾಗಬಾರದಿತ್ತು. ಅವಳು ನನ್ನ ಮೇಲೆ ತನ್ನ ಸೌಂದರ್ಯದ ಹಾಗೂ ಸುವಾಸನೆಯ ಬಲೆ ಬೀಸಿದಳು. ನಾನು ಅವಳಿಂದ ದೂರ ಓಡಿಹೋಗಬೇಕಿತ್ತು........... ಆ ಬಲೆಯ ಹಿಂದೆ ಏನಿದೆಯೆಂಬುದನ್ನು ನಾನು ಮೊದಲೇ ಊಹಿಸಬೇಕಿತ್ತು. ಹೂಗಳು ಎಷ್ಟೊಂದು ಅನಿಶ್ಚತತೆಯಿಂದ ಕೂಡಿರುತ್ತವೆ! ಆದರೆ ಅವಳನ್ನು ಪ್ರೀತಿಸುವುದು ಹೇಗೆಂದು ಅರಿಯಲಾರದ ಎಳಸಾಗಿದ್ದೆ ನಾನು.............’

9

ವಲಸೆ ಹೋಗುತ್ತಿದ್ದ ಯಾವುವೋ ಕಾಡು ಹಕ್ಕಿಗಳನ್ನು ತಾನು ತಪ್ಪಿಸಿಕೊಳ್ಳುವುದಕ್ಕಾಗಿ ಆತ ಬಳಸಿಕೊಂಡನೆಂಬುದು ನನ್ನ ನಂಬಿಕೆ. ತಾನು ಹೊರಡುವ ದಿನ ಆತ ತನ್ನ ಗ್ರಹದಲ್ಲಿ ಎಲ್ಲವನ್ನೂ ಸುಸ್ಥಿತಿಯಲ್ಲಿಟ್ಟ. ಚಟುವಟಿಕೆಯಿಂದಿದ್ದ ತನ್ನ ಅಗ್ನಿಪರ್ವತಗಳನ್ನು ಶುಚಿಗೊಳಿಸಿದ. ಆತನಲ್ಲಿ ಅಂತಹ ಎರಡು ಅಗ್ನಿಪರ್ವತಗಳಿದ್ದವು ಹಾಗೂ ಅವು ತನ್ನ ಬೆಳಗಿನ ಉಪಾಹಾರದ ತಯಾರಿಗೆ ಅನುಕೂಲಕರವಾಗಿದ್ದವು. ಮತ್ತೊಂದು ನಿಷ್ಕ್ರಿಯವಾಗಿದ್ದ ಅಗ್ನಿಪರ್ವತವೂ ಇತ್ತು. ‘ಯಾರಿಗೆ ಗೊತ್ತು ಏನಾಗುತ್ತದೋ’ ಎಂದುಕೊಂಡು ಅದನ್ನೂ ಸಹ ಶುಚಿಗೊಳಿಸಿದ. ಅಗ್ನಿಪರ್ವತಗಳನ್ನು ಶುಚಿಗೊಳಿಸಿದರೆ ಅವು ಮಂದಗತಿಯಲ್ಲಿ, ಸಿಡಿಯದೇ ಉರಿಯುತ್ತಿರುತ್ತವೆ. ಅಗ್ನಿಪರ್ವತಗಳು ಸಿಡಿಯುವುದೆಂದರೆ ಕುಲುಮೆಯಲ್ಲಿನ ಬೆಂಕಿಯ ಹಾಗೆ.

ಇಲ್ಲಿ ನಮ್ಮ ಭೂಮಿಯಲ್ಲಿ ಅಗ್ನಿಪರ್ವತಗಳು ಅಗಾಧವಾಗಿರುವುದರಿಂದ ಹಾಗೂ ಅದರ ಮುಂದೆ ನಾವು ತೀರ ಸಣ್ಣವರಾಗಿರುವುದರಿಂದ ಅವುಗಳನ್ನು ಶುಚಿಗೊಳಿಸಲು ಸಾಧ್ಯವಿಲ್ಲ. ಹಾಗಾಗಿ ನಮಗೆ ಅವುಗಳ ತೊಂದರೆ ತಪ್ಪಿದ್ದಲ್ಲ.

ಪುಟ್ಟ ರಾಜಕುಮಾರ ಒಂದು ರೀತಿಯ ವಿಷಣ್ಣತೆಯಿಂದ ಅಳಿದುಳಿದ ಆನೆಹುಣಿಸೆ ಚಿಗುರುಗಳನ್ನೂ ಕಿತ್ತೆಸೆದ. ತನಗೆ ಮತ್ತೆ ತನ್ನ ಗ್ರಹಕ್ಕೆ ವಾಪಸ್ಸು ಹೋಗಬೇಕೆಂದೆನ್ನಿಸುವುದಿಲ್ಲವೆಂದೇ ಅವನು ನಂಬಿದ್ದ. ಹಾಗಾಗಿ ಆತನಿಗೆ ಈ ಕೊನೆಯ ಮುಂಜಾನೆಯ ಕೆಲಸಕಾರ್ಯಗಳು ಬಹಳ ಅತ್ಯಮೂಲ್ಯವೆಂದೆನ್ನಿಸಿತ್ತು. ಹೂವಿನ ಗಿಡಕ್ಕೆ ಕೊನೆಯ ಬಾರಿ ನೀರೆರೆದು ಆಕೆಯ ಮೇಲೆ ಗಾಜಿನ ಬೋಗುಣಿಯನ್ನು ಇಡಲು ಹೊರಟಾಗ ಕಣ್ಣೀರಿನ ಪ್ರವಾಹ ಹರಿಯುವುದರಲ್ಲಿತ್ತು.

'ನಾನು ಹೋಗುತ್ತಿದ್ದೇನೆ', ಹೂವಿಗೆ ಹೇಳಿದ.

ಹೂ ಮಾತನಾಡಲಿಲ್ಲ.

'ನಾನು ಹೋಗುತ್ತಿದ್ದೇನೆ', ಮತ್ತೊಮ್ಮೆ ಹೇಳಿದ.

ಹೂ ಕೆಮ್ಮಿತು. ಅದಕ್ಕೆ ನೆಗಡಿಯೇನೂ ಬಂದಿರಲಿಲ್ಲ.

'ನಾನು ತಿಳಿಗೇಡಿತನದಿಂದ ವರ್ತಿಸಿದೆ', ಹೂ ಕೊನೆಗೂ ಮಾತನಾಡಿತು. 'ನನ್ನನ್ನು ಕ್ಷಮಿಸು. ನೀನು ಸಂತೋಷವಾಗಿರಲು ಪ್ರಯತ್ನಿಸು........'

ಹೂ ತನ್ನನ್ನು ಆಕ್ಷೇಪಿಸಬಹುದು ಎಂದುಕೊಂಡಿದ್ದ ಪುಟ್ಟ ರಾಜಕುಮಾರನಿಗೆ ಅದರ ಮಾತುಗಳಿಂದ ಆಶ್ಚರ್ಯವಾಯಿತು. ಗಾಜಿನ ಬೋಗುಣಿ ಹಿಡಿದು ನಿಂತಿದ್ದ ಆತ ಹಾಗೇ ನಿಬ್ಬೆರಗಾಗಿ ಹೋಗಿದ್ದ. ಹೂವಿನ ಈ ಮಧುರ ಮಾತಿನ ಭಾವ ಆತನಿಗೆ ಅರ್ಥವಾಗಲಿಲ್ಲ.

'ನಾನೂ ನಿನ್ನನ್ನು ಪ್ರೀತಿಸುತ್ತೇನೆ', ಹೂ ಹೇಳಿತು. 'ಆದರೆ ಅದನ್ನು ನಾನು ವ್ಯಕ್ತಪಡಿಸದಿದ್ದುದು ನನ್ನ ತಪ್ಪು. ಇರಲಿ ಬಿಡು, ಅದು ಅಷ್ಟು ಮುಖ್ಯ ವಿಷಯವಲ್ಲ. ಆದರೆ ನೀನೂ ಸಹ ನನ್ನ ಹಾಗೆ ಮೂರ್ಖತನದಿಂದ ವರ್ತಿಸಿದ್ದೀಯೆ. ನೀನು ಸಂತೋಷವಾಗಿರು. ಆ ಗಾಜಿನ ಬೋಗುಣಿ ಬೇಡ, ನನಗದರ ಅವಶ್ಯಕತೆ ಇಲ್ಲ'.

'ಮತ್ತೆ ಥಂಡಿ ಗಾಳಿ.......'

'ನನಗೆ ನೆಗಡಿಯೇನೂ ಆಗಿಲ್ಲ. ರಾತ್ರಿಯ ಥಂಡಿ ಗಾಳಿ ನನಗಿನ್ನೂ ಒಳ್ಳೆಯದೆ, ನಾನು ಹೂವಲ್ಲವೆ'.

'ಆದರೆ ಯಾವುದಾದರೂ ಪ್ರಾಣಿ...... '

'ಮುಂದೆ ನನಗೆ ಚಿಟ್ಟೆಗಳ ಸಹವಾಸ ಬೇಕೆಂದರೆ ಈಗ ಕೆಲವು ಕಂಬಳಿಹುಳುಗಳನ್ನು ಸಹಿಸಿಕೊಳ್ಳಲೇ ಬೇಕು. ಅವೂ ಸುಂದರ ಪ್ರಾಣಿಗಳೇ. ಚಿಟ್ಟೆ, ಕಂಬಳಿಹುಳುಗಳಿಲ್ಲದಿದ್ದಲ್ಲಿ ನನ್ನನ್ನು ಅರಸಿಬರುವವರಾದರೂ ಬೇರೆ ಯಾರಿದ್ದಾರೆ? ನೀನಂತೂ ದೂರ ಹೋಗಿಬಿಟ್ಟಿರುತ್ತೀಯಾ............. ಇನ್ನು ದೊಡ್ಡ ಪ್ರಾಣಿಗಳು, ನನಗೇನೂ ಅವುಗಳನ್ನು ಕಂಡರೆ ಹೆದರಿಕೆಯಿಲ್ಲ. ನನಗೆ ನನ್ನದೇ ಆದ ಪಂಜಗಳಿವೆ'.

ಮುಗ್ಧಳಂತೆ ಅವಳು ಅವನಿಗೆ ತನ್ನ ನಾಲ್ಕು ಮುಳ್ಳುಗಳನ್ನು ತೋರಿಸಿದಳು. ನಂತರ ಹಾಗೆಯೇ ಮಾತು ಮುಂದುವರಿಸಿದಳು:

'ಹೀಗೆ ಸುಮ್ಮನೆ ನಿಂತಿರಬೇಡ. ಹೇಗೂ ಇಲ್ಲಿಂದ ಹೊರಟುಬಿಡಬೇಕೆಂದು ನಿರ್ಧರಿಸಿದ್ದೀಯೆ, ಈಗಲೇ ಹೊರಟುಬಿಡು!'

ತಾನು ಅಳುವುದನ್ನು ಆತ ನೋಡುವುದು ಹೂವಿಗೆ ಇಷ್ಟವಿರಲಿಲ್ಲ. ಅಷ್ಟೊಂದು ಹಮ್ಮು ಆ ಹೂವಿಗೆ........

10

ಪುಟ್ಟ ರಾಜಕುಮಾರನಿಗೆ ತನ್ನ ಹಾದಿಯಲ್ಲಿ ಅಕ್ಕಪಕ್ಕದ 325, 326, 327, 328, 329 ಮತ್ತು 330 ಕ್ಷುದ್ರಗ್ರಹಗಳು ಎದುರಾದವು. ತನ್ನ ಜ್ಞಾನವರ್ಧನೆ ಮಾಡಿಕೊಳ್ಳಲು ಅವುಗಳಿಗೂ ಭೇಟಿ ನೀಡೋಣ ಎಂದುಕೊಂಡ.

ಮೊದಲನೆಯ ಕ್ಷುದ್ರಗ್ರಹದಲ್ಲಿ ರಾಜನೊಬ್ಬನಿದ್ದ. ಕೆನ್ನೀಲಿಯ ಬಣ್ಣದ ಹಾಗೂ ಮುಂಗುಸಿಯಂತಿರುವ ಅರ್ಮಿನ್ ಎಂಬ ಪ್ರಾಣಿಯ ತುಪ್ಪಳದಿಂದ ಮಾಡಿದ್ದ ರಾಜಧಿರಿಸು ಧರಿಸಿ ಸರಳವಾಗಿದ್ದರೂ ವೈಭವವಾಗಿದ್ದ ಸಿಂಹಾಸನದ ಮೇಲೆ ಆತ ಕೂತಿದ್ದ.

ಪುಟ್ಟ ರಾಜಕುಮಾರ ಬರುತ್ತಿದ್ದುದನ್ನು ನೋಡಿದ ರಾಜ, 'ಹಾ! ಇಲ್ಲೊಬ್ಬ ಪ್ರಜೆ ಬರುತ್ತಿದ್ದಾನೆ', ಎಂದು ಉದ್ಗರಿಸಿದ.

'ಅರೆ, ಈ ರಾಜ ತನ್ನನ್ನೆಂದೂ ನೋಡಿಲ್ಲ. ಆದರೆ ಹೇಗೆ ಗುರುತು ಹಿಡಿದ', ಎಂದು ಪುಟ್ಟ ರಾಜಕುಮಾರ ತನ್ನಲ್ಲೇ ಹೇಳಿಕೊಂಡ.

ಆದರೆ ರಾಜರು ತಮ್ಮ ಪ್ರಪಂಚವನ್ನು ಹೇಗೆ ಸರಳೀಕರಣ ಗೊಳಿಸಿಕೊಂಡಿರುತ್ತಾರೆ ಎಂಬುದು ಪುಟ್ಟ ರಾಜಕುಮಾರನಿಗೆ ತಿಳಿದಿರಲಿಲ್ಲ. ರಾಜರಿಗೆ ಎಲ್ಲ ಮನುಷ್ಯರೂ ಪ್ರಜೆಗಳೇ.

'ಹತ್ತಿರ ಬಾ, ನಿನ್ನನ್ನು ಸರಿಯಾಗಿ ನೋಡೋಣ', ರಾಜ ಕರೆದ. ಸ್ವಲ್ಪ ಹೊತ್ತಿನ ಮಟ್ಟಿಗಾದರೂ ಒಬ್ಬ ಪ್ರಜೆಗೆ ರಾಜನಾಗಿರುವುದು ಆತನಿಗೆ ಹೆಮ್ಮೆಯ ವಿಷಯವಾಗಿತ್ತು.

ಪುಟ್ಟ ರಾಜಕುಮಾರ ಕುಳಿತುಕೊಳ್ಳಲು ಸ್ಥಳಕ್ಕಾಗಿ ಅತ್ತ ಇತ್ತ ನೋಡಿದ. ಆದರೆ ರಾಜನ ಅತಿವೈಭವದ ಅರ್ಮಿನ್ ಧಿರಿಸು ಹರಡಿಕೊಂಡಿದ್ದರಿಂದ ಇಡೀ ಗ್ರಹವೇ ಇಕ್ಕಟ್ಟಾಗಿತ್ತು. ಆದುದರಿಂದ ಆತ ನಿಂತುಕೊಂಡೇ ಇದ್ದ. ಪ್ರಯಾಣದಿಂದ ಸುಸ್ತಾಗಿದ್ದುದರಿಂದ ಆಕಳಿಸಿದ.

'ರಾಜನ ಮುಂದೆ ಆಕಳಿಸುವುದು ಅಪರಾಧವೆಂದು ತಿಳಿದಿಲ್ಲವೆ? ಆಕಳಿಸಬೇಡ', ರಾಜ ಗುಡುಗಿದ.

'ನನ್ನ ಕೈಯಲ್ಲಿ ಅದನ್ನು ತಡೆಯುವುದು ಸಾಧ್ಯವಿಲ್ಲ', ಸಂಕೋಚದಿಂದ ಹೇಳಿದ ಪುಟ್ಟ ರಾಜಕುಮಾರ, 'ನಾನು ಬಹಳ ದೂರದಿಂದ ಪ್ರಯಾಣ ಮಾಡುತ್ತಿದ್ದೇನೆ, ನನಗೆ ನಿದ್ದೆಯೇ ಇಲ್ಲ'.

ಹೋ, ಹೌದೆ! ಹಾಗಾದರೆ ನೀನು ಆಕಳಿಸಬೇಕೆಂದು ಆಜ್ಞೆ ಮಾಡುತ್ತಿದ್ದೇನೆ. ಯಾರಾದರೂ ಆಕಳಿಸುವುದನ್ನು ನೋಡಿ ಎಷ್ಟೋ ವರ್ಷಗಳಾಗಿವೆ. ಆಕಳಿಕೆ ನನಗೊಂದು ಕುತೂಹಲಕಾರಿ ಕ್ರಿಯೆ. ಎಲ್ಲಿ ಮತ್ತೊಮ್ಮೆ ಆಕಳಿಸು, ಇದು ರಾಜಾಜ್ಞೆ! '

'ನನಗೆ ಹೆದರಿಕೆಯಾಗುತ್ತಿದೆ, ನನಗೀಗ ಆಕಳಿಕೆ ಬರುತ್ತಿಲ್ಲ.......' ಇನ್ನೂ ಹೆಚ್ಚಿನ ಹೆದರಿಕೆ, ಸಂಕೋಚದಿಂದ ಗೊಣಗಿದ ಪುಟ್ಟ ರಾಜಕುಮಾರ.

'ಹ್ಹೂಂ..! ಹ್ಹೂಂ..!', ಉತ್ತರಿಸಿದ ರಾಜ, 'ಹಾಗಾದರೆ ಸ್ವಲ್ಪ ಹೊತ್ತು ಆಕಳಿಸು....... ಸ್ವಲ್ಪ ಹೊತ್ತು ಆಕಳಿಸಬೇಡ ಎಂದು ಆಜ್ಞಾಪಿಸುತ್ತಿದ್ದೇನೆ'. ಕಿರಿಕಿರಿ ಆದಂತೆ ರಾಜ ತೊದಲಿದ.

ಸತ್ಯವೇನೆಂದರೆ, ಯಾರೇ ಆಗಲಿ ತನ್ನ ಅಧಿಕಾರವನ್ನು ಗೌರವಿಸಬೇಕೆಂಬುದೇ ರಾಜನ ಇಚ್ಛೆಯಾಗಿತ್ತು. ಆತ ಅವಿಧೇಯತೆಯನ್ನು ಸೈರಿಸದ ನಿರಂಕುಶ ಪ್ರಭು. ಆದರೆ ಆತ ಒಳ್ಳೆಯವನಾಗಿದ್ದುದರಿಂದ ಆತನ ಆಜ್ಞೆಗಳು ಅಷ್ಟು ಕಠೋರವಾಗಿರುತ್ತಿರಲಿಲ್ಲ. ಉದಾಹರಣೆಗೆ, 'ನಾನೇನಾದರೂ ನನ್ನ ದಂಡನಾಯಕನಿಗೆ ಪಕ್ಷಿಯಾಗಿ ರೂಪಾಂತರ ಹೊಂದು ಎಂದು ಆಜ್ಞೆ ಮಾಡಿ, ಆತ ನನ್ನ ಆಜ್ಞೆಯನ್ನು ಪಾಲಿಸದಿದ್ದಲ್ಲಿ ಅದು ಆತನ ತಪ್ಪಾಗುತ್ತಿರಲಿಲ್ಲ, ನನ್ನ ತಪ್ಪಾಗಿರುತ್ತಿತ್ತು' ಎನ್ನುತ್ತಿದ್ದ ರಾಜ.

'ನಾನು ಕುಳಿತುಕೊಳ್ಳಲೆ?' ಪುಟ್ಟ ರಾಜಕುಮಾರ ಕ್ಷೀಣ ದನಿಯಲ್ಲಿ ಕೇಳಿದ.

'ಕುಳಿತುಕೊ ಎಂದು ಆಜ್ಞೆ ಮಾಡುತ್ತಿದ್ದೇನೆ' ಎಂದ ರಾಜ ತನ್ನ ಅರ್ಮಿನ್ ಧಿರಿಸನ್ನು ಹತ್ತಿರಕ್ಕೆ ಮಡಚಿಕೊಂಡು ಪುಟ್ಟ ರಾಜಕುಮಾರನಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ಮಾಡಿಕೊಟ್ಟ.

'ಈ ಗ್ರಹ ಇಷ್ಟು ಪುಟ್ಟದಾಗಿದೆ .... ಈ ರಾಜ ಆಳುವುದಾದರೂ ಏನನ್ನು' ಎಂದು ಪುಟ್ಟ ರಾಜಕುಮಾರ ಆಲೋಚಿಸಿ,

'ಪ್ರಭುಗಳೆ, ಕ್ಷಮಿಸಿ, ನಿಮ್ಮನ್ನು ಒಂದು ಪ್ರಶ್ನೆ ಕೇಳಲೆ?'

'ನನ್ನನ್ನು ಪ್ರಶ್ನೆ ಕೇಳುವಂತೆ ಆಜ್ಞೆ ಮಾಡುತ್ತಿದ್ದೇನೆ', ರಾಜ ಆಜ್ಞಾಪಿಸಿದ.

'ಸ್ವಾಮಿ .... ಇಲ್ಲಿ ನೀವು ಆಳುತ್ತಿರುವುದಾದರೂ ಯಾವುದನ್ನು?'

'ಎಲ್ಲವನ್ನೂ', ಉತ್ತರಿಸಿದ ರಾಜ ಗತ್ತಿನ ಸರಳತೆಯಿಂದ.

'ಎಲ್ಲವನ್ನೂ?'

ರಾಜ ಕೈ ಬೀಸಿ ತನ್ನ ಸಾಮ್ರಾಜ್ಯ ತೋರಿಸಿದ. ಅದರಲ್ಲಿ ಆತನ ಗ್ರಹ, ಇತರ ಗ್ರಹ ಹಾಗೂ ತಾರೆಗಳೂ ಸೇರಿದ್ದವು.

'ಈ ಎಲ್ಲವನ್ನೂ? ' ಸಂಶಯದಿಂದ ಕೇಳಿದ ಪುಟ್ಟ ರಾಜಕುಮಾರ.

'ಹೌದು, ಎಲ್ಲವನ್ನೂ' ಉತ್ತರಿಸಿದ ರಾಜ.

ಆತನ ರಾಜ್ಯಭಾರ ಸತ್ಯವಷ್ಟೇ ಅಲ್ಲ ಸಾರ್ವತ್ರಿಕವೂ ಆಗಿತ್ತು.

'ತಾರೆಗಳು ನಿಮ್ಮ ಮಾತು ಕೇಳುತ್ತವೆಯೆ?'

'ಕೇಳಲೇಬೇಕು' ರಾಜ ಹೇಳಿದ, 'ಅವು ತಕ್ಷಣ ಆಜ್ಞೆಗಳನ್ನು ಪಾಲಿಸುತ್ತವೆ. ನಾನು ಅವಿಧೇಯತೆಯನ್ನು ಸಹಿಸುವುದಿಲ್ಲ'.

ಆ ರೀತಿಯ ಅಧಿಕಾರ ಪುಟ್ಟ ರಾಜಕುಮಾರನನ್ನು ಬೆರಗುಗೊಳಿಸಿತು. 'ಆ ರೀತಿಯ ಅಧಿಕಾರ ತನಗೇನಾದರೂ ಇದ್ದಿದ್ದರೆ ತಾನು ಸೂರ್ಯಾಸ್ತವನ್ನು ಒಂದು ದಿನದಲ್ಲಿ 44 ಸಾರಿಯೇನು, 72 ಅಥವಾ ನೂರು ಸಾರಿ ಅಥವಾ ಇನ್ನೂರು ಸಾರಿಯಾದರೂ ಕೂತಿರುವ ಕುರ್ಚಿ ಅಲುಗಾಡಿಸದೆ ನೋಡುತ್ತಿದ್ದೆ' ಎಂದುಕೊಂಡ ಮನಸ್ಸಿನಲ್ಲೆ. ತನ್ನ ಪುಟ್ಟ ಗ್ರಹ ಬಿಟ್ಟು ಬಂದದ್ದು ನೆನಪಾಗಿ ದುಃಖವಾಯಿತು. ತನ್ನೆಲ್ಲ ಧೈರ್ಯವನ್ನು ಒಂದುಗೂಡಿಸಿ ರಾಜನನ್ನು ಒಂದು ಸಹಾಯ ಕೇಳಿದ:

'ನನಗೆ ಸೂರ್ಯಾಸ್ತ ನೋಡಬೇಕೆಂಬ ಆಸೆಯಾಗುತ್ತಿದೆ . . . . . . ಸೂರ್ಯನಿಗೆ ಮುಳುಗುವಂತೆ ಆಜ್ಞೆ ಮಾಡುತ್ತೀರಾ . . . . . .'

'ನನ್ನ ದಂಡನಾಯಕನೊಬ್ಬನಿಗೆ ನಾನು, 'ಚಿಟ್ಟೆಯಂತೆ ಹೂವಿಂದ ಹೂವಿಗೆ ಹಾರು' ಎಂದರೆ ಅಥವಾ 'ದುಃಖಾಂತದ ನಾಟಕವೊಂದನ್ನು ರಚಿಸು' ಎಂದರೆ ಅಥವಾ 'ಸಮುದ್ರ ಪಕ್ಷಿಯಾಗಿ ರೂಪಾಂತರ ಹೊಂದು' ಎಂದು ಆಜ್ಞಾಪಿಸಿ, ಆ ದಂಡನಾಯಕ ಆ ಆಜ್ಞೆಗಳನ್ನು ಪಾಲಿಸದಿದ್ದಲ್ಲಿ ತಪ್ಪು ಅವನದೋ ಅಥವಾ ನನ್ನದೋ?' ರಾಜ ಕೇಳಿದ.

'ನಿಮ್ಮದೆ', ಉತ್ತರಿಸಿದ ಪುಟ್ಟ ರಾಜಕುಮಾರ.

'ನೀನು ಹೇಳಿದ್ದು ಸರಿ. ಯಾರಿಂದಲಾದರೂ ಮಾಡಬಹುದಾದ ಕೆಲಸವನ್ನು ಮಾತ್ರ ನಾವು ನಿರೀಕ್ಷಿಸಬಹುದು', ರಾಜ ಹೇಳಿದ, 'ಅಧಿಕಾರಕ್ಕೆ ವಿವೇಚನೆ ತುಂಬ ಮುಖ್ಯ. ನೀನೇನಾದರೂ ರಾಜನಾಗಿದ್ದು, ನಿನ್ನ ಪ್ರಜೆಗಳನ್ನು ಸಮುದ್ರಕ್ಕೆ ಹಾರಿ ಸಾಯಿರಿ ಎಂದರೆ ಅವರು ನಿನ್ನ ವಿರುದ್ಧವೇ ದಂಗೇಳುತ್ತಾರೆ. ನನಗೆ ವಿಧೇಯತೆಯನ್ನು ಅಪೇಕ್ಷಿಸುವ ಹಕ್ಕಿದೆ, ಏಕೆಂದರೆ ನನ್ನ ಆಜ್ಞೆಗಳಿಗೆ ವಿವೇಚನೆಯಿದೆ'.

'ಹಾಗಾದರೆ ನನ್ನ ಸೂರ್ಯಾಸ್ತಮಾನ?', ಪುಟ್ಟ ರಾಜಕುಮಾರ ಮತ್ತೆ ಕೇಳಿದ, ಒಮ್ಮೆ ಒಂದು ಪ್ರಶ್ನೆಯನ್ನು ಕೇಳಿದನೆಂದರೆ ಆತ ಅದನ್ನು ಬಿಡುವವನೇ ಅಲ್ಲ.

'ನೀನು ಸೂರ್ಯಾಸ್ತವನ್ನು ನೋಡಬಹುದು. ನಾನದಕ್ಕೆ ಆಜ್ಞೆ ಮಾಡುತ್ತೇನೆ. ಆದರೆ ನನ್ನ ಸರ್ಕಾರದ ವಿಜ್ಞಾನದ ಪ್ರಕಾರ ನಾವು ಪರಿಸ್ಥಿತಿ ಅನುಕೂಲಕರವಾಗುವವರೆಗೂ ಕಾಯಬೇಕು.'

'ಆ ಅನುಕೂಲಕರ ಪರಿಸ್ಥಿತಿ ಯಾವಾಗ ಬರುತ್ತದೆ?'

'ಹ್ಞೂಂ....... ಹ್ಞೂಂ........' ಎಂದ ರಾಜ ಒಂದು ಬೃಹತ್ ಗ್ರಂಥದ ಹಾಳೆಗಳನ್ನು ತಿರುಗಿಸಿ ಓದಲಾರಂಭಿಸಿದ. 'ಹ್ಞೂಂ...... ಹ್ಞೂಂ....... ಆ ಸಮಯ ಈ ಸಂಜೆ ಎಂಟು ಗಂಟೆಗೆ ಇಪ್ಪತ್ತು ನಿಮಿಷವಿರುವಾಗ ಬರುತ್ತದೆ. ಆಗ ನೋಡು ನನ್ನ ಆಜ್ಞೆಯ ಪರಿಪಾಲನೆ ಹೇಗಾಗುತ್ತದೆ ಎಂಬುದನ್ನು'.

ಪುಟ್ಟ ರಾಜಕುಮಾರ ಆಕಳಿಸಿದ. ಸೂರ್ಯಾಸ್ತ ತಕ್ಷಣ ಕಾಣಲಾಗದಿದ್ದುದಕ್ಕಾಗಿ ಪಶ್ಚಾತ್ತಾಪಪಟ್ಟ. ಅಷ್ಟರಲ್ಲಿ ಅವನಿಗೂ ಬೇಸರ ಮೂಡತೊಡಗಿತ್ತು.

'ನನಗಿಲ್ಲಿ ಇನ್ನೇನೂ ಕೆಲಸವಿಲ್ಲ', ಆತ ರಾಜನಿಗೆ ಹೇಳಿದ, 'ನನ್ನ ಪ್ರಯಾಣ ಮುಂದುವರೆಸುತ್ತೇನೆ'.

'ಹೋಗಬೇಡ ನಿಲ್ಲು', ತನಗೊಬ್ಬ ಪ್ರಜೆ ಸಿಕ್ಕಿದುದಕ್ಕಾಗಿ ರಾಜ ಹೆಮ್ಮೆಯಿಂದ ಇದ್ದ. 'ಹೋಗಬೇಡ, ನಿನ್ನನ್ನು ಮಂತ್ರಿಯನ್ನಾಗಿ ಮಾಡುತ್ತೇನೆ'.

'ಯಾವ ಮಂತ್ರಿ? '

'ಮಂತ್ರಿ......... ನ್ಯಾಯ ಪರಿಪಾಲನಾ ಮಂತ್ರಿ.'

'ನ್ಯಾಯ ಪರಿಪಾಲನೆಗೆ ಇಲ್ಲಿ ಬೇರಾರೂ ಇಲ್ಲವೇ ಇಲ್ಲ!'

'ನನಗೆ ಅದೆಲ್ಲ ತಿಳಿದಿಲ್ಲ', ರಾಜ ಹೇಳಿದ, 'ನಾನಿನ್ನೂ ನನ್ನ ಸಾಮ್ರಾಜ್ಯದ ಸಂಪೂರ್ಣ ಪ್ರವಾಸ ಮಾಡಿಲ್ಲ. ನನಗೂ ವಯಸ್ಸಾಯಿತಲ್ಲ. ಇಲ್ಲಿ ನನ್ನ ಗ್ರಹದ ಮೇಲೆ ಗಾಡಿ ನಿಲ್ಲಿಸುವಷ್ಟು ಸ್ಥಳವಿಲ್ಲ, ನನಗೆ ನಡೆಯಲೂ ಸಾಧ್ಯವಿಲ್ಲ.'

'ಹೋ, ನಾನಾಗಲೇ ಎಲ್ಲಾ ನೋಡಿದ್ದೇನೆ!' ಎಂದ ಪುಟ್ಟ ರಾಜಕುಮಾರ, ಮತ್ತೊಮ್ಮೆ ಗ್ರಹದ ಆ ಕಡೆ ಈ ಕಡೆ ಇಣುಕಿನೋಡಿ 'ಯಾರೂ ಇಲ್ಲವೇ ಇಲ್ಲ....... ಎಂದ'.

'ಹಾಗಿದ್ದಲ್ಲಿ ನಿನ್ನ ನ್ಯಾಯ ಪರಿಪಾಲನೆ ನೀನೇ ಮಾಡಿಕೊ', ರಾಜ ಹೇಳಿದ. 'ಅದು ಎಲ್ಲಕ್ಕಿಂತ ಕಷ್ಟದ ಕೆಲಸ. ಇತರರ ನ್ಯಾಯ ಪರಿಪಾಲನೆಗಿಂತ ಸ್ವತಃ ತಮ್ಮ ನ್ಯಾಯ ಪರಿಪಾಲನೆ ಮಾಡಿಕೊಳ್ಳುವುದು ಬಹಳ ಕಷ್ಟದ ಕೆಲಸ. ನೀನು ಸರಿಯಾಗಿ ನಿನ್ನ ನ್ಯಾಯ ಪರಿಪಾಲನೆ ಮಾಡಿಕೊಳ್ಳುವಲ್ಲಿ

ಯಶಸ್ವಿಯಾದರೆ, ನೀನು ನಿಜವಾಗಿಯೂ ಒಬ್ಬ ವಿವೇಕಪೂರ್ಣ ವ್ಯಕ್ತಿಯಾಗುತ್ತೀಯ'.

'ಹೌದು', ಹೇಳಿದ ಪುಟ್ಟ ರಾಜಕುಮಾರ, 'ಆದರೆ ನನ್ನ ನ್ಯಾಯ ಪರಿಪಾಲನೆಯನ್ನು ಎಲ್ಲಿ ಬೇಕಾದರೂ ಮಾಡಿಕೊಳ್ಳಬಹುದು. ಅದಕ್ಕಾಗಿ ನಾನು ಈ ಗ್ರಹದ ಮೇಲೆ ವಾಸಿಸಬೇಕಾಗಿಲ್ಲ'.

'ಹ್ಞಂ! ಹ್ಞಂ!' ಎಂದ ರಾಜ, 'ಈ ನನ್ನ ಗ್ರಹದ ಯಾವುದೋ ಮೂಲೆಯಲ್ಲಿ ಒಂದು ಮುದಿ ಇಲಿ ಇದೆಯೆಂದು ನನ್ನ ನಂಬಿಕೆ. ರಾತ್ರಿಯೆಲ್ಲಾ ಕಿಚಕಿಚ ಸದ್ದು ಮಾಡುತ್ತಿರುತ್ತದೆ. ನೀನು ಆ ಇಲಿಯ ನ್ಯಾಯನಿರ್ಣಯ ಮಾಡಬಹುದು. ಆಗಾಗ ಅದಕ್ಕೆ ಮರಣದಂಡನೆ ವಿಧಿಸು. ಹಾಗಾಗಿ ಅದರ ಜೀವ ನಿನ್ನ ತೀರ್ಪಿನ ಮೇಲೆ ಅವಲಂಬಿತವಾಗಿರುತ್ತದೆ. ಪ್ರತಿಸಾರಿಯೂ ಅದಕ್ಕೆ ಕ್ಷಮಾದಾನ ನೀಡು; ಅದನ್ನು ಜೋಪಾನದಿಂದ ಕಾಪಾಡಬೇಕು, ಏಕೆಂದರೆ ನಮಗಿರುವುದು ಅದೊಂದೆ'.

'ಯಾರಿಗೂ ಮರಣದಂಡನೆ ವಿಧಿಸುವುದು ನನಗಿಷ್ಟವಿಲ್ಲ. ಈಗ, ನಾನು ಹೊರಡಬೇಕು' ಎಂದು ಹೊರಡಲನುವಾದ ಪುಟ್ಟ ರಾಜಕುಮಾರ.

'ಬೇಡ' ಎಂದ ರಾಜ.

ಹೊರಡಲು ಸಂಪೂರ್ಣ ತಯಾರಾಗಿದ್ದ ಪುಟ್ಟ ರಾಜಕುಮಾರ ಮುದಿಚಕ್ರವರ್ತಿಗೆ ಬೇಸರ ಮಾಡಲು ಇಷ್ಟಪಡಲಿಲ್ಲ.

'ನಾನು ತಮ್ಮ ಆಜ್ಞೆಯನ್ನು ಪರಿಪಾಲಿಸಬೇಕಾದಲ್ಲಿ', ಪುಟ್ಟ ರಾಜಕುಮಾರ ಹೇಳಿದ, 'ತಾವು ಒಂದು ವಿವೇಚನಾಪೂರ್ಣ ಆಜ್ಞೆ ಹೊರಡಿಸಿ. ಉದಾಹರಣೆಗೆ, ನಾನು ಇನ್ನೊಂದು ನಿಮಿಷದಲ್ಲಿ ಇಲ್ಲಿಂದ ಹೊರಟುಬಿಡಬೇಕೆಂದು ಆಜ್ಞೆ ಮಾಡಿ. ಅದಕ್ಕೆ ಸಮಯ ಸೂಕ್ತವಾಗಿದೆಯೆಂದು ನನ್ನ ಭಾವನೆ........'.

ರಾಜ ಏನೂ ಉತ್ತರಿಸಲಿಲ್ಲ. ಒಂದರೆಕ್ಷಣ ಅಲ್ಲಿಯೇ ನಿಂತ ಪುಟ್ಟ ರಾಜಕುಮಾರ ಅಲ್ಲಿಂದ ಹೊರಟ.

'ನಿನ್ನನ್ನು ನನ್ನ ರಾಯಭಾರಿಯನ್ನಾಗಿ ಮಾಡಿದ್ದೇನೆ', ರಾಜ ಕೂಗಿ ಹೇಳಿದ. ಆತನ ಧ್ವನಿಯಲ್ಲಿ ಅಧಿಕಾರದ ಗತ್ತು ಇತ್ತು.

'ಈ ದೊಡ್ಡವರು ವಿಚಿತ್ರದ ಜನ', ಪ್ರಯಾಣ ಆರಂಭಿಸಿದಂತೆ ಪುಟ್ಟ ರಾಜಕುಮಾರ ತನ್ನಲ್ಲೇ ಹೇಳಿಕೊಂಡ.

11

ಎರಡನೆಯ ಗ್ರಹದಲ್ಲಿ ಒಬ್ಬ ಅಹಂಕಾರದ ಮನುಷ್ಯನಿದ್ದ. ಆತ ಪುಟ್ಟ ರಾಜಕುಮಾರನನ್ನು ನೋಡಿ,

'ಆಹ್ಹಾ! ಅಹ್ಹಾ! ನನ್ನನ್ನು ಮೆಚ್ಚುವವನೊಬ್ಬ ಇತ್ತ ಬರುತ್ತಿದ್ದಾನೆ! ಎಂದು ಉದ್ಗರಿಸಿದ.

ಅಹಂಕಾರದ ಮನುಷ್ಯರಿಗೆ ಎಲ್ಲ ಮನುಷ್ಯರೂ ತಮ್ಮನ್ನು ಮೆಚ್ಚಿ ಹೊಗಳುವವರೆ.

'ನಮಸ್ಕಾರ', ಪುಟ್ಟ ರಾಜಕುಮಾರನೆಂದ. 'ನೀವು ಧರಿಸಿರುವ ಟೊಪ್ಪಿಗೆ ವಿಶೇಷ ವಾಗಿದೆಯಲ್ಲ'.

'ಅದು ವಂದಿಸಲು ಇರುವ ಟೊಪ್ಪಿಗೆ, ಅಹಂಕಾರಿ ಮನುಷ್ಯ ಹೇಳಿದ, 'ಯಾರಾದರು ನನ್ನನ್ನು ಹೊಗಳಿದಾಗಲೆಲ್ಲ ಅದನ್ನು ಎತ್ತಿ ವಂದಿಸುತ್ತೇನೆ. ನನ್ನ ದುರದೃಷ್ಟ ವೆಂದರೆ ಈ ಹಾದಿಯಲ್ಲಿ ಹಾದು ಹೋಗುವವರೇ ಇಲ್ಲ'.

'ಏನದು?' ಆತನ ಮಾತು ಒಂದೂ ಅರ್ಥವಾಗದೆ ಕೇಳಿದ ಪುಟ್ಟ ರಾಜಕುಮಾರ.

'ಚಪ್ಪಾಳೆ ತಟ್ಟು', ಹೇಳಿದ ಅಹಂಕಾರಿ ಮನುಷ್ಯ. ಪುಟ್ಟ ರಾಜಕುಮಾರ ಚಪ್ಪಾಳೆ ತಟ್ಟಿದ. ಅಹಂಕಾರಿ ಮನುಷ್ಯ ತನ್ನ ಟೊಪ್ಪಿಗೆ ಎತ್ತಿ ವಂದಿಸಿದ.

'ರಾಜನ ಭೇಟಿಗಿಂತ ಈತನ ಭೇಟಿ ತಮಾಷೆಯಾಗಿದೆ' ಎಂದುಕೊಂಡ ಪುಟ್ಟ ರಾಜಕುಮಾರ ಚಪ್ಪಾಳೆ ತಟ್ಟತೊಡಗಿದ. ಆತ ಟೊಪ್ಪಿಗೆ ಎತ್ತಿ ಎತ್ತಿ ವಂದಿಸತೊಡಗಿದ.

ಐದು ನಿಮಿಷಗಳ ನಂತರ ಈ ಆಟದ ಏಕತಾನತೆಯಿಂದ ಪುಟ್ಟ ರಾಜಕುಮಾರನಿಗೆ ಬೇಸರವಾಯಿತು.

'ಟೊಪ್ಪಿಗೆ ಕೆಳಗೆ ಬರಬೇಕಾದರೆ ಏನು ಮಾಡಬೇಕು?' ಎಂದು ಕೇಳಿದ.

ಆದರೆ ಅದು ಅಹಂಕಾರಿ ಮನುಷ್ಯನಿಗೆ ಆ ಮಾತು ಕೇಳಿಸಲೇ ಇಲ್ಲ. ಅವರಿಗೆ ತಮ್ಮನ್ನು ಹೊಗಳುವ ಮಾತು ಬಿಟ್ಟು ಬೇರೇನೂ ಕೇಳುವುದಿಲ್ಲ.

'ನನ್ನನ್ನು ನೀನು ನಿಜವಾಗಿಯೂ ಅಷ್ಟೊಂದು ಹೊಗಳುತ್ತೀಯ?' ಆತ ಪುಟ್ಟ ರಾಜಕುಮಾರನನ್ನು ಕೇಳಿದ.

'ಹೊಗಳಿಕೆ? ಹಾಗೆಂದರೇನು?'

'ಹೊಗಳಿಕೆ – ಎಂದರೆ ನೀನು ನನ್ನನ್ನು ಈ ಗ್ರಹದ ಅತ್ಯಂತ ಸುಂದರ, ಉತ್ತಮ ಧಿರಿಸಿನ, ಅತ್ಯಂತ ಸಿರಿವಂತ ಹಾಗೂ ಮಹಾನ್ ಬುದ್ಧಿಶಾಲಿ ವ್ಯಕ್ತಿ ಎಂದು ಪರಿಗಣಿಸುವುದು'.

'ಆದರೆ ಈ ಗ್ರಹದ ಮೇಲಿರುವ ವ್ಯಕ್ತಿ ನೀನೊಬ್ಬನೇ ಅಲ್ಲವೆ?'

'ಹೌದು. ಅದಕ್ಕೇ ನನಗೊಂದು ಉಪಕಾರ ಮಾಡು. ನನ್ನನ್ನೇ ಹೊಗಳು'.

'ಆಯಿತು, ನಾನು ನಿನ್ನನ್ನು ಮೆಚ್ಚಿ ಹೊಗಳುತ್ತೇನೆ', ಭುಜ ಕುಣಿಸಿ ಹೇಳಿದ ಪುಟ್ಟ ರಾಜಕುಮಾರ. 'ಆದರೆ ಆ ಹೊಗಳಿಕೆಯಲ್ಲಿ ನೀನು ಮೆಚ್ಚುವಂತಹುದು ಏನಿದೆ?'

ಆತನಿಗೆ ಉತ್ತರ ಸಿಗಲಿಲ್ಲ. ಪುಟ್ಟ ರಾಜಕುಮಾರ ಅಲ್ಲಿಂದ ಹೊರಟ.

ತನ್ನ ಪ್ರಯಾಣ ಮುಂದುವರಿಸಿದಂತೆ, 'ಈ ದೊಡ್ಡವರು ನಿಜವಾಗಿಯೂ ವಿಚಿತ್ರದ ಜನರು' ಎಂದುಕೊಂಡ.

12

ಮುಂದಿನ ಗ್ರಹದಲ್ಲಿ ಕುಡುಕನೊಬ್ಬನಿದ್ದ. ಈ ಗ್ರಹಕ್ಕೆ ಪುಟ್ಟ ರಾಜಕುಮಾರನದು ಕ್ಷಣಿಕ ಭೇಟಿಯಾದರೂ ಆತನನ್ನು ಒಂದು ರೀತಿಯ ಹತಾಶೆಯ ಭಾವನೆ ಆವರಿಸಿತು.

'ಏನು ಮಾಡುತ್ತಿದ್ದೀಯ?' ಮೌನವಾಗಿ ಕೂತಿದ್ದ ಕುಡುಕನನ್ನು ಕೇಳಿದ. ಕುಡುಕನ ಸುತ್ತಮುತ್ತ ಖಾಲಿ ಹಾಗೂ ತುಂಬಿದ ಬಾಟಲಿಗಳು ಚೆಲ್ಲಾಡಿದ್ದವು.

'ನಾನು ಕುಡಿಯುತ್ತಿದ್ದೇನೆ', ಮದ್ಯದ ಅಮಲಿನಲ್ಲಿದ್ದ ಕುಡುಕ ಹೇಳಿದ.

'ಏಕೆ ಕುಡಿಯುತ್ತಿದ್ದೀಯ?'

'ಮರೆಯಬೇಕೆಂದು'.

'ಯಾವುದನ್ನು ಮರೆಯಬೇಕೆಂದು?', ಆತನ ಪರಿಸ್ಥಿತಿ ನೋಡಿ ಕನಿಕರದಿಂದ ಕೇಳಿದ ಪುಟ್ಟ ರಾಜಕುಮಾರ.

'ನನಗೆ ನಾಚಿಕೆಯಾಗುತ್ತಿರುವುದನ್ನು ಮರೆಯಲು'.

'ನಾಚಿಕೆ? ಯಾವುದಕ್ಕಾಗಿ?', ಪುಟ್ಟ ರಾಜಕುಮಾರ ಕೇಳಿದ, ತನ್ನಿಂದ ಆತನಿಗೆ ಏನಾದರೂ ಸಹಾಯವಾಗಬಹುದೇನೋ ಎಂದುಕೊಂಡು.

'ನಾನು ಕುಡುಕನಾಗಿರುವುದಕ್ಕಾಗಿ', ಎಂದು ಹೇಳಿದ ಕುಡುಕ ಅಮಲಿನ ತೂಕಕ್ಕೆ ತಲೆಯನ್ನು ಮೇಜಿನ ಮೇಲೆ ಒರಗಿಸಿ ಮತ್ತೆ ಮೌನವಾದ.

ಆತನ ಉತ್ತರಕ್ಕೆ ಬೆರಗಾದ ಪುಟ್ಟ ರಾಜಕುಮಾರ ಅಲ್ಲಿಂದ ಹೊರಟ.

'ಈ ದೊಡ್ಡವರು ನಿಜವಾಗಿಯೂ ತುಂಬಾ ವಿಚಿತ್ರದವರು', ತನಗೆ ತಾನೇ ಹೇಳಿಕೊಳ್ಳುತ್ತಾ ಪ್ರಯಾಣ ಮುಂದುವರೆಸಿದ.

13

ನಾಲ್ಕನೆಯ ಗ್ರಹ ಒಬ್ಬ ವ್ಯಾಪಾರಿಗೆ ಸೇರಿದುದಾಗಿತ್ತು. ಆತ ತನ್ನ ವ್ಯಾಪಾರದ ಲೆಕ್ಕಾಚಾರದಲ್ಲಿ ಎಷ್ಟು ತಲ್ಲೀನನಾಗಿದ್ದನೆಂದರೆ ಪುಟ್ಟ ರಾಜಕುಮಾರ ಬಂದಿದ್ದನ್ನೂ ಗಮನಿಸಲಿಲ್ಲ.

'ನಮಸ್ಕಾರ', ಪುಟ್ಟ ರಾಜಕುಮಾರ ಹೇಳಿದ, 'ನಿಮ್ಮ ಸಿಗರೇಟು ಆರಿ ಹೋಗಿದೆ'.

'ಮೂರು ಮತ್ತು ಎರಡು ಐದಾಗುತ್ತದೆ. ಐದು ಮತ್ತು ಏಳು ಹನ್ನೆರಡು. ಹನ್ನೆರಡು ಮತ್ತು ಮೂರು ಹದಿನೈದು. ನಮಸ್ಕಾರ. ಹದಿನೈದು ಮತ್ತು ಏಳು ಇಪ್ಪತ್ತೆರಡು. ಇಪ್ಪತ್ತೆರಡು ಮತ್ತು ಆರು ಇಪ್ಪತ್ತೆಂಟು. ಸಿಗರೇಟು ಮತ್ತೆ ಹೊತ್ತಿಸಲು ನನಗೆ ಸಮಯವಿಲ್ಲ. ಇಪ್ಪತ್ತಾರು ಮತ್ತು ಐದು ಮುವ್ವತ್ತೊಂದು ಆಗುತ್ತದೆ. ಹೋ! ಹಾಗಾದರೆ ಒಟ್ಟು ಐವತ್ತು ಕೋಟಿ ಹದಿನಾರು ಲಕ್ಷ ಇಪ್ಪತ್ತೆರಡು ಸಾವಿರದ ಏಳು ನೂರಾ ಮುವ್ವತ್ತೊಂದು ಆಯಿತು.....'.

'ಐವತ್ತು ಕೋಟಿ ಏನು?', ಕೇಳಿದ ಪುಟ್ಟ ರಾಜಕುಮಾರ ಏನೊಂದೂ ಅರ್ಥವಾಗದೆ.

'ಅರೆ! ನೀನಿನ್ನೂ ಇಲ್ಲೇ ಇದ್ದೀಯ? ಐವತ್ತು ಕೋಟಿ – ನಾನು ಲೆಕ್ಕ ನಿಲ್ಲಿಸುವ ಹಾಗಿಲ್ಲ......... ನನಗೆ ಬೇಕಾದಷ್ಟು ಕೆಲಸವಿದೆ! ಎಲ್ಲಾ ಬಹಳ ಮಹತ್ವದ ವಿಷಯಗಳು. ಸುಮ್ಮನೆ ಕೆಲಸಕ್ಕೆ ಬಾರದ ವಿಷಯದಲ್ಲಿ ಸಮಯ ಹಾಳುಮಾಡುವಹಾಗಿಲ್ಲ. ನನಗೆ ತೊಂದರೆ ಕೊಡಬೇಡ....'.

'ಐವತ್ತು ಕೋಟಿ ಏನು?', ಪ್ರಶ್ನೆ ಕೇಳಿದ ನಂತರ ಉತ್ತರ ಸಿಗುವವರೆಗೂ ಅದರ ಬೆಂಬಿಡದ ಪುಟ್ಟ ರಾಜಕುಮಾರ ಕೇಳಿದ.

ವ್ಯಾಪಾರಿ ತಲೆ ಎತ್ತಿ ಪುಟ್ಟ ರಾಜಕುಮಾರನನ್ನೇ ದಿಟ್ಟಿಸಿ ನೋಡಿದ.

'ಈ ಗ್ರಹದಲ್ಲಿ ಕಳೆದ ಐವತ್ತನಾಲ್ಕು ವರ್ಷಗಳಿಂದ ಇರುವ ನನಗೆ ಲೆಕ್ಕಾಚಾರದಲ್ಲಿ ಕೇವಲ ಮೂರು ಸಾರಿ ಅಡಚಣೆ ಉಂಟಾಗಿದೆ. ಮೊದಲ ಸಾರಿ ಇಪ್ಪತ್ತೆರಡು ವರ್ಷಗಳ ಹಿಂದೆ, ನಿದ್ರಿಸುವ ಹೆಬ್ಬಾತೊಂದು, ಯಾರಿಗೆ ಗೊತ್ತು ಎಲ್ಲಿತ್ತೋ, ನನ್ನ ಮೇಲೆ ಬಿದ್ದಾಗ. ಆ ಪಕ್ಷಿ ಹೇಗೆ ಕೂಗಿತೆಂದರೆ, ಆ ಕೂಗು ಎಲ್ಲೆಲ್ಲೂ ಪ್ರತಿಧ್ವನಿಸಿ ನನ್ನ ಲೆಕ್ಕಾಚಾರದಲ್ಲಿ ನಾಲ್ಕು ತಪ್ಪು ಮಾಡಿದೆ. ಎರಡನೆಯದು ಹನ್ನೊಂದು ವರ್ಷಗಳ ಹಿಂದೆ, ನನಗೆ ಕೀಲು ನೋವು ಬಂದಾಗ. ನನಗಿಲ್ಲಿ ಯಾವುದೇ ವ್ಯಾಯಾಮವಿಲ್ಲವಲ್ಲ. ಅದಕ್ಕೆ ನನಗೆ ಸಮಯವೇ ಇಲ್ಲ, ಅದು ಬೇರೆ ಮಾತು. ಮೂರನೆಯದು ಈಗ, ನಿನ್ನಿಂದ. ನಾನೇನು ಹೇಳುತ್ತಿದ್ದೆ? ಹ್ಹಾಂ, ಐವತ್ತು ಕೋಟಿ......... '

'ಕೋಟಿಗಳು ಏನು?'

ಈ ಪ್ರಶ್ನೆಗೆ ಉತ್ತರ ನೀಡದೆ ತಾನು ತನ್ನ ಲೆಕ್ಕಾಚಾರದಲ್ಲಿ ಮುಂದುವರಿಯುವುದು ಸಾಧ್ಯವೇ ಇಲ್ಲ ಎನ್ನಿಸಿತು ವ್ಯಾಪಾರಿಗೆ.

'ಕೋಟಿಗಟ್ಟಲೆ ಇರುವ ಆ ಪುಟ್ಟ ವಸ್ತುಗಳು. ಆಗಾಗ ಆಕಾಶದಲ್ಲಿ ಕಾಣುತ್ತವೆ ನೋಡು', ಕೊನೆಗೂ ಆತ ಹೇಳಿದ.

'ನೊಣಗಳೆ?'

'ಅಲ್ಲ, ಅಲ್ಲ. ಪುಟ್ಟ ಹೊಳೆಯುವ ವಸ್ತುಗಳು'.

'ಜೇನುನೊಣಗಳೆ?'

'ಅಲ್ಲಯ್ಯ ಅಲ್ಲ. ಚಿನ್ನದಂತಹ ಪುಟ್ಟ ವಸ್ತುಗಳು. ಅದೇ ಸೋಮಾರಿ ಜನ ಅವುಗಳನ್ನು ನೋಡುತ್ತಾ ಕೆಲಸಕ್ಕೆ ಬಾರದ ಕನಸು ಕಾಣುತ್ತಾರಲ್ಲ, ಅವು. ನಾನಂತೂ ಮಹತ್ವದ ವಿಷಯದಲ್ಲಿ ತಲ್ಲೀನನಾಗಿದ್ದೇನೆ. ನನ್ನ ಬದುಕಲ್ಲಿ

ಕೆಲಸಕ್ಕೆ ಬಾರದ ಕನಸು ಕಾಣಲು ನನಗೆ ಸಮಯವೇ ಇಲ್ಲ'.

'ಹೋ! ಅಂದರೆ ನಕ್ಷತ್ರಗಳೆ?'

'ಹಾ, ಹೌದು. ನಕ್ಷತ್ರಗಳು'.

'ಐವತ್ತು ಕೋಟಿ ನಕ್ಷತ್ರಗಳಿಂದ ನೀವೇನು ಮಾಡುತ್ತೀರಿ?'

'ಐವತ್ತು ಕೋಟಿ ಹದಿನಾರು ಲಕ್ಷ ಇಪ್ಪತ್ತೆರಡುಸಾವಿರದ ಏಳುನೂರ ಮುವ್ವತ್ತೊಂದು. ನಾನು ಮಹತ್ವದ ವಿಷಯಗಳಲ್ಲಿ ತಲೆ ಕೆಡಿಸಿಕೊಂಡಿದ್ದೇನೆ ಹಾಗೂ ನನ್ನ ಲೆಕ್ಕ ಯಾವಾಗಲೂ ನಿಖರವಾಗಿರುತ್ತದೆ'.

'ಈ ನಕ್ಷತ್ರಗಳಿಂದ ಏನು ಮಾಡುತ್ತೀರಿ?'

'ನಾನೇನು ಮಾಡುತ್ತೀನಿ ಅಂತಾನಾ ಕೇಳುತ್ತಿರೋದು?'

'ಹೌದು'.

'ಏನೂ ಇಲ್ಲ. ನಾನು ಅವುಗಳ ಯಜಮಾನ'.

'ಆ ನಕ್ಷತ್ರಗಳೆಲ್ಲಾ ನಿಮ್ಮವೆ?'

'ಹೌದು'.

'ಆದರೆ ಅವುಗಳೆಲ್ಲವುಗಳ ರಾಜನನ್ನು ನಾನು ಈಗಾಗಲೇ ಕಂಡಿದ್ದೇನೆ......'

'ರಾಜರು ಅವುಗಳ ಯಜಮಾನರಲ್ಲ. ಅವರೇನಿದ್ದರೂ ಅವುಗಳ ರಾಜ್ಯಭಾರ ಮಾಡುತ್ತಾರೆ. ಅವೆಲ್ಲ ಒಂದು ರೀತಿಯ ಕ್ಲಿಷ್ಟಕರ ವಿಷಯಗಳು, ನಿನಗರ್ಥವಾಗುವುದಿಲ್ಲ ಬಿಡು.'

'ನಕ್ಷತ್ರಗಳನ್ನು ಹೊಂದುವುದರಿಂದ ಲಾಭವೇನು?'

'ಅವು ನನ್ನನ್ನು ಸಾಹುಕಾರನನ್ನಾಗಿ ಮಾಡುತ್ತವೆ'.

'ಸಾಹುಕಾರನಾಗುವುದರಿಂದ ಪ್ರಯೋಜನವೇನು?'

'ಸಾಹುಕಾರನಾದರೆ, ಇನ್ನೂ ಮುಂದೆ ಕಂಡುಹಿಡಿಯಲ್ಪಡುವ ಹೊಸ ಹೊಸ ನಕ್ಷತ್ರಗಳನ್ನು ಕೊಳ್ಳಬಹುದು'.

'ಈ ಮನುಷ್ಯನೂ ಆ ಕುಡುಕನ ವಿವೇಚನೆಯ ರೀತಿಯಲ್ಲಿಯೇ ಮಾತನಾಡುತ್ತಿದ್ದಾನೆ' ಎಂದುಕೊಂಡ ಪುಟ್ಟ ರಾಜಕುಮಾರ. ಆದರೂ ಅವನಿಗೆ ಇನ್ನೂ ಹಲವಾರು ಪ್ರಶ್ನೆಗಳಿಗೆ ಉತ್ತರ ಬೇಕಿತ್ತು.

'ನಕ್ಷತ್ರಗಳ ಯಜಮಾನನಾಗುವುದು ಹೇಗೆ ಸಾಧ್ಯ?'

'ಅಂದರೆ? ಅವು ಇನ್ನು ಯಾರಿಗೆ ಸೇರಿರುತ್ತವೆ?', ವ್ಯಾಪಾರಿ ಸಿಡುಕಿನಿಂದ ಕೇಳಿದ.

'ನನಗೆ ಗೊತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಅವು ಯಾರಿಗೂ ಸೇರಿರುವುದಿಲ್ಲ'.

'ಹಾಗಾದರೆ ಅವು ನನಗೇ ಸೇರಿವೆ. ಏಕೆಂದರೆ ಅವುಗಳ ಒಡೆತನದ ಬಗ್ಗೆ ನಾನೇ ಮೊದಲಿಗೆ ಆಲೋಚಿಸಿದ್ದು'.

'ಅವುಗಳನ್ನು ಹೊಂದಲು, ಒಡೆತನದ ಆಲೋಚನೆಯಷ್ಟೇ ಸಾಕೆ?'

'ಹೌದು ಮತ್ತೆ. ಯಾರಿಗೂ ಸೇರಿರದ ವಜ್ರದುಂಗುರ ಸಿಕ್ಕಿದರೆ ಅದು ನಿನ್ನದಲ್ಲವೆ? ಯಾರಿಗೂ ಸೇರಿರದ ದ್ವೀಪವೊಂದು ಕಂಡರೆ ಅದು ನಿನ್ನದೆ. ಬೇರೆಯವರಿಗಿಂತ ಮೊದಲು ನಿನಗೇ ಒಂದು ಹೊಸ ವಿಚಾರ ಹೊಳೆದರೆ ನೀನು ಪೇಟೆಂಟ್ ಮಾಡಿಸಿ ಅದನ್ನು ನಿನ್ನದಾಗಿಸಿಕೊಳ್ಳುವುದಿಲ್ಲವೆ? ಅದೇ ರೀತಿ ಈ ನಕ್ಷತ್ರಗಳು ನನ್ನವು. ನನಗಿಂತ ಮೊದಲು ಯಾರೂ ಅವುಗಳನ್ನು ಹೊಂದುವ ಬಗ್ಗೆ ಆಲೋಚನೆ ಮಾಡಿಲ್ಲ'.

'ನೀವು ಹೇಳುವುದೇನೋ ಸರಿ', ಹೇಳಿದ ಪುಟ್ಟ ರಾಜಕುಮಾರ. 'ಆದರೆ ಆ ನಕ್ಷತ್ರಗಳನ್ನು ಏನು ಮಾಡುವಿರಿ?'

'ನನಗೆ ಅವುಗಳ ಮೇಲೆ ಅಧಿಕಾರವಿದೆ', ವ್ಯಾಪಾರಿ ಹೇಳಿದ. 'ನಾನವುಗಳನ್ನು ಎಣಿಸುತ್ತೇನೆ, ಮತ್ತೆ ಮತ್ತೆ ಎಣಿಸುತ್ತೇನೆ. ಅದೇನೂ ಸುಲಭದ ಕೆಲಸವಲ್ಲ. ಆದರೆ ನಾನು ಮಹತ್ವದ ವಿಷಯಗಳಲ್ಲಿ ಸಹಜ ಆಸಕ್ತಿ ಉಳ್ಳವನು'.

ಪುಟ್ಟ ರಾಜಕುಮಾರನಿಗೆ ಆ ಉತ್ತರದಿಂದ ತೃಪ್ತಿಯಾಗಲಿಲ್ಲ.

'ನನ್ನ ಬಳಿ ಒಂದು ರೇಷ್ಮೆ ಕರವಸ್ತ್ರ ಇತ್ತು', ಆತ ಹೇಳಿದ. 'ನಾನು ಅದನ್ನು ನನಗೆ ಬೇಕಾದಾಗ ನನ್ನ ಕೊರಳಿಗೆ ಕಟ್ಟಿಕೊಂಡು ಹೋಗುತ್ತಿದ್ದೆ. ನನ್ನ ಬಳಿ ಒಂದು ಸುಂದರ ಹೂವಿದ್ದರೆ, ನನಗೆ ಬೇಕಾದಾಗ ಅದನ್ನು ಕೊಯ್ದು ಕೊಂಡೊಯ್ಯಬಲ್ಲೆ. ಆದರೆ ಆಕಾಶದಿಂದ ನಕ್ಷತ್ರಗಳನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲವಲ್ಲ..... '

'ಇಲ್ಲ. ಆದರೆ ನಾನು ಅವುಗಳನ್ನು ಬ್ಯಾಂಕಿನಲ್ಲಿ ಇಡುತ್ತೇನೆ'.

'ಹಾಗಂದರೆ?'

‘ಅಂದರೆ, ನಕ್ಷತ್ರಗಳ ಸಂಖ್ಯೆಯನ್ನು ಒಂದು ಸಣ್ಣ ಹಾಳೆಯ ಮೇಲೆ ಬರೆದು ಅದನ್ನು ಕಪಾಟಿನಲ್ಲಿಟ್ಟು ಬೀಗ ಹಾಕುತ್ತೇನೆ’.

‘ಅಷ್ಟೆಯೆ?’

‘ಅದು ಬೇಕಾದಷ್ಟಾಯಿತು’, ವ್ಯಾಪಾರಿ ಹೇಳಿದ.

‘ಒಳ್ಳೆ ತಮಾಷೆಯಾಗಿದೆ’, ಮನದಲ್ಲೇ ಅಂದುಕೊಂಡ ಪುಟ್ಟ ರಾಜಕುಮಾರ. ‘ಒಂದು ರೀತಿ ಕಾವ್ಯಮಯವಾಗಿಯೂ ಇದೆ. ಆದರೆ ಇದು ಯಾವುದೇ ಮಹತ್ವದ ವಿಷಯವಲ್ಲ’.

ಮಹತ್ವದ ವಿಷಯಗಳ ಬಗ್ಗೆ ಪುಟ್ಟ ರಾಜಕುಮಾರನಿಗೆ ದೊಡ್ಡವರಿಗಿಂತ ಭಿನ್ನವಾದ ತನ್ನದೇ ಆದ ಆಲೋಚನೆಗಳಿದ್ದವು.

‘ನನ್ನಲ್ಲಿ ನನ್ನದೇ ಆದ ಹೂವಿದೆ’, ಪುಟ್ಟ ರಾಜಕುಮಾರ ವ್ಯಾಪಾರಿಗೆ ಹೇಳತೊಡಗಿದ. ‘ನಾನದಕ್ಕೆ ದಿನಾಲೂ ನೀರು ಹನಿಸುತ್ತೇನೆ. ನಾನು ಮೂರು ಅಗ್ನಿಪರ್ವತಗಳನ್ನು ಹೊಂದಿದ್ದೇನೆ. ಅವುಗಳನ್ನು ಪ್ರತಿವಾರ ಶುಚಿಗೊಳಿಸುತ್ತೇನೆ (ನಿಷ್ಕ್ರಿಯವಾಗಿರುವುದನ್ನೂ ಸಹ, ಯಾರಿಗೆ ಗೊತ್ತು ಏನಾಗುತ್ತದೋ). ನನ್ನ ಕೆಲಸದಿಂದ ನಾನು ಹೊಂದಿರುವ ಅಗ್ನಿಪರ್ವತಗಳಿಗೆ ಹಾಗೂ ಹೂವಿಗೆ ಸ್ವಲ್ಪವಾದರೂ ಉಪಯೋಗವಾಗುತ್ತದೆ. ಆದರೆ ನಕ್ಷತ್ರಗಳಿಗೆ ನಿಮ್ಮ ಉಪಯೋಗವೇನೂ ಇಲ್ಲ....... ’

ವ್ಯಾಪಾರಿ ಏನೋ ಹೇಳಲು ಬಾಯಿಬಿಟ್ಟ, ಆದರೆ ಹೇಳಲು ಅತನಲ್ಲಿ ಏನೂ ಇರಲಿಲ್ಲ. ಪುಟ್ಟ ರಾಜಕುಮಾರ ಅಲ್ಲಿಂದ ಹೊರಟ.

‘ನಿಜವಾಗಿಯೂ ಈ ದೊಡ್ಡವರು ಬಹಳ ವಿಚಿತ್ರದವರು’, ತನಗೆ ತಾನೇ ಹೇಳಿಕೊಂಡು ಪುಟ್ಟ ರಾಜಕುಮಾರ ಹೊರಟ.

14

ಐದನೇ ಗ್ರಹ ವಿಚಿತ್ರವಾಗಿತ್ತು. ಎಲ್ಲಕ್ಕಿಂತ ಸಣ್ಣ ಗ್ರಹವಾಗಿತ್ತು ಅದು. ಆ ಗ್ರಹದ ಮೇಲೆ ಒಂದು ಬೀದಿದೀಪದ ಕಂಬ ಹಾಗೂ ದೀಪ ಹಚ್ಚುವವನಿಗಾಗುವಷ್ಟು ಸ್ಥಳಾವಕಾಶ ಮಾತ್ರ ಇತ್ತು. ಒಂದು ಮನೆಯೂ ಇಲ್ಲದ, ಇತರ ಜನರೇ ಇಲ್ಲದ, ಆಕಾಶದ ಯಾವುದೋ ಮೂಲೆಯಲ್ಲಿರುವ ಆ ಸಣ್ಣ ಗ್ರಹದ ಮೇಲೆ ಬೀದಿ ದೀಪದ ಹಾಗೂ ದೀಪ ಹಚ್ಚುವವನ ಅವಶ್ಯಕತೆಯಾದರೂ ಏಕಿದೆ ಎನ್ನಿಸಿತು. ಆದರೂ,

‘ಈತನೂ ಒಬ್ಬ ಅಸಂಬದ್ಧ, ಹಾಸ್ಯಸ್ಪದ ವ್ಯಕ್ತಿಯಾಗಿರಬಹುದು. ಆದರೆ ಆ ರಾಜ, ಅಹಂಕಾರಿ ಮನುಷ್ಯ, ವ್ಯಾಪಾರಿ ಹಾಗೂ ಕುಡುಕನಷ್ಟು ಹಾಸ್ಯಸ್ಪದ ವ್ಯಕ್ತಿಯಾಗಿರಲಿಕ್ಕಿಲ್ಲ. ಏಕೆಂದರೆ ಈತನ ಕೆಲಸಕ್ಕೆ ಸ್ವಲ್ಪವಾದರೂ ಅರ್ಥವಿದೆ. ಆತ ಬೀದಿ ದೀಪವನ್ನು ಹಚ್ಚಿದನೆಂದರೆ, ಆತ ಒಂದು ನಕ್ಷತ್ರಕ್ಕೆ ಅಥವಾ ಒಂದು ಹೂವಿಗೆ ಜೀವಕೊಟ್ಟಂತಾಗುತ್ತದೆ; ದೀಪ ಆರಿಸಿದಾಗ ಹೂವನ್ನು ಅಥವಾ ನಕ್ಷತ್ರವನ್ನು ನಿದ್ರೆಮಾಡಿಸಿದಂತಾಗುತ್ತದೆ. ಒಂದು ರೀತಿಯಲ್ಲಿ ಸುಂದರ ಕೆಲಸ. ಕೆಲಸ ಸುಂದರವಾದುದರಿಂದ ನಿಜವಾಗಿಯೂ ಅದು ಅರ್ಥಪೂರ್ಣ ಹಾಗೂ ಪ್ರಯೋಜನಕಾರಿ’ ಎಂದುಕೊಂಡ.

ಆ ಗ್ರಹವನ್ನು ತಲುಪಿ ಪುಟ್ಟ ರಾಜಕುಮಾರ ದೀಪ ಹಚ್ಚುವವನನ್ನು ಗೌರವಪೂರ್ವಕವಾಗಿ ವಂದಿಸಿದ.

‘ನಮಸ್ಕಾರ. ಏಕೆ ದೀಪವನ್ನು ಆರಿಸಿದಿರಿ?’

‘ಅದು ನನಗೆ ನೀಡಿರುವ ಆದೇಶ’, ಹೇಳಿದ ದೀಪ ಹಚ್ಚುವವ. ‘ಶುಭ ದಿನ’.

‘ಏನದು ಆದೇಶ?’

‘ದೀಪ ಆರಿಸಬೇಕೆನ್ನುವುದು ನನಗೆ ನೀಡಿರುವ ಆದೇಶ. ಶುಭ ರಾತ್ರಿ’.

ಮತ್ತೆ ದೀಪ ಹಚ್ಚಿದ.

‘ಹಾಗಾದರೆ ದೀಪ ಮತ್ತೆ ಏಕೆ ಹಚ್ಚಿದಿರಿ?’

‘ಅದು ನನಗೆ ನೀಡಿರುವ ಆದೇಶ’, ದೀಪ ಹಚ್ಚುವವ ಹೇಳಿದ.

‘ನನಗೇನೂ ಅರ್ಥವಾಗುತ್ತಿಲ್ಲ’, ಪುಟ್ಟ ರಾಜಕುಮಾರ ಹೇಳಿದ.

‘ಅದರಲ್ಲಿ ಅರ್ಥಮಾಡಿಕೊಳ್ಳುವಂಥದು ಏನೂ ಇಲ್ಲ’, ಹೇಳಿದ ದೀಪ ಹಚ್ಚುವವ. ‘ಆದೇಶಗಳೆಂದರೆ ಆದೇಶಗಳು, ದೀಪ ಆರಿಸಿ ಹೇಳಿದ, ‘ಶುಭ ದಿನ’.

ನಂತರ ಬೆವರು ಸುರಿಯುತ್ತಿದ್ದ ತನ್ನ ಹಣೆಯನ್ನು ಕೆಂಪು ಚೌಕಳಿಯ ಕರವಸ್ತ್ರದಿಂದ ಒರೆಸಿಕೊಂಡ.

‘ನನ್ನದು ದರಿದ್ರ ಕೆಲಸ. ಹಿಂದಿನ ದಿನಗಳಲ್ಲಿ ಅದು ವಿವೇಚನಾ ಪೂರ್ಣವಾಗಿತ್ತು. ಬೆಳಿಗ್ಗೆ ದೀಪ ಆರಿಸುತ್ತಿದ್ದೆ ಮತ್ತೆ ಸಂಜೆ ದೀಪ ಹೊತ್ತಿಸುತ್ತಿದ್ದೆ. ಇವುಗಳ ನಡುವೆ ಹಗಲೆಲ್ಲಾ ವಿಶ್ರಾಂತಿಗೆ ಹಾಗೂ ರಾತ್ರಿಯೆಲ್ಲಾ ನಿದ್ರಿಸಲು ಸಮಯ ಸಿಗುತ್ತಿತ್ತು’

'ಈಗ ಆದೇಶವನ್ನು ಬದಲಾಯಿಸಿದ್ದಾರೆಯೆ?'

'ಇಲ್ಲ. ಆದೇಶವನ್ನು ಬದಲಿಸಿಲ್ಲ', ಹೇಳಿದ ದೀಪ ಹಚ್ಚುವವ. 'ಅದೇ ದುರಂತ! ವರ್ಷವರ್ಷ ಕಳೆದಂತೆ ಗ್ರಹ ತಿರುಗುವ ವೇಗ ಹೆಚ್ಚಾಗಿದೆ. ಆದರೆ

ಆದೇಶವನ್ನು ಬದಲಿಸಿಲ್ಲ!! '

'ಮತ್ತೇನಾಯಿತು?', ಕೇಳಿದ ಪುಟ್ಟ ರಾಜಕುಮಾರ.

'ಮತ್ತೆ .... ಈಗ ಗ್ರಹ ಪ್ರತಿ ನಿಮಿಷಕ್ಕೊಮ್ಮೆ ತಿರುಗುತ್ತದೆ. ನನಗೆ ವಿಶ್ರಾಂತಿಗೆ ಒಂದು ಸೆಕೆಂಡ್ ಸಮಯವೂ ಸಿಗುವುದಿಲ್ಲ. ಪ್ರತಿ ನಿಮಿಷಕ್ಕೊಮ್ಮೆ ನಾನು ದೀಪ ಹೊತ್ತಿಸಬೇಕು ಹಾಗೂ ಆರಿಸಬೇಕು!'

'ಒಳ್ಳೇ ತಮಾಷೆಯ ವಿಷಯ! ನೀನು ವಾಸಿಸುವ ಈ ಗ್ರಹದಲ್ಲಿ ನಿಮಿಷಕ್ಕೊಂದು ದಿನವಾಗುತ್ತದೆ!'

'ಅದರಲ್ಲಿ ತಮಾಷೆ ಏನಿದೆ? ಹೇಳಿದ ದೀಪ ಹಚ್ಚುವವ. 'ನಾವಿಲ್ಲಿ ಮಾತನಾಡುತ್ತಾ ನಿಂತಿರುವಂತೆ ಒಂದು ತಿಂಗಳು ಕಳೆದಿದೆ ಗೊತ್ತಾಯಿತೆ?'

'ಏನು? ಒಂದು ತಿಂಗಳೆ!?'

'ಹೌದು, ಒಂದು ತಿಂಗಳು. ಮುವ್ವತ್ತು ನಿಮಿಷ – ಮುವ್ವತ್ತು ದಿನಗಳು. ಶುಭ ರಾತ್ರಿ.'

ದೀಪ ಮತ್ತೆ ಹಚ್ಚಿದ.

ಪ್ರಾಮಾಣಿಕವಾಗಿ ತನ್ನ ಕರ್ತವ್ಯ ಪರಿಪಾಲನೆಯಲ್ಲಿ ನಿರತನಾಗಿದ್ದ ದೀಪ ಹಚ್ಚುವವ ಪುಟ್ಟ ರಾಜಕುಮಾರನಿಗೆ ಇಷ್ಟವಾದ. ತನ್ನ ಗ್ರಹದಲ್ಲಿ ತಾನು ಕೂತಿದ್ದ ಕುರ್ಚಿಯನ್ನು ಕೊಂಚ ಅತ್ತಿತ್ತ ಬದಲಿಸಿ ಸೂರ್ಯಾಸ್ತವನ್ನು ನೋಡುತ್ತಿದ್ದುದು ನೆನಪಾಯಿತು; ಇಲ್ಲಿ ತನ್ನ ಗೆಳೆಯನಿಗೆ ಸಹಾಯ ಮಾಡಬೇಕೆನ್ನಿಸಿತು.

'ನೀನು ಬೇಕಾದಾಗ ವಿಶ್ರಾಂತಿ ಪಡೆಯುವುದು ಹೇಗೆಂದು ಹೇಳಿಕೊಡಬಲ್ಲೆ ....'

'ಯಾವಾಗಲೂ ವಿಶ್ರಾಂತಿ ಪಡೆಯಬೇಕೆಂಬುದೇ ನನ್ನ ಇಚ್ಛೆ, ದೀಪ ಹಚ್ಚುವವ ಹೇಳಿದ.'

ಒಬ್ಬ ಮನುಷ್ಯ ಏಕಕಾಲದಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರತನಾಗಿರುವುದೂ ಹಾಗೂ ಸೋಮಾರಿಯಾಗಿರುವುದೂ ಸಾಧ್ಯವಿದೆ.

ಪುಟ್ಟ ರಾಜಕುಮಾರ ತನ್ನ ವಿವರಣೆ ನೀಡುತ್ತಾ ಹೋದ:

'ನಿನ್ನ ಗ್ರಹ ಎಷ್ಟು ಸಣ್ಣದೆಂದರೆ ಮೂರು ಹೆಜ್ಜೆಯಲ್ಲಿ ಅದರ ಒಂದು ಸುತ್ತು ಹಾಕಿಬಿಡಬಹುದು. ನೀನು ಯಾವಾಗಲೂ ಬೆಳಕಿನಲ್ಲಿ ಇರಬೇಕಾದಲ್ಲಿ ನಿಧಾನವಾಗಿ ನಡೆಯುತ್ತಿರು. ನಿನಗೆ ವಿಶ್ರಾಂತಿ ಬೇಕಾದಾಗಲೂ ನಡೆಯುತ್ತಿರು– ನಿನಗೆ ಬೇಕಾದಷ್ಟು ಹೊತ್ತು ಬೆಳಕಿನ ದಿನ ಮುಂದುವರೆಯುತ್ತಿರುತ್ತದೆ.'

'ಇದರಿಂದ ನನಗೇನೂ ಒಳ್ಳೆಯದಾಗುವುದಿಲ್ಲ', ದೀಪ ಹಚ್ಚುವವ ಹೇಳಿದ.

'ನನ್ನ ಬದುಕಲ್ಲಿ ನಾನು ಹೆಚ್ಚು ಪ್ರೀತಿಸುವುದೆಂದರೆ ನಿದ್ದೆಯನ್ನು.'

'ಹಾಗಿದ್ದರೆ, ನೀನೊಬ್ಬ ನತದೃಷ್ಟ', ಪುಟ್ಟ ರಾಜಕುಮಾರ ಹೇಳಿದ.

'ಹೌದು, ನಾನೊಬ್ಬ ನತದೃಷ್ಟ', ಹೇಳಿದ ದೀಪ ಹಚ್ಚುವವ. 'ಶುಭ

ದಿನ' ಹೇಳಿ ದೀಪ ಆರಿಸಿದ.

'ಈ ಮನುಷ್ಯನನ್ನು ಆ ರಾಜ, ಅಹಂಕಾರಿ ಮನುಷ್ಯ, ಕುಡುಕ ಹಾಗೂ ವ್ಯಾಪಾರಿ ಎಲ್ಲರೂ ಗೇಲಿಮಾಡಬಹುದು. ಆದರೆ ನನಗೆ ಈತ ತಮಾಷೆಯ ಅಥವಾ ವಿಚಿತ್ರದ ವ್ಯಕ್ತಿಯಾಗಿ ಕಾಣುವುದಿಲ್ಲ. ಏಕೆಂದರೆ ಆತ ತನ್ನ ಬಗ್ಗೆಯಲ್ಲದೆ ಬೇರೊಂದು ವಿಷಯದ ಬಗ್ಗೆಯೂ ಆಲೋಚಿಸುತ್ತಿದ್ದಾನೆ.

'ಈ ಎಲ್ಲ ಜನರಲ್ಲಿ ಈತನು ಮಾತ್ರ ನನ್ನ ಗೆಳೆಯನಾಗಬಹುದಿತ್ತು. ಆದರೆ ಈ ಗ್ರಹ ಎಷ್ಟು ಸಣ್ಣದಾಗಿದೆಯೆಂದರೆ ಅಲ್ಲಿ ಇಬ್ಬರಿಗೆ ಸ್ಥಳವೇ ಇಲ್ಲ........' ಎಂದು ಮನಸ್ಸಿನಲ್ಲೇ ಹೇಳಿಕೊಂಡು ವಿಷಾದದ ನಿಟ್ಟುಸಿರಿಟ್ಟ.

ಆ ಗ್ರಹ 1440 ಸೂರ್ಯಾಸ್ತಗಳನ್ನು ಹೊಂದಿದ ಅದೃಷ್ಟಶಾಲಿ ಗ್ರಹವಾಗಿತ್ತು. ಅದನ್ನು ಬಿಟ್ಟು ಹೋಗಲು ತನಗಿಷ್ಟವಿಲ್ಲವೆಂಬುದನ್ನು ಪುಟ್ಟ ರಾಜಕುಮಾರ ವ್ಯಕ್ತಪಡಿಸಲಿಲ್ಲ.

15

ಆರನೆಯ ಗ್ರಹ ಈ ಹಿಂದಿನ ಗ್ರಹಕ್ಕಿಂತ ಹತ್ತುಪಟ್ಟು ದೊಡ್ಡದಾಗಿತ್ತು. ಅದರಲ್ಲಿ ದೊಡ್ಡ ದೊಡ್ಡ ಗ್ರಂಥಗಳ ಮಧ್ಯೆ ತಲೆ ಹುದುಗಿಸಿಕೊಂಡಿದ್ದ ವೃದ್ಧ ವ್ಯಕ್ತಿಯೊಬ್ಬನಿದ್ದ. ಆತ ಪುಟ್ಟ ರಾಜಕುಮಾರನನ್ನು ನೋಡಿ,

'ಹೋ ನೋಡಿಲ್ಲಿ! ಪರಿಶೋಧಕನೊಬ್ಬ ಬರುತ್ತಿದ್ದಾನೆ!! ಎಂದು ಉದ್ಗರಿಸಿದ.

ಅಲ್ಲೇ ಮೇಜಿನ ಮೇಲೆ ಕೂತ ಪುಟ್ಟ ರಾಜಕುಮಾರ ಏದುಸಿರು ಬಿಡುತ್ತಿದ್ದ. ಈಗಾಗಲೇ ಆತ ಬಹಳಷ್ಟು ಪ್ರಯಾಣ ಮಾಡಿ ಬಳಲಿದ್ದ.

'ಎಲ್ಲಿಂದ ಬರುತ್ತಿದ್ದೀಯ?' ವೃದ್ಧ ಕೇಳಿದ.

'ಆ ದೊಡ್ಡ ಪುಸ್ತಕ, ಏನದು? ನೀವೇನು ಮಾಡುತ್ತಿದ್ದೀರಿ?', ಪುಟ್ಟ ರಾಜಕುಮಾರ ಕೇಳಿದ.

'ನಾನೊಬ್ಬ ಭೂಗೋಳಶಾಸ್ತ್ರಜ್ಞ'.

'ಹಾಗಂದರೆ?'

'ಭೂಗೋಳಶಾಸ್ತ್ರಜ್ಞನೆಂದರೆ ಎಲ್ಲ ಸಾಗರಗಳ, ನದಿಗಳ, ನಗರಗಳ, ಪರ್ವತಗಳ ಹಾಗೂ ಮರುಭೂಮಿಗಳ ಸ್ಥಾನ ವಿವರಣೆ ತಿಳಿದಿರುವಂತಹ ವಿದ್ವಾಂಸ'.

'ಇದೊಂದು ಆಸಕ್ತಿಯ ವಿಷಯ', ಹೇಳಿದ ಪುಟ್ಟ ರಾಜಕುಮಾರ.

'ಇಲ್ಲಿಯಾದರೂ ನಿಜವಾದ ವೃತ್ತಿಯನ್ನು ಕೈಗೊಂಡಿರುವಾದ ಒಬ್ಬನಿದ್ದಾನೆ!' ಎಂದುಕೊಂಡು ಭೂಗೋಳಶಾಸ್ತ್ರಜ್ಞನ ಗ್ರಹವನ್ನು ಒಮ್ಮೆ ಅವಲೋಕಿಸಿದ. ಅಷ್ಟು ಸುಂದರ ಹಾಗೂ ವೈಭವದ ಗ್ರಹವನ್ನು ಆತ ಎಂದೂ ನೋಡಿರಲಿಲ್ಲ.

'ಈ ಗ್ರಹ ಬಹಳ ಸುಂದರವಾಗಿದೆ. ಇದರಲ್ಲಿ ಸಾಗರಗಳಿವೆಯಾ?' ಆತ ಕೇಳಿದ.

'ನಾನು ಹೇಳಲಾಗುವುದಿಲ್ಲ', ಭೂಗೋಳಶಾಸ್ತ್ರಜ್ಞ ಹೇಳಿದ.

'ಹೋ!', ಪುಟ್ಟ ರಾಜಕುಮಾರನಿಗೆ ನಿರಾಶೆಯಾಯಿತು. 'ಪರ್ವತಗಳಿವೆಯಾ?'

'ನಾನು ಹೇಳಲಾಗುವುದಿಲ್ಲ', ಹೇಳಿದ ಭೂಗೋಳಶಾಸ್ತ್ರಜ್ಞ.

'ನಗರಗಳು, ನದಿಗಳು ಹಾಗೂ ಮರುಭೂಮಿಗಳು?'

'ಅದನ್ನೂ ನಾನು ಹೇಳಲಾಗುವುದಿಲ್ಲ'.

'ಆದರೆ ನೀವು ಭೂಗೋಳಶಾಸ್ತ್ರಜ್ಞರಲ್ಲವೆ!'

'ಹೌದು, ಆದರೆ ನಾನು ಪರಿಶೋಧಕನಲ್ಲವಲ್ಲ. ನನ್ನ ಗ್ರಹದಲ್ಲಿ ಒಬ್ಬ ಪರಿಶೋಧಕನೂ ಇಲ್ಲ. ನದಿ, ನಗರ, ಪರ್ವತ, ಸಾಗರ ಹಾಗೂ ಮರುಭೂಮಿಗಳನ್ನು ಎಣಿಸುತ್ತಾ ಹೋಗುವುದು ಭೂಗೋಳಶಾಸ್ತ್ರಜ್ಞನ

ಕೆಲಸವಲ್ಲ. ಅವನಿಗೆ ಅಲ್ಲಿ ಇಲ್ಲಿ ಕೆಲಸವಿಲ್ಲದೆ ಅಲೆದಾಡುವುದಕ್ಕಿಂತ ಮಿಗಿಲಾದ ಬೇಕಾದಷ್ಟು ಕೆಲಸಗಳಿರುತ್ತವೆ. ಆತ ತನ್ನ ಕುರ್ಚಿ ಮತ್ತು ಮೇಜು ಬಿಟ್ಟು ಹೊರಡುವುದಿಲ್ಲ. ಆತ ತನ್ನ ಅಧ್ಯಯನದ ಸಮಯದಲ್ಲಿ ತನ್ನ ಬಳಿ ಬರುವ ಪರಿಶೋಧಕರನ್ನು ಸ್ವಾಗತಿಸುತ್ತಾನೆ; ಅವರ ಪ್ರಯಾಣದ ಬಗ್ಗೆ ವಿಚಾರಿಸಿ ಟಿಪ್ಪಣಿ ಮಾಡಿಕೊಳ್ಳುತ್ತಾನೆ. ಪರಿಶೋಧಕನಿಗೆ ಬಹಳ ಕುತೂಹಲವುಂಟು ಮಾಡಿದ ವಿಷಯಗಳು ಇದ್ದಲ್ಲಿ ಭೂಗೋಳಶಾಸ್ತ್ರಜ್ಞ ಪರಿಶೋಧಕನ ನೈತಿಕ ನಡವಳಿಕೆಯ ಬಗೆಗೆ ವಿಚಾರಣೆ ನಡೆಸಲು ಆದೇಶ ಹೊರಡಿಸುತ್ತಾನೆ'.

'ಅದೇಕೆ?'

'ಏಕೆಂದರೆ, ಸುಳ್ಳು ಹೇಳುವ ಪರಿಶೋಧಕ ಭೂಗೋಳಶಾಸ್ತ್ರಜ್ಞನ ಪುಸ್ತಕಗಳಿಗೆ ಆಪತ್ತು ತರುತ್ತಾನೆ. ಅದೇ ರೀತಿ ಕುಡುಕ ಪರಿಶೋಧಕನೂ ಸಹ'.

'ಅದು ಹೇಗೆ?'

'ಹೇಗೆಂದರೆ ಕುಡಿದ ಅಮಲಿನಲ್ಲಿರುವ ಮನುಷ್ಯರಿಗೆ ಎಲ್ಲ ಎರಡೆರಡು ಕಾಣಿಸುತ್ತವೆ. ಅಂತಹವನ ಮಾತು ಕೇಳಿ ಟಿಪ್ಪಣಿ ಮಾಡಿಕೊಳ್ಳುವ ಭೂಗೋಳಶಾಸ್ತ್ರಜ್ಞ ಒಂದು ಪರ್ವತವಿರುವ ಕಡೆ ಎರಡು ಪರ್ವತಗಳಿವೆ ಎಂದು ಬರೆದುಕೊಳ್ಳುತ್ತಾನೆ'.

'ಕೆಟ್ಟ ಪರಿಶೋಧಕನಾಗಬಲ್ಲ ಒಬ್ಬಾತ ನನಗೆ ಪರಿಚಯವಿದ್ದಾನೆ', ಪುಟ್ಟ ರಾಜಕುಮಾರ ಹೇಳಿದ.

'ಇರಬಹುದು. ಪರಿಶೋಧಕನ ನೈತಿಕ ನಡವಳಿಕೆ ಸಚ್ಚಾರಿತ್ರ್ಯವಾದದ್ದೆಂದು ಕಂಡುಬಂದಲ್ಲಿ ಆತನ ಪರಿಶೋಧನೆಯ ಬಗೆಗೆ ವಿಚಾರಣೆ ನಡೆಸಲು ಆದೇಶ ಹೊರಡಿಸಲಾಗುತ್ತದೆ'.

'ಅದನ್ನು ನೋಡಲು ಅಲ್ಲಿಗೇ ಹೋಗುತ್ತಾರೆಯೆ?'

'ಇಲ್ಲ. ಅದು ಕಷ್ಟಕರ ಕೆಲಸ. ಆದರೆ ಪರಿಶೋಧಕ ತನ್ನ ಪರಿಶೋಧನೆಯ ಬಗೆಗೆ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾಗುತ್ತದೆ. ಉದಾಹರಣೆಗೆ, ಪರಿಶೋಧನೆ ಪರ್ವತದ ಬಗೆಗಾದರೆ, ಅಲ್ಲಿಂದ ದೊಡ್ಡ ಕಲ್ಲುಗಳನ್ನು ತಂದಿರಬೇಕಾಗುತ್ತದೆ'.

ತಕ್ಷಣ ಭೂಗೋಳಶಾಸ್ತ್ರಜ್ಞನ ಕುತೂಹಲ ಹೆಚ್ಚಾಗಿ ಉದ್ರೇಕಗೊಂಡ.

'ನೀನು .... ನೀನು...... ಬಹಳ ದೂರದಿಂದ ಬಂದವನಲ್ಲವೆ! ನೀನೊಬ್ಬ ಪರಿಶೋಧಕ! ನಿನ್ನ ಗ್ರಹವನ್ನು ನನಗೆ ವಿವರಿಸಿ ಹೇಳು!'

ತನ್ನ ದೊಡ್ಡ ರಿಜಿಸ್ಟರನ್ನು ತೆರೆದು ಭೂಗೋಳಶಾಸ್ತ್ರಜ್ಞ ತನ್ನ ಪೆನ್ಸಿಲನ್ನು ಚೂಪುಮಾಡಿಕೊಂಡ. ಪರಿಶೋಧಕರ ವಿವರಗಳನ್ನು ಮೊದಲು ಪೆನ್ಸಿಲಿನಲ್ಲಿ ಬರೆದುಕೊಳ್ಳಲಾಗುತ್ತದೆ. ಪರಿಶೋಧಕ ತನ್ನ ವಿವರಗಳ ಬಗ್ಗೆ ಸಾಕ್ಷ್ಯಾಧಾರ ಒದಗಿಸಿದ ನಂತರ ಅವುಗಳನ್ನು ಪೆನ್ನಿನಲ್ಲಿ ಬರೆಯಲಾಗುತ್ತದೆ.

'ಹೇಳು', ಭೂಗೋಳಶಾಸ್ತ್ರಜ್ಞ ಕಾತುರನಾಗಿ ಕೇಳಿದ.

'ಓಹ್, ನಾನಿರುವ ಗ್ರಹ ಅಂತಹ ವಿಶೇಷವಾದದ್ದೇನಲ್ಲ. ಅದು ತುಂಬಾ ಸಣ್ಣ ಗ್ರಹ– ಅಲ್ಲಿ ಮೂರು ಅಗ್ನಿಪರ್ವತಗಳಿವೆ– ಅವುಗಳಲ್ಲಿ ಎರಡು ಚಟುವಟಿಕೆಯಿಂದಿವೆ, ಒಂದು ನಿಷ್ಕ್ರಿಯವಾಗಿದೆ. ಆದರೆ ಯಾರಿಗೆ ಗೊತ್ತು, ಯಾವಾಗ ಏನಾಗುತ್ತದೋ!', ಹೇಳಿದ ಪುಟ್ಟ ರಾಜಕುಮಾರ.

'ಹೌದು ಯಾರಿಗೆ ಗೊತ್ತು ಏನಾಗುತ್ತದೋ', ಹೇಳಿದ ಭೂಗೋಳಶಾಸ್ತ್ರಜ್ಞ.

'ನನ್ನದೊಂದು ಹೂ ಸಹ ಇದೆ'.

'ಆದರೆ ನಾವು ಹೂಗಳನ್ನು ದಾಖಲಿಸಿಕೊಳ್ಳುವುದಿಲ್ಲ', ಹೇಳಿದ ಭೂಗೋಳಶಾಸ್ತ್ರಜ್ಞ.

'ಅದೇಕೆ? ನನ್ನ ಗ್ರಹದಲ್ಲಿ ಅತ್ಯಂತ ಸುಂದರವಾಗಿರುವುದೇ ಆ ಹೂವು!'

'ಹೂಗಳು ನಶ್ವರವಾದುವು, ಅವು ಶಾಶ್ವತವಲ್ಲ. ಆದುದರಿಂದ ನಾವು ಅವುಗಳನ್ನು ದಾಖಲಿಸುವುದಿಲ್ಲ'.

'ನಶ್ವರ– ಹಾಗಂದರೇನು?'

'ಭೂಗೋಳಶಾಸ್ತ್ರದ ಪುಸ್ತಕಗಳೆಂದರೆ ಮಹತ್ವದ ವಿಷಯಗಳಿಗೆ ಸಂಬಂಧಿಸಿರುವಂತಹವು. ಅದರ ವಿಷಯಗಳೆಂದೂ ಹಳೆಯದಾಗುವುದಿಲ್ಲ. ಪರ್ವತ ತನ್ನ ಸ್ಥಾನ ಬದಲಿಸುವುದು ತೀರಾ ಅಪರೂಪವಲ್ಲವೆ? ಸಾಗರದ ನೀರು ಬರಿದಾಗುವುದೂ ತೀರಾ ಅಪರೂಪವಲ್ಲವೆ? ನಾವು ಶಾಶ್ವತ ಹಾಗೂ ನಿರಂತರವಿರುವ ವಸ್ತುಗಳ ಬಗ್ಗೆ ಮಾತ್ರ ಬರೆಯುತ್ತೇವೆ'.

'ಆದರೆ ನಿಷ್ಕ್ರಿಯ ಅಗ್ನಿಪರ್ವತಗಳು ಜೀವ ಪಡೆದುಕೊಳ್ಳಬಹುದು. ನಶ್ವರ– ಹಾಗೆಂದರೇನು?', ಪುಟ್ಟ ರಾಜಕುಮಾರ ಮಧ್ಯೆ ತಡೆದು ಕೇಳಿದ.

'ಅಗ್ನಿಪರ್ವತ ನಿಷ್ಕ್ರಿಯವಾಗಿರಬಹುದು ಅಥವಾ ಜೀವಂತವೂ ಆಗಿರಬಹುದು. ನಮಗೆ ಅವೆಲ್ಲಾ ಒಂದೇ', ಹೇಳಿದ ಭೂಗೋಳಶಾಸ್ತ್ರಜ್ಞ.

'ನಮಗೆ ಮುಖ್ಯವಾದ ವಸ್ತುವೆಂದರೆ ಪರ್ವತ. ಅದು ಎಂದಿಗೂ ಬದಲಾಗುವುದಿಲ್ಲ'.

'ಆದರೆ, ನಶ್ವರ– ಹಾಗೆಂದರೇನು?'. ಒಮ್ಮೆ ಒಂದು ಪ್ರಶ್ನೆ ಕೇಳಿದನೆಂದರೆ ಅದರ ಬೆನ್ನುಬಿಡದ ಪುಟ್ಟ ರಾಜಕುಮಾರ ಮತ್ತೆ ಕೇಳಿದ.

'ಹಾಗೆಂದರೆ, ಶೀಘ್ರ ಕಣ್ಮರೆಯಾಗುವ ಅಪಾಯದ ಅಂಚಿನಲ್ಲಿರುವುವು ಎಂದರ್ಥ'.

'ನನ್ನ ಹೂವು ಶೀಘ್ರ ಕಣ್ಮರೆಯಾಗುವ ಅಪಾಯದ ಅಂಚಿನಲ್ಲಿದೆಯೆ?'

'ಖಂಡಿತವಾಗಿ ಹೌದು'.

'ನನ್ನ ಹೂ ನಶ್ವರವಾದದ್ದು', ಪುಟ್ಟ ರಾಜಕುಮಾರ ತನಗೆ ತಾನೇ ಹೇಳಿಕೊಂಡ. 'ಈ ಪ್ರಪಂಚವನ್ನು ಎದುರಿಸಲು ಆಕೆಯಲ್ಲಿ ನಾಲ್ಕು ಮಾತ್ರ ಮುಳ್ಳುಗಳಿವೆ. ನಾನು ಆಕೆಯನ್ನು ನನ್ನ ಗ್ರಹದಲ್ಲಿ ಒಬ್ಬಂಟಿಯಾಗಿ ಬಿಟ್ಟು ಬಂದಿದ್ದೇನೆ!!'

ಅದು ಆತನ ಪಶ್ಚಾತ್ತಾಪದ ಮೊಟ್ಟಮೊದಲ ಗಳಿಗೆಯಾಗಿತ್ತು. ಆದರೂ ಧೈರ್ಯ ತಂದುಕೊಂಡ.

'ನಾನು ಈಗ ಯಾವ ಸ್ಥಳಕ್ಕೆ ಭೇಟಿ ನೀಡಲೆಂಬುದು ನಿಮ್ಮ ಸಲಹೆ' ಭೂಗೋಳಶಾಸ್ತ್ರಜ್ಞನನ್ನು ಪುಟ್ಟ ರಾಜಕುಮಾರ ಕೇಳಿದ.

'ಭೂಮಿ ಎಂಬ ಗ್ರಹ', ಉತ್ತರಿಸಿದ ಭೂಗೋಳಶಾಸ್ತ್ರಜ್ಞ, 'ಆ ಗ್ರಹಕ್ಕೆ ಒಳ್ಳೆಯ ಹೆಸರಿದೆ'.

ತನ್ನ ಹೂವಿನ ಬಗ್ಗೆ ಆಲೋಚಿಸುತ್ತಾ ಪುಟ್ಟ ರಾಜಕುಮಾರ ಅಲ್ಲಿಂದ ಹೊರಟ.

16

ಹಾಗಾಗಿ ಆತನ ಏಳನೆಯ ಗ್ರಹ ಭೂಮಿಯಾಗಿತ್ತು.

ಆದರೆ ಭೂಮಿ ಕೇವಲ ಒಂದು ಸಾಧಾರಣ ಗ್ರಹವಾಗಿರಲಿಲ್ಲ! ಅದರಲ್ಲಿ 111 ರಾಜರು (ನೀಗ್ರೋ ದೊರೆಗಳನ್ನೂ ಮರೆಯದೆ, ಸೇರಿಸಿಕೊಂಡು), 7000 ಭೂಗೋಳಶಾಸ್ತ್ರಜ್ಞರು, 900,000 ವ್ಯಾಪಾರಿಗಳು, 7,500,000 ಕುಡುಕರು, 311,000,000 ಅಹಂಕಾರಿಗಳು – ಉಳಿದವರೂ ಸೇರಿದಂತೆ ಎಲ್ಲಾ 2,000,000,000 ದೊಡ್ಡವರು ಇದ್ದರು.

ಭೂಮಿಯ ಗಾತ್ರವನ್ನು ನೀವು ಊಹಿಸಿಕೊಳ್ಳಲು ಸುಲಭವಾಗಲೆಂದು ಈ ದೃಷ್ಟಾಂತ ಹೇಳುತ್ತೇನೆ: ವಿದ್ಯುಚ್ಛಕ್ತಿಯ ಅನ್ವೇಷಣೆಯ ಮೊದಲು ಭೂಮಿಯ ಆರೂ ಖಂಡಗಳಲ್ಲಿನ ಬೀದಿದೀಪ ಹಚ್ಚುವ ಕೆಲಸವನ್ನು 4,62,511 ಜನ ನಿರ್ವಹಿಸಬೇಕಾಗಿತ್ತು.

ದೂರದಿಂದ ನೋಡಿದಾಗ ಅದು ಒಂದು ಅದ್ಭುತ ದೃಶ್ಯವಾಗಿರುತ್ತಿತ್ತು. ದೀಪಹಚ್ಚುವವರ ಪಡೆಯ ನಡಿಗೆ ನೃತ್ಯ ನಾಟಕವೊಂದರ ನಟನೆಯಂತೆ ನಿಯಂತ್ರಿತವಾಗಿರುತ್ತಿತ್ತು. ಮೊದಲಿಗೆ ಆಸ್ಟ್ರೇಲಿಯ ಮತ್ತು ನ್ಯೂಜಿಲ್ಯಾಂಡ್‌ನವರು ದೀಪ ಹಚ್ಚಿ ನಿದ್ರೆ ಮಾಡುತ್ತಿದ್ದರು. ನಂತರ ನೃತ್ಯದಲ್ಲಿ ಹೆಜ್ಜೆ ಹಾಕುವ ಸರದಿ ಚೀನಾ ಮತ್ತು ಸೈಬೀರಿಯಾದವರದಾಗಿರುತ್ತಿತ್ತು. ಅವರು ಪರದೆಯ ಹಿಂದೆ

ಸರಿದ ನಂತರ ರಷ್ಯಾ ಮತ್ತು ಇಂಡೀಸ್‌ನ ದೀಪ ಹಚ್ಚುವವರು; ನಂತರ ಆಫ್ರಿಕಾ ಮತ್ತು ಯುರೋಪ್; ದಕ್ಷಿಣ ಅಮೆರಿಕಾ; ಉತ್ತರ ಅಮೆರಿಕಾ ಹೀಗೆ ಆವರ್ತನಗೊಳ್ಳುತ್ತಿತ್ತು. ಯಾರೂ ಒಂದು ಹೆಜ್ಜೆ ತಪ್ಪುತ್ತಿರಲಿಲ್ಲ. ಒಂದು ಅದ್ಭುತ ದೃಶ್ಯವದು!

ಉತ್ತರ ಧ್ರುವದಲ್ಲಿ ಹಾಗೂ ದಕ್ಷಿಣ ಧ್ರುವಗಳಲ್ಲಿ ಒಂಟಿ ದೀಪದ ಕಂಬಗಳ ಉಸ್ತುವಾರಿ ಹೊತ್ತಿರುವವರು ಮಾತ್ರ ಯಾವುದೇ ಶ್ರಮಪಡದೆ ಆರಾಮದ ಜೀವನ ನಡೆಸುತ್ತಿದ್ದಾರೆ: ಅವರು ವರ್ಷದಲ್ಲಿ ಎರಡು ಸಾರಿ ಮಾತ್ರ ಕೆಲಸ ಮಾಡಬೇಕಾಗುತ್ತದೆ ಅಷ್ಟೆ.

17

ಯಾರಾದರೂ ಏನಾದರೂ ತಮಾಷೆ ಮಾಡಬೇಕಾಗಿದ್ದಲ್ಲಿ ಅಂಥವರು ವಾಸ್ತವದಿಂದ ಕೊಂಚ ದೂರ ಸರಿಯುತ್ತಾರೆ. ನಾನು ಇದುವರೆಗೂ ದೀಪ ಹಚ್ಚುವವರ ಬಗ್ಗೆ ಹೇಳಿದ್ದರಲ್ಲಿ ಸಂಪೂರ್ಣ ಪ್ರಾಮಾಣಿಕತೆಯಿಲ್ಲ. ಈ ಭೂಮಿಯ ಮೇಲೆ ಮನುಷ್ಯರು ಅತ್ಯಂತ ಕಡಿಮೆ ಸ್ಥಳವನ್ನು ಆಕ್ರಮಿಸಿಕೊಂಡಿದ್ದಾರೆ. ಭೂಮಿಯ ಮೇಲಿರುವ ಇನ್ನೂರು ಕೋಟಿ ಜನರನ್ನು ಯಾವುದಾದರೂ ಸಭೆಯಲ್ಲಿ ನಿಂತ ಹಾಗೆ ಹತ್ತಿರ ನಿಲ್ಲಿಸಿದರೆ, ಅವರೆಲ್ಲರನ್ನೂ 20 ಮೈಲು ಉದ್ದ ಹಾಗೂ 20 ಮೈಲು ಅಗಲದ ಚೌಕದಲ್ಲಿ ಸೇರಿಸಿಬಿಡಬಹುದು. ಭೂಮಿಯ ಮೇಲಿನ ಎಲ್ಲ ಮನುಷ್ಯರನ್ನು ಒಂದು ಸಣ್ಣ ಪೆಸಿಫಿಕ್ ದ್ವೀಪದ ಮೇಲೆ ಪೇರಿಸಿಬಿಡಬಹುದು.

ಈ ರೀತಿ ನೀವು ದೊಡ್ಡವರಿಗೆ ಹೇಳಿದರೆ ಅವರು ಖಂಡಿತವಾಗಿಯೂ ನಂಬುವುದಿಲ್ಲ. ತಾವು ಬಹಳಷ್ಟು ಸ್ಥಳವನ್ನು ಆಕ್ರಮಿಸಿಕೊಂಡಿದ್ದೇವೆಂದು ಅವರು ನಂಬಿದ್ದಾರೆ. ತಮಗೆ ಆನೆಹುಣಿಸೆ ಮರಗಳಷ್ಟು ಪ್ರಾಮುಖ್ಯತೆ ಇದೆಯೆಂದುಕೊಂಡಿದ್ದಾರೆ. ಈ ವಿಷಯಗಳ ಬಗ್ಗೆ ಲೆಕ್ಕಾಚಾರ ಹಾಕುವಂತೆ ನೀವು ಅವರಿಗೆ ಸಲಹೆ ನೀಡಬೇಕು. ಅವರು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ, ಏಕೆಂದರೆ ಅವರಿಗೆ ಅಂಕಿಅಂಶಗಳೆಂದರೆ ಪ್ರಾಣ. ಆದರೆ ನೀವು ಇಂಥ ವಿಷಯಗಳ ಬಗ್ಗೆ ಹೆಚ್ಚಿನ ಸಮಯ ಹಾಳು ಮಾಡಬೇಡಿ. ಅದು ಅನಾವಶ್ಯಕ. ನನಗೆ ಗೊತ್ತು. ನಿಮಗೆ ನನ್ನಲ್ಲಿ ನಂಬಿಕೆಯಿದೆ.

ಪುಟ್ಟ ರಾಜಕುಮಾರ ಭೂಮಿಗೆ ಬಂದಾಗ ಯಾರೂ ಮನುಷ್ಯರೇ ಕಾಣದಿದ್ದಾಗ ಆತನಿಗೆ ಆಶ್ಚರ್ಯವಾಗಿತ್ತು. ಮರಳ ಮೇಲೆ ಬೆಳದಿಂಗಳ ಬೆಳಕಿನ ಚಿನ್ನದ ಸುರುಳಿಯೊಂದು ಕಂಡಾಗ ತಾನು ದಾರಿ ತಪ್ಪಿ ಬೇರೆ ಗ್ರಹಕ್ಕೇನಾದರೂ ಬಂದಿಬಿಟ್ಟಿದೀನೇನೋ ಎಂದು ಹೆದರಿಕೊಂಡಿದ್ದ.

'ನಮಸ್ಕಾರ', ಹೇಳಿದ ಪುಟ್ಟ ರಾಜಕುಮಾರ ನಮ್ರತೆಯಿಂದ.

'ನಮಸ್ಕಾರ', ಹೇಳಿತು ಹಾವು.

'ಈ ಗ್ರಹ ಯಾವದು?', ಕೇಳಿದ ಪುಟ್ಟ ರಾಜಕುಮಾರ.

'ಇದು ಭೂಮಿ; ಈಗ ನೀನಿರುವುದು ಆಫ್ರಿಕಾದಲ್ಲಿ', ಹಾವು ಉತ್ತರಿಸಿತು.

'ಹೋ! ಭೂಮಿಯ ಮೇಲೆ ಮನುಷ್ಯರ್‍ಯಾರೂ ಇಲ್ಲವೆ?'

'ಇದು ಮರುಭೂಮಿ. ಮರುಭೂಮಿಯಲ್ಲಿ ಮನುಷ್ಯರು ಇರುವುದಿಲ್ಲ. ಭೂಮಿ ತುಂಬಾ ದೊಡ್ಡದು', ಹೇಳಿತು ಹಾವು.

ಪುಟ್ಟ ರಾಜಕುಮಾರ ಅಲ್ಲೇ ಒಂದು ಕಲ್ಲಿನ ಮೇಲೆ ಕೂತು, ತಲೆಯೆತ್ತಿ ಆಕಾಶದ ಕಡೆಗೆ ನೋಡಿದ.

'ಮೇಲೆ ಸ್ವರ್ಗದಲ್ಲಿ ನಕ್ಷತ್ರಗಳೆಲ್ಲಾ ಬೆಳಗುತ್ತಿವೆ, ಏಕೆಂದರೆ ನಮ್ಮ ದಾರಿ ನಾವು ಕಂಡುಕೊಳ್ಳುವುದು ಸುಲಭವಾಗಲೆಂದು..... ಅಲ್ಲಿ ನೋಡು ನನ್ನ ಗ್ರಹ. ನಮ್ಮ ಮೇಲೆಯೆ ಇದೆ. ಆದರೆ ಎಷ್ಟು ದೂರ!!'

'ನಿನ್ನ ಗ್ರಹ ಎಷ್ಟು ಸುಂದರವಾಗಿದೆ', ಹಾವು ಹೇಳಿತು. 'ನೀನು ಇಲ್ಲಿಗೆ ಬಂದದ್ದು ಏಕೆ?'

'ಒಂದು ಹೂವಿನೊಂದಿಗೆ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ',

ಪುಟ್ಟ ರಾಜಕುಮಾರ ಹೇಳಿದ.

'ಆಹ್!!' ಎಂದಿತು ಹಾವು.

ಇಬ್ಬರೂ ಮೌನವಾಗಿದ್ದರು.

'ಮನುಷ್ಯರೆಲ್ಲಾ ಎಲ್ಲಿದ್ದಾರೆ?', ಕೊನೆಗೆ ಪುಟ್ಟ ರಾಜಕುಮಾರ ಮೌನ ಮುರಿದ. 'ಈ ಮರುಭೂಮಿಯಲ್ಲಿ ನಾನು ಒಂಟಿ ಎನ್ನಿಸುತ್ತಿದೆ.....'

'ಮನುಷ್ಯರ ನಡುವೆಯೂ ಒಂಟಿ ಎನ್ನಿಸುತ್ತದೆ', ಹಾವು ಹೇಳಿತು.

ಬಹಳ ಹೊತ್ತು ಹಾವನ್ನೇ ದಿಟ್ಟಿಸಿ ನೋಡುತ್ತಿದ್ದು ಕೊನೆಗೆ,

'ನೀನೊಂದು ತಮಾಷೆಯ ಪ್ರಾಣಿ. ಬೆರಳಿಗಿಂತ ದಪ್ಪವಿಲ್ಲ', ಎಂದ.

'ಆದರೆ ನನಗೆ ರಾಜನ ಬೆರಳಿಗಿಂತ ಹೆಚ್ಚು ಶಕ್ತಿಯಿದೆ', ಹಾವು ಹೇಳಿತು.

ಪುಟ್ಟ ರಾಜಕುಮಾರ ನಕ್ಕ.

'ನಿನಗೆ ಶಕ್ತಿಯಿರಲು ಸಾಧ್ಯವೇ ಇಲ್ಲ. ನಿನಗೆ ಕಾಲುಗಳೂ ಇಲ್ಲ, ನಿನಗೆ ಚಲಿಸಲೂ ಆಗುವುದಿಲ್ಲ....... '

'ನಾನು ನಿನ್ನನ್ನು ಯಾವುದೇ ಹಡಗು ಕೊಂಡೊಯ್ಯುವುದಕ್ಕಿಂತ ದೂರ ಕೊಂಡೊಯ್ಯಬಲ್ಲೆ', ಎಂದು ಹೇಳಿದ ಹಾವು ಪುಟ್ಟ ರಾಜಕುಮಾರನ ಕಾಲಿಗೆ ಸುತ್ತಿಕೊಂಡಿತು.

'ನಾನು ಮುಟ್ಟಿದವರನ್ನೆಲ್ಲ, ಅವರು ಎಲ್ಲಿಂದ ಬಂದಿದ್ದಾರೋ ಅಲ್ಲಿಗೇ ಕಳುಹಿಸಿಬಿಡಬಲ್ಲೆ', ಮತ್ತೆ ಹೇಳಿತು ಹಾವು. 'ಆದರೆ ನೀನು ಪ್ರಾಮಾಣಿಕ ಹಾಗೂ ಮುಗ್ಧ, ದೂರದ ತಾರೆಯೊಂದರಿಂದ ಬಂದಿದ್ದೀಯ.........'

ಪುಟ್ಟ ರಾಜಕುಮಾರ ಏನೂ ಹೇಳಲಿಲ್ಲ.

'ನಿನ್ನನ್ನು ನೋಡಿದರೆ ಅಯ್ಯೋ ಎನ್ನಿಸುತ್ತದೆ– ಕಲ್ಲಿನ ಈ ಭೂಮಿಯ ಮೇಲೆ ನೀನು ಅಶಕ್ತ', ಹಾವು ಹೇಳಿತು. 'ಆದರೆ ನಾನು ನಿನಗೆ ಸಹಾಯ ಮಾಡಬಲ್ಲೆ, ನಿನಗೆ ಎಂದಾದರೂ ನಿನ್ನ ಗ್ರಹಕ್ಕೆ ವಾಪಸ್ಸು ಹೋಗಲೇಬೇಕೆಂದರೆ ನಾನು ನಿನ್ನನ್ನು .... '

'ಓಹ್! ನನಗೆಲ್ಲ ಅರ್ಥವಾಯಿತು ಬಿಡು. ಆದರೆ ನೀನೇಕೆ ಎಲ್ಲಾ ಒಗಟಿನ ರೀತಿ ಮಾತನಾಡುತ್ತೀಯ?', ಕೇಳಿದ ಪುಟ್ಟ ರಾಜಕುಮಾರ.

'ನಾನು ಎಲ್ಲ ಒಗಟುಗಳನ್ನು ಬಿಡಿಸುವವನು'.

ಇಬ್ಬರೂ ಮೌನವಾದರು.

18

ಪುಟ್ಟ ರಾಜಕುಮಾರ ಮರುಭೂಮಿ ದಾಟಿದ. ಒಂದೇ ಒಂದು ಹೂ ಎದುರಾಯಿತು. ಅದು ಯಾವುದೋ ಲೆಕ್ಕಕ್ಕೆ ಬಾರದ ಸಾಮಾನ್ಯ ಹೂ. ಅದರಲ್ಲಿ ಮೂರೇ ಮೂರು ದಳಗಳಿದ್ದವು.

'ನಮಸ್ಕಾರ', ಹೇಳಿದ ಪುಟ್ಟ ರಾಜಕುಮಾರ.

'ನಮಸ್ಕಾರ', ಹೇಳಿತು ಹೂ.

'ಮನುಷ್ಯರೆಲ್ಲಾ ಎಲ್ಲಿದ್ದಾರೆ?', ಪುಟ್ಟ ರಾಜಕುಮಾರ ಕೇಳಿದ.

ಆ ದಿಕ್ಕಿನಲ್ಲಿ ಒಂದು ಕಾರವಾನ್ ಹಾದುಹೋಗುವುದನ್ನು ಹೂ ನೋಡಿತ್ತು.

'ಮನುಷ್ಯರೆ? ಆರೋ ಏಳೋ ಇರಬಹುದು. ಕೆಲವು ವರ್ಷಗಳ ಹಿಂದೆ ನೋಡಿದ್ದೆ. ಆದರೆ ಅವರೆಲ್ಲಿರುತ್ತಾರೆಂಬುದು ಯಾರಿಗೂ ತಿಳಿದಿರುವುದಿಲ್ಲ. ಗಾಳಿ ಬೀಸಿದ ಕಡೆ ಹೋಗುತ್ತಾರವರು. ಪಾಪ, ಅವರಿಗೆ ಬೇರುಗಳೇ ಇರುವುದಿಲ್ಲ; ಅವರ ಬದುಕೇ ಕಷ್ಟ'.

ಹೂವಿಗೆ ವಂದನೆ ತಿಳಿಸಿ ಪುಟ್ಟ ರಾಜಕುಮಾರ ಅಲ್ಲಿಂದ ಹೊರಟ.



19

ಆ ನಂತರ ಪುಟ್ಟ ರಾಜಕುಮಾರನಿಗೆ ಒಂದು ದೊಡ್ಡ ಪರ್ವತ

ಎದುರಾಯಿತು. ಆತನಿಗೆ ಗೊತ್ತಿದ್ದ ಪರ್ವತಗಳೆಂದರೆ ತನ್ನ ಗ್ರಹದಲ್ಲಿನ ಮೊಣಕಾಲೆತ್ತರದ ಮೂರು ಅಗ್ನಿಪರ್ವತಗಳು. ಅದರಲ್ಲಿನ ಒಂದು ನಿಷ್ಕ್ರಿಯ ಅಗ್ನಿಪರ್ವತವನ್ನು ಆತ ಕಾಲೂರಲು ಬಳಸುತ್ತಿದ್ದ.

'ಇಷ್ಟು ಎತ್ತರದ ಪರ್ವತದ ಮೇಲೆ ನಿಂತರೆ ಇಡೀ ಗ್ರಹವನ್ನು ಹಾಗೂ ಇಲ್ಲಿನ ಮನುಷ್ಯರನ್ನು ಕಾಣಬಹುದು' ಎಂದು ತನ್ನಲ್ಲೇ ಹೇಳಿಕೊಂಡು ಆ ಪರ್ವತ ಹತ್ತಿದ.

ಆದರೆ ಒಂದಷ್ಟು ಚೂಪಾದ ಪರ್ವತ ಶಿಖರಗಳ ಹೊರತು ಅವನಿಗೆ ಏನೂ ಕಾಣಲಿಲ್ಲ.

'ನಮಸ್ಕಾರ', ಪುಟ್ಟ ರಾಜಕುಮಾರ ಹೇಳಿದ

'ನಮಸ್ಕಾರ........ನಮಸ್ಕಾರ............ನಮಸ್ಕಾರ', ಉತ್ತರಿಸಿತು ಪ್ರತಿಧ್ವನಿ.

'ನೀನು ಯಾರು?', ಪುಟ್ಟ ರಾಜಕುಮಾರ ಕೇಳಿದ.

'ನೀನು ಯಾರು........ನೀನು ಯಾರು........ನೀನು ಯಾರು?', ಪ್ರಶ್ನಿಸಿತು ಪ್ರತಿಧ್ವನಿ.

'ನಾನು ಒಂಟಿಯಾಗಿದ್ದೇನೆ. ನನ್ನ ಗೆಳೆಯನಾಗುವೆಯಾ?', ಪುಟ್ಟ ರಾಜಕುಮಾರ ಕೇಳಿದ.

'ನನ್ನ ಗೆಳೆಯನಾಗುವೆಯಾ.......... ನನ್ನ ಗೆಳೆಯನಾಗುವೆಯಾ.......... ನನ್ನ ಗೆಳೆಯನಾಗುವೆಯಾ', ಉತ್ತರಿಸಿತು ಪ್ರತಿಧ್ವನಿ.

'ಇದು ಎಂಥ ವಿಚಿತ್ರ ಗ್ರಹ! ಎಲ್ಲೆಲ್ಲೂ ಒಣಭೂಮಿ, ಚೂಪಾದಶಿಖರಗಳು. ಇಲ್ಲಿ ಬದುಕುವುದೇ ಕಷ್ಟ. ಇಲ್ಲಿನ ಜನರಿಗೆ – ಸ್ವಂತ ಬುದ್ಧಿಯೇ ಇಲ್ಲ. ನಾವು ಹೇಳಿದ್ದನ್ನೇ ಪುನರುಚ್ಚರಿಸುತ್ತಾರೆ ಅದೇ ನನ್ನ ಗ್ರಹದಲ್ಲಿ ನನ್ನ ಹೂವೊಂದಿತ್ತು; ಆಕೆಯೇ ಮೊದಲಿಗೆ ಮಾತನಾಡುತ್ತಿದ್ದಳು.......', ಪುಟ್ಟ ರಾಜಕುಮಾರ ತನಗೆ ತಾನೇ ಹೇಳಿಕೊಂಡ.

20

ಹೀಗೇ ಬಹಳ ಕಾಲ ಮರುಭೂಮಿ, ಕಲ್ಲುಗುಡ್ಡ, ಹಿಮದಲ್ಲಿ ನಡೆದ ನಂತರ ಕೊನೆಗೂ ಪುಟ್ಟ ರಾಜಕುಮಾರನಿಗೆ ರಸ್ತೆಯೊಂದು ಸಿಕ್ಕಿತು. ಎಲ್ಲ ರಸ್ತೆಗಳೂ ಮನುಷ್ಯರ ಬಿಡಾರಕ್ಕೆ ಹೋಗುತ್ತವೆ.

'ಶುಭ ದಿನ', ಪುಟ್ಟ ರಾಜಕುಮಾರ ಹೇಳಿದ.

ಆತ ಒಂದು ಗುಲಾಬಿಯ ತೋಟದೆದುರು ನಿಂತಿದ್ದ.

'ಶುಭ ದಿನ', ಗುಲಾಬಿಗಳು ಹೇಳಿದವು.

ಪುಟ್ಟ ರಾಜಕುಮಾರ ಅವುಗಳನ್ನೇ ಗಮನವಿಟ್ಟು ನೋಡಿದ. ಎಲ್ಲವೂ ಅವನ ಗ್ರಹದಲ್ಲಿರುವ ಅವನ ಹೂವಿನ ಹಾಗೇ ಕಾಣುತ್ತಿದ್ದವು.

'ನೀವೆಲ್ಲಾ ಯಾರು?' ಬೆರಗಾಗಿ ಕೇಳಿದ.

'ನಾವು, ಗುಲಾಬಿಗಳು', ಹೇಳಿದವು ಗುಲಾಬಿಗಳು.

ಅವನಿಗೆ ಇದ್ದಕ್ಕಿದ್ದಂತೆ ದುಃಖವಾಯಿತು. ಇಡೀ ವಿಶ್ವದಲ್ಲೇ ತನ್ನಂತಹ ಹೂ ಮತ್ತೊಂದಿಲ್ಲ ಎಂದು ಅವನ ಹೂ ಹೇಳಿದ್ದಳು. ಆದರೆ ಇಲ್ಲಿ ನೋಡಿದರೆ ಒಂದೇ ತೋಟದಲ್ಲಿ ಅವಳ ತರಹದ, ಒಂದೇ ರೀತಿಯಿರುವ ಐದು ಸಾವಿರ ಹೂಗಳಿದ್ದವು!

'ಅವಳೇನಾದರೂ ಈ ಹೂಗಳನ್ನು ನೋಡಿದರೆ ಅವಳಿಗೆ ಬಹಳ ಜಿಗುಪ್ಸೆಯಾಗಬಹುದು........... ಸಿಕ್ಕಾಪಟ್ಟೆ ನೆಗಡಿಯಾದಂತೆ ಕೆಮ್ಮಬಹುದು,



ತನ್ನನ್ನು ನೋಡಿ ಯಾರೂ ನಗದಿರಲೆಂದು ಸಾಯುತ್ತಿರುವಂತೆ ನಟಿಸಬಹುದು. ಆಗ ನಾನು ಅವಳನ್ನು ಸಂತೈಸುವಂತೆ, ಆರೈಕೆಮಾಡುವಂತೆ ನಟಿಸಬೇಕು (ನನ್ನನ್ನು ಸಂತೈಸಿಕೊಳ್ಳಲೂ ಹೌದು) ಇಲ್ಲದಿದ್ದಲ್ಲಿ ಆಕೆ ನಿಜವಾಗಿಯೂ ಸತ್ತು ಹೋಗಿಬಿಡಬಹುದು', ಎಂದು ಪುಟ್ಟ ರಾಜಕುಮಾರ ತನ್ನಲ್ಲೇ ಆಲೋಚಿಸಿದ.

ಅವನ ಆಲೋಚನೆಗಳು ಮುಂದುವರಿದಿದ್ದವು:

'ಇಡೀ ವಿಶ್ವದಲ್ಲೇ ಅತ್ಯಂತ ಸುಂದರ ಹಾಗೂ ವಿಶಿಷ್ಟ ಹೂ ಹೊಂದಿರುವ ಸಿರಿವಂತ ನಾನೊಬ್ಬನೇ ಎಂದು ಭಾವಿಸಿದ್ದೆ; ಆದರೆ ನನ್ನ ಬಳಿ ಇರುವುದು ಒಂದು ಸಾಮಾನ್ಯ ಗುಲಾಬಿ. ಒಂದು ಸಾಮಾನ್ಯ ಗುಲಾಬಿ, ಮೊಣಕಾಲೆತ್ತರದ ಮೂರು ಅಗ್ನಿಪರ್ವತಗಳು– ಅವುಗಳಲ್ಲಿ ಒಂದು ಬಹುಶಃ ಎಂದೆಂದಿಗೂ ನಿಷ್ಕ್ರಿಯವಾಗಿರುವಂತಹುದು............... ಇಷ್ಟಕ್ಕೇ ನಾನು ಮಹಾನ್ ರಾಜಕುಮಾರನಾಗುವುದಿಲ್ಲ.................'

ಅಲೇ ಹುಲ್ಲಿನ ಮೇಲೆ ಕುಸಿದು ಪುಟ್ಟ ರಾಜಕುಮಾರ ಬಿಕ್ಕಿ ಬಿಕ್ಕಿ ಅಳತೊಡಗಿದ.

21

ಆ ಸಮಯದಲ್ಲೇ ಅಲ್ಲಿ ಒಂದು ನರಿ ಕಾಣಿಸಿಕೊಂಡಿದ್ದು.

'ನಮಸ್ಕಾರ', ಹೇಳಿತು ನರಿ.

'ನಮಸ್ಕಾರ', ನಮ್ರನಾಗಿ ಪ್ರತ್ಯುತ್ತರಿಸಿ ಪುಟ್ಟ ರಾಜಕುಮಾರ ಸುತ್ತಲೂ

ನೋಡಿದ. ಆದರೆ ಯಾರೂ ಕಾಣಲಿಲ್ಲ.

'ನಾನಿಲ್ಲಿದೇನೆ, ಸೇಬಿನ ಮರದ ಕೆಳಗೆ', ಧ್ವನಿಯೊಂದು ಹೇಳಿತು.

'ಯಾರು ನೀನು? ನೋಡಲು ಎಷ್ಟು ಸುಂದರವಾಗಿದ್ದೀಯ?', ಪುಟ್ಟ ರಾಜಕುಮಾರ ಕೇಳಿದ.

'ನಾನೊಂದು ನರಿ'.

'ನನಗೆ ಬೇಸರವಾಗಿದೆ, ದುಃಖವಾಗಿದೆ. ನನ್ನ ಜೊತೆ ಆಟವಾಡುವೆಯಾ?'

'ಇಲ್ಲ. ನಾನು ನಿನ್ನ ಜೊತೆ ಆಡುವುದು ಸಾಧ್ಯವಿಲ್ಲ. ನನ್ನನ್ನು ಪಳಗಿಸಿಲ್ಲ', ನರಿ ಹೇಳಿತು.

'ಓಹ್!', ಎಂದು ಪುಟ್ಟ ರಾಜಕುಮಾರ ಹೇಳಿ, ಕೊಂಚ ಹೊತ್ತು ಹಾಗೇ ಆಲೋಚಿಸುತ್ತಿದ್ದು, ನಂತರ ಕೇಳಿದ,

'ಪಳಗಿಸುವುದು ಎಂದರೇನು?'

'ನೀನು ಇಲ್ಲಿನವನಲ್ಲ. ಇಲ್ಲೇನು ಹುಡುಕುತ್ತಿದ್ದೀಯ?' ನರಿ ಕೇಳಿತು.

'ನಾನು ಮನುಷ್ಯರನ್ನು ಹುಡುಕುತ್ತಿದ್ದೇನೆ', ಎಂದು ಹೇಳಿದ ಪುಟ್ಟ

ರಾಜಕುಮಾರ ಮತ್ತೆ ಕೇಳಿದ, 'ಪಳಗಿಸುವುದು ಎಂದರೇನು?'

'ಮನುಷ್ಯರನ್ನೇ?' ಕೇಳಿತು ನರಿ. 'ಅವರ ಬಳಿ ಬಂದೂಕಗಳಿರುತ್ತವೆ. ಅವರು ಬೇಟೆಯಾಡುತ್ತಾರೆ. ಅದು ತುಂಬಾ ನೋವಿನ ವಿಷಯ. ಅವರು ಕೋಳಿಗಳನ್ನೂ ಸಾಕುತ್ತಾರೆ. ಅಷ್ಟೇ ಅವರ ಆಸಕ್ತಿಗಳು. ನೀನು ಕೋಳಿಗಳನ್ನು ಹುಡುಕುತ್ತಿದ್ದೀಯೇನು?'

'ಇಲ್ಲ. ನಾನು ಗೆಳೆಯರಿಗಾಗಿ ಹುಡುಕುತ್ತಿದ್ದೇನೆ. ಪಳಗಿಸುವುದು



ಎಂದರೇನು?' ಪುಟ್ಟ ರಾಜಕುಮಾರ ಕೇಳಿದ.

'ಅದೊಂದು ಬಹಳ ಉದಾಸೀನಕ್ಕೊಳಗಾದ ಕ್ರಿಯೆ. ಪಳಗಿಸುವುದು ಎಂದರೆ ಸಂಬಂಧಗಳನ್ನು ಸೃಷ್ಟಿಸುವುದು ಎಂದರ್ಥ', ಹೇಳಿತು ನರಿ.

'ಸಂಬಂಧಗಳನ್ನು ಸೃಷ್ಟಿಸುವುದು?'

'ಹೌದು, ಅಷ್ಟೇ ಅದರ ಅರ್ಥ', ಹೇಳಿತು ನರಿ. 'ನೀನು ನನಗೆ ಇನ್ನಿತರ ಸಾವಿರಾರು ಪುಟ್ಟ ಹುಡುಗರ ಹಾಗೆಯೇ ಒಬ್ಬ ಹುಡುಗ ಅಷ್ಟೆ. ನನಗೆ ನಿನ್ನ ಅವಶ್ಯಕತೆಯಿಲ್ಲ. ಅದೇ ರೀತಿ ನಿನಗೂ ನನ್ನ ಅವಶ್ಯಕತೆಯಿಲ್ಲ. ನಿನಗೆ ನಾನು ಸಾವಿರಾರು ನರಿಗಳ ರೀತಿ ಒಂದು ನರಿಯಷ್ಟೆ. ಅದೇ ನೀನು ನನ್ನನ್ನು ಪಳಗಿಸಿದರೆ ನಮಗಿಬ್ಬರಿಗೂ ಪರಸ್ಪರರ ಅವಶ್ಯಕತೆ ಇರುತ್ತದೆ. ನನಗೆ ನೀನು ಬೇಕಾದ ವ್ಯಕ್ತಿಯಾಗುತ್ತೀಯ. ಅದೇ ರೀತಿ ನಾನು ನಿನಗೆ ಬೇಕಾದ ಸಾಕು ಪ್ರಾಣಿಯಾಗುತ್ತೇನೆ......'

'ಈಗ ಸ್ವಲ್ಪ ಸ್ವಲ್ಪ ಅರ್ಥವಾಗುತ್ತಿದೆ', ಹೇಳಿದ ಪುಟ್ಟ ರಾಜಕುಮಾರ. 'ನನ್ನದೂ ಒಂದು ಹೂವಿದೆ........ ಬಹುಶಃ ಅದು ನನ್ನನ್ನು ಪಳಗಿಸಿರಬಹುದೆನ್ನಿಸುತ್ತಿದೆ................'

'ಇರಬಹುದು. ಭೂಮಿಯ ಮೇಲೆ ಎಲ್ಲ ತರಹದ ಘಟನೆಗಳೂ ನಡೆಯುತ್ತವೆ', ನರಿ ಹೇಳಿತು.

'ಓಹ್! ಇಲ್ಲ.. ಇಲ್ಲ. ಅದು ಭೂಮಿಯ ಮೇಲಲ್ಲ!', ಹೇಳಿದ ಪುಟ್ಟ ರಾಜಕುಮಾರ.

ನರಿಗೆ ಅಚ್ಚರಿ ಹಾಗೂ ಕುತೂಹಲ ಎರಡೂ ಒಟ್ಟಿಗೇ ಉಂಟಾಯಿತು.

'ಬೇರೆ ಗ್ರಹದಲ್ಲಿಯೆ!?'

'ಹೌದು'.

'ಆ ಗ್ರಹದಲ್ಲಿಯೂ ಬೇಟೆಗಾರರಿದ್ದಾರೆಯೆ?'

'ಇಲ್ಲ'.

'ಹಾ! ಹಾಗಾದರೆ ಅದು ಒಳ್ಳೆಯ ಜಾಗವೆನ್ನಿಸುತ್ತದೆ! ಅಲ್ಲಿ ಕೋಳಿಗಳಿವೆಯೆ?'

'ಇಲ್ಲ'.

'ಯಾವುದೂ ಸರಿಯಿರುವುದಿಲ್ಲ ಬಿಡು', ನಿಟ್ಟುಸಿರಿಟ್ಟು ನರಿ ಮತ್ತೆ ತನ್ನ ಮೊದಲಿನ ಆಲೋಚನೆಗೇ ಹಿಂದಿರುಗಿತು.

'ನನ್ನ ಬದುಕು ಏಕತಾನತೆಯಿಂದ ಕೂಡಿದೆ', ನರಿ ಹೇಳಿತು. 'ನಾನು ಕೋಳಿಗಳನ್ನು ಬೇಟೆಯಾಡುತ್ತೇನೆ, ಜನರು ನನ್ನನ್ನು ಬೇಟೆಯಾಡುತ್ತಾರೆ. ಎಲ್ಲ ಕೋಳಿಗಳೂ ಒಂದೇ ತರಹ ಇರುತ್ತವೆ, ಹಾಗೇ ಎಲ್ಲ ಮನುಷ್ಯರೂ ಒಂದೇ ತರಹ ಇರುತ್ತಾರೆ. ಈ ಏಕತಾನತೆ ಬೇಸರವಾಗಿದೆ. ನೀನು ನನ್ನನ್ನು ಪಳಗಿಸಿ ನನ್ನ ಬದುಕಲ್ಲಿ ಹೊಸ ಬೆಳಕು ಚೆಲ್ಲು. ಬೇರೆಯರಿಗಿಂತ ಭಿನ್ನವಾದ ನಿನ್ನ ಹೆಜ್ಜೆಯ ಸಪ್ಪಳಕ್ಕೆ ನನ್ನ ಕಿವಿ ನಿಮಿರಿ ನಿಲ್ಲುವಂತಾಗಲಿ. ಬೇರೆಯವರ ಹೆಜ್ಜೆ ಸಪ್ಪಳ ನನ್ನನ್ನು ಹೆದರಿಸಿ ಪೊಟರೆಯಲ್ಲಿ ಅಡಗಿಕೊಳ್ಳುವಂತೆ ಮಾಡಿದರೆ, ನಿನ್ನದು ನನ್ನನ್ನು ಹೊರಕ್ಕೆ ಕರೆಯುವ ಸಂಗೀತವಾಗುತ್ತದೆ. ನೋಡಿಲ್ಲಿ, ದಿಗಂತದವರೆಗೂ ಹಬ್ಬಿರುವ ಗೋಧಿಯ ಹೊಲ. ನಾನು ರೊಟ್ಟಿ ತಿನ್ನುವವನಲ್ಲ.

ಗೋಧಿ ನನಗ್ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಗೋಧಿಯ ಹೊಲಗಳಿಗೂ ನನ್ನಲ್ಲಿ ಪಿಸುಗುಟ್ಟಲು ಏನೂ ಇಲ್ಲ. ಅದು ಬೇಸರದ ಸಂಗತಿಯಲ್ಲವೆ? ನಿನ್ನ ತಲೆಗೂದಲು ನೋಡು ಹೇಗೆ ಹೊಂಬಣ್ಣದಿಂದ ಹೊಳೆಯುತ್ತಿದೆ. ನೀನು ನನ್ನನ್ನು ಪಳಗಿಸಿದಲ್ಲಿ ಬದುಕೆಷ್ಟು ಸುಂದರವಾಗುತ್ತದೆ! ಗೋಧಿಯ ತೆನೆಯೂ ಹೊಂಬಣ್ಣ. ಅದರ ದೃಶ್ಯ ನಿನ್ನ ನೆನಪು ಮೂಡಿಸುತ್ತದೆ. ಆ ತೆನೆಗಳ ನಡುವೆ ಸುಳಿದಾಡುವ ತಂಗಾಳಿಯ ಪಿಸುಮಾತು ಆಲಿಸುತ್ತಾ ಕೂತಿರಬಲ್ಲೆ ....'

ನರಿ ಬಹಳಷ್ಟು ಹೊತ್ತು ಪುಟ್ಟ ರಾಜಕುಮಾರನನ್ನು ದಿಟ್ಟಿಸಿ ನೋಡುತ್ತಲೇ ಇತ್ತು.

'ದಯವಿಟ್ಟು .... ನನ್ನನ್ನು ಪಳಗಿಸು', ಮತ್ತೆ ಹೇಳಿತು.

'ಪಳಗಿಸಲು ನನಗೂ ಇಷ್ಟ', ಪುಟ್ಟ ರಾಜಕುಮಾರ ಹೇಳಿದ. 'ಆದರೆ ಏನು ಮಾಡಲಿ, ನನಗೆ ಸಮಯವೇ ಇಲ್ಲ. ನಾನು ಗೆಳೆಯರ ಹುಡುಕಾಟದಲ್ಲಿ ತೊಡಗಿದ್ದೇನೆ ಅಲ್ಲದೆ ನನಗೆ ಬಹಳಷ್ಟು ವಿಷಯಗಳನ್ನು ಅರಿತುಕೊಳ್ಳಬೇಕಿದೆ.'

'ತಾವು ಪಳಗಿಸುವುದನ್ನು ಮಾತ್ರ ಜನ ಅರಿಯಬಲ್ಲರು', ನರಿ ಹೇಳಿತು.

'ಮನುಷ್ಯರಿಗೆ ಯಾವುದನ್ನೂ ಅರಿಯಲು ಈಗ ಸಮಯವೇ ಇರುವುದಿಲ್ಲ. ಈಗ ಅವರು ಎಲ್ಲಾ ರೆಡಿಮೇಡ್ ವಸ್ತುಗಳನ್ನು ಅಂಗಡಿಗಳಿಂದಲೇ ಕೊಳ್ಳುತ್ತಾರೆ. ಆದರೆ ಗೆಳೆತನ ಮಾರುವ ಅಂಗಡಿ ಎಲ್ಲಿಯೂ ಇಲ್ಲವಲ್ಲ, ಹಾಗಾಗಿ ಈಗ ಮನುಷ್ಯರಿಗೆ ಗೆಳೆಯರೇ ಇಲ್ಲ. ನಿನಗೊಬ್ಬ ಗೆಳೆಯ ಬೇಕಾದಲ್ಲಿ ನನ್ನನ್ನು ಪಳಗಿಸು.......'

'ನಿನ್ನನ್ನು ಪಳಗಿಸಬೇಕಾದರೆ ನಾನೇನು ಮಾಡಬೇಕು?' ಪುಟ್ಟ ರಾಜಕುಮಾರ ಕೇಳಿದ.

'ನಿನಗೆ ಬಹಳಷ್ಟು ತಾಳ್ಮೆ ಇರಬೇಕು', ಉತ್ತರಿಸಿತು ನರಿ. 'ಮೊದಲಿಗೆ ನನ್ನಿಂದ ಸ್ವಲ್ಪ ದೂರದಲ್ಲಿ ಹುಲ್ಲಿನ ಮೇಲೆ ಕುಳಿತುಕೊಳ್ಳುತ್ತೀಯಾ....... ಹಾ! ಹಾಗೆ. ನಾನು ಓರೆಗಣ್ಣಿನಿಂದ ನಿನ್ನನ್ನು ನೋಡುತ್ತೇನೆ. ನೀನು ಏನೂ ಹೇಳುವುದಿಲ್ಲ. ಮಾತುಗಳೇ ತಪ್ಪುಕಲ್ಪನೆಗಳಿಗೆ ಮೂಲವಲ್ಲವೆ. ದಿನಕಳೆದಂತೆ ನೀನು ನನ್ನ ಹತ್ತಿರ ಹತ್ತಿರ ಬರುತ್ತೀಯ..........'

ಮರುದಿನ ಪುಟ್ಟ ರಾಜಕುಮಾರ ಮತ್ತೆ ಬಂದ.

'ನೀನು ಒಂದೇ ಸಮಯಕ್ಕೆ ಬರಬೇಕು', ನರಿ ಹೇಳಿತು. 'ಉದಾಹರಣೆಗೆ, ನೀನು ಸಂಜೆ ನಾಲ್ಕು ಗಂಟೆಗೆ ಬಂದರೆ, ಮರುದಿನ ಮೂರು ಗಂಟೆಗೇ ನನ್ನೆದೆ ಢವಢವಗುಟ್ಟುತ್ತಿರುತ್ತದೆ. ನೀ ಬರುವ ಸಮಯ ಹತ್ತಿರ ಹತ್ತಿರ ಬಂದಂತೆ ಸಂತೋಷ ಹೆಚ್ಚುತ್ತಾ ಹೋಗುತ್ತದೆ. ನಾಲ್ಕು ಗಂಟೆಗೆ ಸರಿಯಾಗಿ ನಿನ್ನ ಬಗ್ಗೆ ಆಲೋಚಿಸಿ ಕುಣಿಯತೊಡಗುತ್ತೇನೆ. ನೀ ಬಂದ ಕೂಡಲೆ ನಾನೆಷ್ಟು ಸಂತೋಷವಾಗಿದ್ದೇನೆಂಬುದನ್ನು ನಿನಗೆ ತೋರಿಸಿಕೊಡುತ್ತೇನೆ! ಅದೇ ನೀನು ಸಮಯಪಾಲನೆ ಮಾಡದಿದ್ದರೆ ನಿನ್ನನ್ನು ಸ್ವಾಗತಿಸಲು ಯಾವಾಗ ತಯಾರಾಗಬೇಕೆಂದು ನನ್ನ ಹೃದಯಕ್ಕೆ ತಿಳಿಯುವುದಿಲ್ಲ .... ಸಮಯಪಾಲನೆ ಮಾಡಬೇಕು ಹಾಗೂ ಸರಿಯಾದ ಆಚರಣೆಯನ್ನು ಪಾಲಿಸಬೇಕು.'

'ಆಚರಣೆ – ಹಾಗೆಂದರೇನು?', ಕೇಳಿದ ಪುಟ್ಟ ರಾಜಕುಮಾರ.

'ಅದೂ ಸಹ ಒಂದು ರೀತಿ ಉದಾಸೀನಕ್ಕೊಳಗಾದ ಕ್ರಿಯೆ', ಹೇಳಿತು

ನರಿ. 'ಈ ಆಚರಣೆಗಳಿಂದಲೇ ಒಂದು ದಿನ ಮತ್ತೊಂದು ದಿನದಿಂದ ಹಾಗೂ ಒಂದು ಗಂಟೆ ಮತ್ತೊಂದು ಗಂಟೆಯಿಂದ ಭಿನ್ನವಾಗಿರುವುದು. ಉದಾಹರಣೆಗೆ, ನನ್ನ ಬೇಟೆಗಾರರು ಒಂದು ಆಚರಣೆಯನ್ನು ಪಾಲಿಸುತ್ತಾರೆ. ಪ್ರತೀ ಗುರುವಾರ ತಪ್ಪದೆ ಅವರು ತಮ್ಮ ಹಳ್ಳಿಯ ಹುಡುಗಿಯರ ಜೊತೆಗೂಡಿ ನೃತ್ಯ ಮಾಡುತ್ತಾರೆ. ಹಾಗಾಗಿ ನನಗೆ ಗುರುವಾರವೆಂದರೆ ಹಬ್ಬದ ದಿನ! ಆ ದಿನ ನಾನು ಊರಿನ ಸಮೀಪದವರೆಗೂ ಹೋಗಬಹುದು. ಅದೇ ಬೇಟೆಗಾರರು ಅವರಿಗಿಷ್ಟ ಬಂದ ದಿನ ನೃತ್ಯದಲ್ಲಿ ತೊಡಗುವ ಹಾಗಿದ್ದಲ್ಲಿ

ನನಗೆ ಪ್ರತಿ ದಿನವೂ ಒಂದೇ ರೀತಿ ಇರುತ್ತಿತ್ತು; ನನಗೆ ರಜೆ ದಿನವೇ ಇರುತ್ತಿರಲಿಲ್ಲ.'

ಕೊನೆಗೂ ಪುಟ್ಟ ರಾಜಕುಮಾರ ನರಿಯನ್ನು ಪಳಗಿಸಿದ. ರಾಜಕುಮಾರ ಅಲ್ಲಿಂದ ಹೊರಡುವ ದಿನ ಹತ್ತಿರ ಬಂದಾಗ–

'ಓಹ್! ನನಗೆ ದುಃಖವಾಗುತ್ತಿದೆ,' ಹೇಳಿತು ನರಿ ಖಿನ್ನವಾಗಿ.

'ಅದು ನಿನ್ನದೇ ತಪ್ಪು', ಹೇಳಿದ ಪುಟ್ಟ ರಾಜಕುಮಾರ. 'ನಾನು ನಿನಗೆ ಎಂದೂ ಯಾವುದೇ ತೊಂದರೆ ಬಯಸಿದವನಲ್ಲ; ನೀನೇ ಪಳಗಿಸುವಂತೆ ಕೋರಿಕೊಂಡೆ .... '

'ಹೌದು, ನನ್ನದೇ ತಪ್ಪು', ಹೇಳಿತು ನರಿ.

'ಹಾಗಾದರೆ ನೀನೀಗ ಅಳುತ್ತೀಯ!', ಪುಟ್ಟ ರಾಜಕುಮಾರ ಹೇಳಿದ.

'ಹೌದು'.

'ಹಾಗಾದರೆ ಪಳಗಿದ್ದರಿಂದ ನಿನಗೇನೂ ಉಪಯೋಗವಾಗಲಿಲ್ಲ. ಬದಲಿಗೆ ನಿನಗೆ ದುಃಖವನ್ನೇ ತಂದಿದೆ'.

'ಇಲ್ಲ ನನಗೆ ಒಳ್ಳೆಯದಾಗಿದೆ', ಹೇಳಿತು ನರಿ, 'ಏಕೆಂದರೆ ಈ ಗೋಧಿಯ ಹೊಲದ ಹೊಂಬಣ್ಣ ಸದಾ ನಿನ್ನ ನೆನಪು ತರುತ್ತದೆ'. ನರಿ ಹಾಗೇ ತನ್ನ ಮಾತು ಮುಂದುವರೆಸಿತು:

'ಈಗ ಹೋಗಿ ಗುಲಾಬಿಯ ತೋಟ ನೋಡು. ನಿನ್ನ ಗ್ರಹದಲ್ಲಿನ ಗುಲಾಬಿ ಏಕೆ ವಿಶಿಷ್ಟವಾದುದೆಂಬುದು ನಿನಗರ್ಥವಾಗುತ್ತದೆ. ನಂತರ ಬಂದು ನನಗೆ ವಿದಾಯ ಹೇಳು. ಆಮೇಲೆ ನಾನು ನಿನಗೊಂದು ಗುಟ್ಟಿನ ಮಾತಿನ ಉಡುಗೊರೆ ಕೊಡುತ್ತೇನೆ'.

ಪುಟ್ಟ ರಾಜಕುಮಾರ ಮತ್ತೊಮ್ಮೆ ಗುಲಾಬಿ ತೋಟವನ್ನು ನೋಡಲು ಹೋದ.

'ನೀವೆಲ್ಲಾ ನನ್ನ ಗುಲಾಬಿಯ ರೀತಿ ಇಲ್ಲವೇ ಇಲ್ಲ', ಪುಟ್ಟ ರಾಜಕುಮಾರ ತೋಟದಲ್ಲಿನ ಗುಲಾಬಿಗಳನ್ನು ಉದ್ದೇಶಿಸಿ ಹೇಳಿದ. 'ನೀವು ಯಾರೂ ಅಲ್ಲ, ನಿಮ್ಮನ್ನು ಯಾರೂ ಪಳಗಿಸಿಲ್ಲ ಹಾಗೂ ನೀವೂ ಯಾರನ್ನೂ ಪಳಗಿಸಿಲ್ಲ. ನಾನು ಮೊದಲಿಗೆ ನರಿಯನ್ನು ಭೇಟಿಯಾದಾಗ ಹೇಗಿದ್ದಿರೋ ಹಾಗೇ ಇದ್ದೀರಿ. ಆದರೆ ಈಗ ಆ ನರಿ ನನ್ನ ಗೆಳೆಯನಾಗಿದೆ, ಆದುದರಿಂದ ಅದು ನನಗೆ ಈ ಪ್ರಪಂಚದಲ್ಲೇ ಅತ್ಯಂತ ವಿಶಿಷ್ಟವಾದುದು'.

ಆ ಗುಲಾಬಿಗಳಿಗೆ ಸಂಕೋಚವಾಯಿತು.

'ನೀವು ಸುಂದರವಾಗಿದ್ದೀರಿ, ಆದರೆ ನಿಮ್ಮಲ್ಲಿ ಎಲ್ಲಾ ಖಾಲಿ ಖಾಲಿ. ನಿಮಗಾಗಿ ತಹತಹಿಸುವವರು ಯಾರೂ ಇಲ್ಲ. ಹಾದಿಹೋಕನೊಬ್ಬ ನನ್ನ ಗುಲಾಬಿಯನ್ನು ನೋಡಿದರೆ ಆತನಿಗೂ ಹಾಗೇ ಅನ್ನಿಸಬಹುದು. ಇತರ ಎಲ್ಲ ಗುಲಾಬಿಗಳಿಗಿಂತ ಆಕೆಯೇ ನನಗೆ ಹೆಚ್ಚು ಮುಖ್ಯವಾದವಳು; ಏಕೆಂದರೆ ನಾನು ನೀರು ಹನಿಸಿರುವುದು ಆಕೆಗೆ, ರಕ್ಷಣೆಗಾಗಿ ಗಾಜಿನ ಬೋಗುಣಿ ಹೊದಿಸಿದ್ದು ಆಕೆಗೆ, ಬಾಡದಿರಲೆಂದು ನೆರಳ ಪರದೆ ಇರಿಸಿದ್ದು ಆಕೆಗೆ, ಆಕೆಗಾಗಿಯೇ ನಾನು ಚಿಟ್ಟೆಯಾಗಲೆಂದು ಎರಡೋ ಮೂರೋ ಉಳಿಸಿ ಉಳಿದ ಕಂಬಳಿಹುಳುಗಳನ್ನು ಕೊಂದೆ. ನಾನು ತಾಳ್ಮೆಯಿಂದ ಆಲಿಸಿದ್ದು ಆಕೆಯ ಮಾತು– ಆಕೆಯ ಗೊಣಗಾಟವಿರಬಹುದು, ಜಂಬಕೊಚ್ಚಿ ಕೊಳ್ಳುವುದಿರಬಹುದು ಅಥವಾ ಕೆಲವೊಮ್ಮೆ ಆಕೆಯ ಮೌನವನ್ನೇ ಆಲಿಸಿರಬಹುದು, ಏಕೆಂದರೆ ಆಕೆ ನನ್ನ ಗುಲಾಬಿ,' ಪುಟ್ಟ ರಾಜಕುಮಾರ ಹೇಳಿದ.

ನಂತರ ನರಿಯ ಬಳಿ ಹೋಗಿ,

'ಹೋಗಿ ಬರುತ್ತೇನೆ ಗೆಳೆಯಾ', ಎಂದ.

'ಹೋಗಿ ಬಾ', ಎಂದು ಹೇಳಿದ ನರಿ ಅವನನ್ನು ಕರೆದು ಹೇಳಿತು,

'ಹತ್ತಿರ ಬಾ, ನನ್ನ ಗುಟ್ಟಿನ ಮಾತು ಹೇಳುತ್ತೇನೆ – ಇದು ಬಹಳ ಸರಳವಾದ ವಿಷಯ, ನೆನಪಿನಲ್ಲಿಟ್ಟುಕೊ: ಹೃದಯ ತೆರೆದು ನೋಡಿದಾಗ ಮಾತ್ರ ಸತ್ಯ ಕಾಣುತ್ತದೆ; ಯಾವುದು ಸತ್ಯವೋ ಅದು ಬರಿಯ ಕಣ್ಣಿಗೆ ಕಾಣುವುದಿಲ್ಲ'.

'ಯಾವುದು ಸತ್ಯವೋ ಅದು ಬರಿಯ ಕಣ್ಣಿಗೆ ಕಾಣುವುದಿಲ್ಲ'. ನರಿಯ ಮಾತು ನೆನಪಿನಲ್ಲಿರಲೆಂದು ಪುಟ್ಟ ರಾಜಕುಮಾರ ಮತ್ತೊಮ್ಮೆ ಅದನ್ನು ತನ್ನಲ್ಲೇ ಹೇಳಿಕೊಂಡ.

'ನೀನು ನಿನ್ನ ಗುಲಾಬಿಗೋಸ್ಕರ ಕಳೆದ ಸಮಯವೇ, ನಿನ್ನ ಗುಲಾಬಿ ನಿನಗೆ ಅಷ್ಟೊಂದು ಮುಖ್ಯವಾಗಲು ಕಾರಣ'.

'ನಾನು ನನ್ನ ಗುಲಾಬಿಗೋಸ್ಕರ ಕಳೆದ ಸಮಯವೇ, ನನ್ನ ಗುಲಾಬಿ ನನಗೆ ಅಷ್ಟೊಂದು ಮುಖ್ಯವಾಗಲು ಕಾರಣ', ನೆನಪಿನಲ್ಲಿರಲೆಂದು ಪುಟ್ಟ ರಾಜಕುಮಾರ ಮತ್ತೊಮ್ಮೆ ತನ್ನಲ್ಲೇ ಹೇಳಿಕೊಂಡ.

'ಮನುಷ್ಯರು ಈ ಸತ್ಯವನ್ನು ಮರೆತಿದ್ದಾರೆ', ಹೇಳಿತು ನರಿ. 'ಆದರೆ ನೀನು ಮಾತ್ರ ಇದನ್ನು ಮರೆಯಬೇಡ. ನೀನು ಪಳಗಿಸಿದ ಜೀವಕ್ಕೆ ನೀನು ಯಾವತ್ತೂ ನಿಷ್ಠನಾಗಿರಬೇಕು, ಅದರ ಬಗ್ಗೆ ನೀನು ಜವಾಬ್ದಾರನಾಗಿರಬೇಕು. ನಿನ್ನ ಗುಲಾಬಿಯ ಹೊಣೆಗಾರಿಕೆ ನಿನ್ನ ಮೇಲಿದೆ'.

'ನನ್ನ ಗುಲಾಬಿಯ ಹೊಣೆಗಾರಿಕೆ ನನ್ನ ಮೇಲಿದೆ', ನೆನಪಿನಲ್ಲಿರಲೆಂದು ಪುಟ್ಟ ರಾಜಕುಮಾರ ಮತ್ತೊಮ್ಮೆ ತನ್ನಲ್ಲೇ ಹೇಳಿಕೊಂಡ.

22

'ನಮಸ್ಕಾರ', ಪುಟ್ಟ ರಾಜಕುಮಾರ ಹೇಳಿದ.

'ನಮಸ್ಕಾರ', ರೈಲ್ವೇ ಸ್ವಿಚ್‌ಮ್ಯಾನ್ ಹೇಳಿದ.

'ಏನು ಮಾಡುತ್ತಿದ್ದೀರಿ?', ಪುಟ್ಟ ರಾಜಕುಮಾರ ಕೇಳಿದ.

'ಪ್ರಯಾಣಿಕರನ್ನು ಸಾವಿರ ಸಾವಿರ ಸಂಖ್ಯೆಯಲ್ಲಿ ಗುಂಪು ಗುಂಪು ವಿಂಗಡಿಸುತ್ತಿದ್ದೇನೆ', ಹೇಳಿದ ಆತ. 'ಪ್ರಯಾಣಿಕರನ್ನು ಹೊತ್ತೊಯ್ಯುವ ಟ್ರೈನುಗಳನ್ನು ಒಮ್ಮೆ ಎಡದಿಕ್ಕಿಗೆ, ಒಮ್ಮೆ ಬಲದಿಕ್ಕಿಗೆ ಕಳುಹಿಸುತ್ತೇನೆ'.

ಆಗ ಒಂದು ಪ್ರಖರ ದೀಪದ ಒಂದು ಟ್ರೈನು ಗಡಚಿಕ್ಕುವ ಗುಡುಗಿನಂತಹ ಶಬ್ದ ಮಾಡಿಕೊಂಡು ಸ್ವಿಚ್‌ಮ್ಯಾನ್ ಕ್ಯಾಬಿನನ್ನು ದಾಟಿ ವೇಗವಾಗಿ ಹಾದುಹೋಯಿತು. ಅದರ ವೇಗಕ್ಕೆ ಕ್ಯಾಬಿನ್ ಅಲುಗಾಡಿತು.

'ಅದೇಕೆ ಜನ ಅಷ್ಟೊಂದು ಅವಸರದಲ್ಲಿದ್ದಾರೆ? ಅವರೆಲ್ಲಾ ಏನು ಹುಡುಕುತ್ತಿದ್ದಾರೆ?', ಕೇಳಿದ ಪುಟ್ಟ ರಾಜಕುಮಾರ.

'ಅದು ಟ್ರೈನಿನ ಡ್ರೈವರನಿಗೂ ತಿಳಿದಿಲ್ಲ', ಹೇಳಿದ ಸ್ವಿಚ್‌ಮ್ಯಾನ್.

ಆಗ ಮತ್ತೊಂದು ಎಕ್ಸ್‌ಪ್ರೆಸ್ ಟ್ರೈನು ವೇಗವಾಗಿ ವಿರುದ್ಧ ದಿಕ್ಕಿನಲ್ಲಿ ಹಾದುಹೋಯಿತು.

'ಹೋದವರು ಆಗಲೇ ವಾಪಸ್ಸು ಬಂದುಬಿಟ್ಟರೆ?', ಬೆರಗಾಗಿ ಕೇಳಿದ ಪುಟ್ಟ ರಾಜಕುಮಾರ.

'ಇಲ್ಲ. ಅದು ಬೇರೆ ಟ್ರೈನು. ಅದು ಈ ದಿಕ್ಕಿಗೆ ಹೋಗುತ್ತದೆ', ಹೇಳಿದ ಸ್ವಿಚ್‌ಮ್ಯಾನ್.

'ಒಂದೇ ಕಡೆ ಇದ್ದರೆ ಜನರಿಗೆ ತೃಪ್ತಿಯಾಗುವುದಿಲ್ಲವೆ?', ಪುಟ್ಟ ರಾಜಕುಮಾರ ಕೇಳಿದ.

'ಅವರವರಿರುವ ಸ್ಥಾನದಲ್ಲಿ ಯಾರಿಗೂ ತೃಪ್ತಿ ಇರುವುದಿಲ್ಲ', ಹೇಳಿದ ಸ್ವಿಚ್‌ಮ್ಯಾನ್.

ಆಗ ಮತ್ತೊಂದು ಟ್ರೈನು ಅದೇ ರೀತಿ ಶಬ್ದ ಮಾಡಿಕೊಂಡು ವೇಗವಾಗಿ ಹಾದುಹೋಯಿತು.

'ಮೊದಲು ಹೋದ ಟ್ರೈನನ್ನು ಹಿಡಿಯಲು ಇವರು ಹೋಗುತ್ತಿದ್ದಾರೆಯೆ?'

'ಅವರು ಏನನ್ನೂ ಹಿಡಿಯಲು ಹೋಗುತ್ತಿಲ್ಲ. ಪ್ರಯಾಣಿಕರೆಲ್ಲ ನಿದ್ದೆ ಮಾಡಿರಬಹುದು, ಇಲ್ಲವೇ ಆಕಳಿಸುತ್ತಿರಬಹುದು. ಮಕ್ಕಳು ಮಾತ್ರ ಟ್ರೈನಿನ ಕಿಟಕಿಯ ಗಾಜುಗಳಿಗೆ ತಮ್ಮ ಮೂಗುಗಳನ್ನು ಒತ್ತಿ ಚಪ್ಪಟೆ ಮಾಡಿಕೊಳ್ಳುತ್ತಿರಬಹುದು'.

'ತಾವು ಹುಡುಕುತ್ತಿರುವುದು ಏನೆಂದು ಮಕ್ಕಳಿಗೆ ಮಾತ್ರ ಗೊತ್ತಿದೆಯೆನ್ನಿಸುತ್ತದೆ', ಹೇಳಿದ ಪುಟ್ಟ ರಾಜಕುಮಾರ. 'ಚಿಂದಿ ಬಟ್ಟೆಯ ಚೂರಿನಿಂದ ಗೊಂಬೆಯನ್ನು ತಯಾರು ಮಾಡಲು ಎಷ್ಟೊಂದು ಸಮಯ ಖರ್ಚುಮಾಡುತ್ತಾರೆ. ಆ ನಂತರ ಆ ಗೊಂಬೆ ಅವರಿಗೆ ಎಷ್ಟು ಮುಖ್ಯವಾಗುತ್ತದೆಂದರೆ, ಯಾರಾದರೂ ಅದನ್ನು ಕಿತ್ತುಕೊಂಡರೆ ಅಳಲಾರಂಭಿಸುತ್ತಾರೆ..........'

'ಅವರೇ ಅದೃಷ್ಟವಂತರು', ಸ್ವಿಚ್‌ಮ್ಯಾನ್ ಹೇಳಿದ.

23

'ನಮಸ್ಕಾರ', ಪುಟ್ಟ ರಾಜಕುಮಾರ ಹೇಳಿದ.

'ನಮಸ್ಕಾರ', ಪ್ರತಿವಂದಿಸಿದ ವ್ಯಾಪಾರಿ.

ಆ ವ್ಯಾಪಾರಿ ಬಾಯಾರಿಕೆ ನೀಗಿಸುವ ಮಾತ್ರೆಗಳನ್ನು ಮಾರುವವನಾಗಿದ್ದ. ನೀವು ವಾರಕ್ಕೊಂದು ಮಾತ್ರೆ ನುಂಗಿದರೆ ಸಾಕು, ನಿಮಗೆ ಇಡೀ ವಾರ ಬಾಯಾರಿಕೆಯಾಗುವುದಿಲ್ಲ.

'ನೀವು ಅದನ್ನು ಏಕೆ ಮಾರುತ್ತಿದ್ದೀರಿ?' ಪುಟ್ಟ ರಾಜಕುಮಾರ ಕೇಳಿದ.



'ಏಕೆಂದರೆ, ಇದರಿಂದ ಬಹಳಷ್ಟು ಸಮಯ ಉಳಿತಾಯವಾಗುತ್ತದೆ. ಪರಿಣಿತರು ಲೆಕ್ಕಹಾಕಿ ಈ ಮಾತ್ರೆಗಳಿಂದ ಪ್ರತೀ ವಾರ ಐವತ್ತಮೂರು ನಿಮಿಷಗಳಷ್ಟು ಸಮಯ ಉಳಿಸಬಹುದೆಂದು ಹೇಳಿದ್ದಾರೆ', ಎಂದ ವ್ಯಾಪಾರಿ.

'ವಾರಕ್ಕೆ ಐವತ್ತಮೂರು ನಿಮಿಷ ಸಮಯ ಉಳಿಸಿದರೆ, ಆ ಸಮಯದಲ್ಲಿ ನಾನೇನು ಮಾಡಬಹುದು?'

'ನಿನಗಿಷ್ಟಬಂದದ್ದು .... '

'ನನಗಿಷ್ಟಬಂದ ಹಾಗೆ ಕಳೆಯಲು ನನಗೇನಾದರೂ ಐವತ್ತಮೂರು ನಿಮಿಷಗಳ ಸಮಯ ಸಿಕ್ಕರೆ ನಾನು ಒಂದು ಸಿಹಿನೀರಬುಗ್ಗೆಯ ಬಳಿ ನೀರುಕುಡಿಯಲು ಆರಾಮವಾಗಿ ನಡೆದು ಹೋಗುತ್ತೇನೆ!'

24

ಈ ಮರುಭೂಮಿಯಲ್ಲಿ ನನ್ನ ವಿಮಾನಕ್ಕೆ ಅಪಘಾತವಾಗಿ ಎಂಟು ದಿನಗಳಾದುವು. ನನ್ನಲ್ಲಿದ್ದ ನೀರಿನ ಕೊನೆಯ ಹನಿ ಗುಟುಕರಿಸುತ್ತಿರುವಂತೆ ಪುಟ್ಟ ರಾಜಕುಮಾರ ವ್ಯಾಪಾರಿಯ ಕತೆ ಹೇಳಿ ಮುಗಿಸಿದ.

'ಓಹ್! ನಿನ್ನ ನೆನಪುಗಳು ಸೊಗಸಾಗಿವೆ; ಆದರೆ ಇಲ್ಲಿ ಇನ್ನೂ ನನ್ನ ವಿಮಾನದ ರಿಪೇರಿಯಾಗಿಲ್ಲ; ಇದ್ದ ಕುಡಿಯುವ ನೀರೂ ಬರಿದಾಗಿದೆ, ಈಗ ನನಗೂ ಒಂದು ಸಿಹಿನೀರಬುಗ್ಗೆಯ ಬಳಿ ಆರಾಮವಾಗಿ ನಡೆದು ಹೋಗುವಹಾಗಿದ್ದಿದ್ದರೆ ತುಂಬ ಸಂತೋಷವಾಗುತ್ತಿತ್ತು! ' ಎಂದೆ.

'ನನ್ನ ಗೆಳೆಯನಾಗಿದ್ದ ನರಿ .... ', ಪುಟ್ಟ ರಾಜಕುಮಾರ ಹೇಳತೊಡಗಿದ. ನಾನವನನ್ನು ತಡೆದು ಹೇಳಿದೆ,

'ನನ್ನ ಪ್ರೀತಿಯ ಪುಟ್ಟ ಮನುಷ್ಯನೆ, ಇದು ನರಿಯ ವಿಷಯ ಮಾತನಾಡುವ ಸಮಯವಲ್ಲ!'

'ಈಗ ಏಕೆ ಮಾತನಾಡಬಾರದು?'

'ಏಕೆಂದರೆ, ಈಗ ನಾನು ಬಾಯಾರಿಕೆಯಿಂದ ಸಾಯುತ್ತಿದ್ದೇನೆ.....'

ನನ್ನ ಮಾತು ಆತನಿಗೆ ಅರ್ಥವಾದಂತೆ ಕಾಣಲಿಲ್ಲ. ಆತ ಹೇಳಿದ:

'ಸಾಯುವ ಹಾಗಿದ್ದರೂ ಗೆಳೆಯನೊಬ್ಬನಿರುವುದು ಒಳ್ಳೆಯದಲ್ಲವೆ. ಉದಾಹರಣೆಗೆ ನನ್ನನ್ನು ನೋಡು, ನರಿಯೊಂದು ನನ್ನ ಗೆಳೆಯನಾಗಿರುವುದು ಎಷ್ಟೊಂದು ಸಂತೋಷದ ವಿಷಯ..........'

'ಈತನಿಗೆ ಅಪಾಯದ ಅರಿವಿಲ್ಲ,' ನನಗೆ ನಾನೇ ಹೇಳಿಕೊಂಡೆ. 'ಈತನಿಗೆಂದೂ ಹಸಿವಾಗಲಿ, ಬಾಯಾರಿಕೆಯಾಗಲಿ ಆಗಿಲ್ಲ. ಈತನಿಗೇನು ಚೂರು ಸೂರ್ಯರಶ್ಮಿಯಾದರೆ ಸಾಕು............'

ನನ್ನನ್ನೇ ನೋಡುತ್ತಿದ್ದ ಪುಟ್ಟ ರಾಜಕುಮಾರ ನನ್ನ ಆಲೋಚನೆಗಳನ್ನು ಕೇಳಿಸಿಕೊಂಡವನಂತೆ ಹೇಳಿದ:

'ನನಗೂ ಬಾಯಾರಿಕೆಯಾಗುತ್ತಿದೆ. ನಡೆ, ಬಾವಿಯೊಂದನ್ನು ಹುಡುಕೋಣ..... '

ನಾನು ಬಳಲಿದವನಂತೆ ಕೈ ಬೀಸಿದೆ. ಈ ಮರುಭೂಮಿಯಲ್ಲಿ

ಗೊತ್ತುಗುರಿಯಿಲ್ಲದೆ ಬಾವಿ ಹುಡುಕುವುದು ಮೂರ್ಖತನವಾಗಿತ್ತು. ಆದರೂ ಇಬ್ಬರೂ ನಡೆಯಲು ಆರಂಭಿಸಿದೆವು.

ಮೌನವಾಗಿ ಹಲವಾರು ಗಂಟೆಗಳು ನಡೆದೆವು. ಸೂರ್ಯ ಮುಳುಗತೊಡಗಿದ, ನಕ್ಷತ್ರಗಳು ಮಿನುಗತೊಡಗಿದವು. ಬಾಯಾರಿಕೆಯಿಂದ ಬಳಲಿದ್ದ ನನಗೆ ಜ್ವರದಿಂದ ನರಳುತ್ತಿರುವಂತೆ ಅನ್ನಿಸುತ್ತಿತ್ತು. ಕನಸಲ್ಲಿ ಎಂಬಂತೆ ತಲೆಯೆತ್ತಿ ನಕ್ಷತ್ರಗಳನ್ನು ನೋಡತೊಡಗಿದೆ. ಪುಟ್ಟ ರಾಜಕುಮಾರ ಹೇಳಿದ್ದ ಕೊನೆಯ ಮಾತು ಸ್ಮೃತಿಯ ಆಳದಿಂದ ತೇಲಿ ಮೇಲೆ ಬಂತು. ತಕ್ಷಣ ನಾನು ಕೇಳಿದೆ,

'ಹಾಗಾದರೆ ನಿನಗೂ ಬಾಯಾರಿಕೆಯಾಗುತ್ತದೆಯೆ?'

ಆತ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಏನೋ ಆಲೋಚಿಸುತ್ತಿದ್ದಂತಿದ್ದ ಆತ ನಿರ್ಲಿಪ್ತನಾಗಿ ಹೇಳಿದ: 'ನೀರು ಹೃದಯಕ್ಕೂ ಒಳ್ಳೆಯದಿರಬಹುದು...........'

ಆತನ ಈ ಮಾತು ನನಗರ್ಥವಾಗಲಿಲ್ಲ, ಆದರೆ ನಾನೇನೂ ಹೇಳಲಿಲ್ಲ, ಏಕೆಂದರೆ ಆತನನ್ನು ಕೆದಕುತ್ತಾ ಮತ್ತೆಮತ್ತೆ ಪ್ರಶ್ನಿಸುವುದು ಸಾಧ್ಯವಿಲ್ಲದ ಮಾತು. ಬಳಲಿದ್ದ ಆತ ಅಲ್ಲೇ ಕೂತ. ನಾನು ಆತನ ಪಕ್ಕದಲ್ಲೇ ಕೂತೆ. ಸ್ವಲ್ಪ ಹೊತ್ತಿನ ಮೌನದ ನಂತರ ಆತ ಹೇಳಿದ:

'ಎಲ್ಲೋ ಅಡಗಿರುವ ಒಂದು ಹೂವಿನಿಂದಾಗಿ ತಾರೆಗಳು ಎಷ್ಟು ಸುಂದರವಾಗಿವೆಯಲ್ಲಾ!'

'ಹೌದು', ನಾನು ಹೇಳಿದೆ. ಮತ್ತೇನೂ ಹೇಳಲು ತೋಚದೆ ತಿಂಗಳ ಬೆಳಕಿನಲ್ಲಿ ದಿಗಂತದವರೆಗೂ ಹಬ್ಬಿದ್ದ ಮರಳ ಸಾಗರವನ್ನು ದಿಟ್ಟಿಸಿದೆ.

'ಮರುಭೂಮಿ ಎಷ್ಟು ಸುಂದರವಾಗಿದೆ', ಪುಟ್ಟ ರಾಜಕುಮಾರ ಹೇಳಿದ.

ಅದು ನಿಜವಾಗಿತ್ತು. ಮೊದಲಿನಿಂದಲೂ ನಾನು ಮರುಭೂಮಿಯನ್ನು ಇಷ್ಟಪಡುತ್ತಿದ್ದೆ. ಮರುಭೂಮಿಯ ಮರಳುದಿಬ್ಬಗಳ ಮೇಲೆ ಕೂತಾಗ ಏನೂ ಕಾಣುವುದಿಲ್ಲ, ಏನೂ ಕೇಳುವುದಿಲ್ಲ. ಆದರೂ ಆ ನಿಶ್ಶಬ್ದದಲ್ಲಿ ಎಲ್ಲೋ ಏನೋ ತುಡಿಯುತ್ತಿರುತ್ತದೆ...............

'ಮರುಭೂಮಿ ಸುಂದರವಾಗಿದೆ ಏಕೆಂದರೆ, ಅದು ತನ್ನಲ್ಲಿ ಎಲ್ಲೋ ಒಂದು ಬಾವಿಯನ್ನು ಅಡಗಿಸಿಕೊಂಡಿದೆ..........', ಪುಟ್ಟ ರಾಜಕುಮಾರ ಹೇಳಿದ.

ಮರುಭೂಮಿಯ ರಹಸ್ಯಮಯ ಪ್ರಜ್ವಲತೆಯನ್ನು ಆತ ಅರ್ಥ ಮಾಡಿಕೊಂಡ ರೀತಿ ನನ್ನನ್ನು ಬೆರಗಾಗಿಸಿತು. ನಾನು ಚಿಕ್ಕಹುಡುಗನಾಗಿದ್ದಾಗ ನಾವೊಂದು ಹಳೆಯ ಮನೆಯಲ್ಲಿದ್ದೆವು. ಆ ಮನೆಯಲ್ಲೆಲ್ಲೋ ಗುಪ್ತನಿಧಿ ಇದೆಯೆಂಬ ದಂತಕತೆ ಹರಡಿತ್ತು. ಆದರೆ ಸತ್ಯದ ಸಂಗತಿ ಎಂದರೆ, ಅದನ್ನು ಪಡೆಯುವುದು ಹೇಗೆಂದು ಯಾರಿಗೂ ತಿಳಿದಿರಲಿಲ್ಲ, ಯಾರೂ ಅದನ್ನು ಹುಡುಕುವ ಪ್ರಯತ್ನ ಮಾಡಿರಲಿಲ್ಲ. ಆದರೆ ಆ ಮನೆಯಲ್ಲಿ ಗುಪ್ತನಿಧಿ ಇದೆಯೆಂಬ ವಿಷಯವೇ ಆ ಮನೆಯ ಮೇಲೆ ಎಂತಹುದೋ ಮೋಡಿ ಮಾಡಿತ್ತು. ನನ್ನ ಮನೆ ತನ್ನ ಹೃದಯದಾಳದಲ್ಲಿ ಎಲ್ಲೋ ಒಂದು ರಹಸ್ಯವನ್ನು ಅಡಗಿಸಿಕೊಂಡಿತ್ತು.......

'ಹೌದು', ಪುಟ್ಟ ರಾಜಕುಮಾರನಿಗೆ ಹೇಳಿದೆ. 'ಮನೆ, ನಕ್ಷತ್ರಗಳು, ಮರುಭೂಮಿ ಎಲ್ಲಾ ಸುಂದರವಾಗಿವೆ ಏಕೆಂದರೆ ಅವುಗಳಲ್ಲಿ ಎಲ್ಲೋ ಏನೋ ಅಡಗಿದೆ!'

'ನನ್ನ ನರಿ ಹೇಳಿದ ಮಾತನ್ನು ನೀನು ಒಪ್ಪಿಕೊಳ್ಳುತ್ತಿರುವುದು ನನಗೆ ಸಂತೋಷ ತಂದಿದೆ', ಹೇಳಿದ ಆತ.

ಪುಟ್ಟ ರಾಜಕುಮಾರ ಹಾಗೇ ನಿದ್ರೆ ಮಾಡಿದ. ಆತನನ್ನು ಎತ್ತಿಕೊಂಡು ನಾನು ಅನ್ವೇಷಣೆ ಮುಂದುವರೆಸಿದೆ. ನನ್ನ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಯಾವುದೋ ಅತ್ಯಮೂಲ್ಯ, ಸುಕೋಮಲ ನಿಧಿಯನ್ನು ಹೊತ್ತೊಯ್ಯುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಇಡೀ ಭೂಮಿಯ ಮೇಲೆ ಇಷ್ಟೊಂದು ಸುಕೋಮಲವಾದ ವಸ್ತು ಮತ್ತೊಂದಿಲ್ಲ ಎನ್ನಿಸುತ್ತಿತ್ತು. ಬೆಳದಿಂಗಳಲ್ಲಿ ಆತನ ಬಳಲಿದ ಹಣೆ, ಮುಚ್ಚಿದ ಕಣ್ಣು, ತಂಗಾಳಿಗೆ ಆಡುವ ಮುಂಗುರುಳು.........ನನಗೆ ನಾನೇ ಹೇಳಿಕೊಂಡೆ: 'ನಾನಿಲ್ಲಿ ನೋಡುತ್ತಿರುವುದು ಕೇವಲ ಹೊರಕವಚ ಮಾತ್ರ. ಮುಖ್ಯವಾಗಿರುವುದೆಂದರೆ ಅದರಲ್ಲಿ ಅಡಗಿರುವುದು, ಕಣ್ಣಿಗೆ ಕಾಣದಿರುವುದು............'

ನಿದ್ರೆಯಲ್ಲೇ ಆತನ ತುಟಿಗಳು ಮುಗುಳ್ನಗಲೋ ಎಂಬಂತೆ ಕೊಂಚ ಅರಳಿದವು. ನಾನು ಮೌನವಾಗಿ ಸ್ವಗತ ಮುಂದುವರಿಸಿದ್ದೆ: 'ಇಲ್ಲಿ ನಿದ್ರಿಸುತ್ತಿರುವ ಈ ಪುಟ್ಟ ರಾಜಕುಮಾರ ನನ್ನ ಮನಸ್ಸನ್ನು ಗಾಢವಾಗಿ ಏಕೆ ತಾಕುತ್ತಾನೆಂದರೆ– ಒಂದು ಹೂವಿನ ಬಗ್ಗೆ ಇರುವ ಆತನ ನಿಷ್ಠೆ. ಆತನ ಗುಲಾಬಿ, ಆತ ನಿದ್ರಿಸುತ್ತಿದ್ದರೂ, ದೀಪದ ಕುಡಿಯಂತೆ ಆತನಲ್ಲೆಲ್ಲಾ ಸಂಪೂರ್ಣವಾಗಿ ಪ್ರಜ್ವಲಿಸುತ್ತಿದೆ..........'. ಆತ ಇನ್ನಷ್ಟು ಸುಕೋಮಲವಾಗುತ್ತಿದ್ದಾನೆಂದು

ಭಾಸವಾಯಿತು. ಬಿರುಗಾಳಿಗೊಡ್ಡಿದ ದೀಪದಂತೆ ಆತ ನಂದಿಹೋಗ ಬಹುದೆಂಬ ಹೆದರಿಕೆಯಿಂದ ಆತನನ್ನು ರಕ್ಷಿಸಬೇಕೆಂದೆನಿಸಿತು............

ಹಾಗೇ ನಡೆದಂತೆ, ದಿಗಂತದಲ್ಲಿ ಸೂರ್ಯ ಮೂಡುತ್ತಿದ್ದಂತೆ ಬಾವಿಯೊಂದು ಕಾಣಿಸಿತು.

25

'ಮನುಷ್ಯರು ಎಕ್ಸ್‌ಪ್ರೆಸ್ ಟ್ರೈನುಗಳಲ್ಲಿ ಓಡಾಡುತ್ತಾರೆ, ತಾವು ಹುಡುಕುತ್ತಿರುವುದು ಏನೆಂದು ಅವರಿಗೇ ತಿಳಿದಿರುವುದಿಲ್ಲ. ಅವಸರದಿಂದ, ಗಾಬರಿಯಿಂದ ಓಡಾಡುತ್ತಾರೆ, ಸುತ್ತುತ್ತಾರೆ, ಸುತ್ತುತ್ತಲೇ ಇರುತ್ತಾರೆ...........', ಪುಟ್ಟ ರಾಜಕುಮಾರ ಹೇಳಿದ.

ಹಾಗೆಯೇ ಮಾತು ಮುಂದುವರೆಸಿದ:

'ಆದರೆ ಅಷ್ಟೆಲ್ಲ ಅವಶ್ಯಕತೆ ಇಲ್ಲ......... '

ನಮಗೆ ಸಿಕ್ಕಿದ ಬಾವಿ ಸಹಾರಾದ ಬಾವಿಗಳಂತೆ ಇರಲಿಲ್ಲ. ಸಹಾರಾದ ಬಾವಿಗಳೆಂದರೆ ಮರಳಿನಲ್ಲಿ ಅಗೆದ ಬರೇ ಹೊಂಡಗಳಷ್ಟೆ. ಇದು ನಮ್ಮ ಹಳ್ಳಿಗಳಲ್ಲಿನ ಬಾವಿಯ ಹಾಗಿತ್ತು. ಆದರೆ ಇಲ್ಲಿ ಸುತ್ತಮುತ್ತ ಯಾವುದೇ ಹಳ್ಳಿ ಇರಲಿಲ್ಲ...... ನಾವು ಯಾವುದೋ ಕನಸಿನ ಲೋಕದಲ್ಲಿರುವಂತೆ ನನಗೆ ಭಾಸವಾಯಿತು.............

'ವಿಚಿತ್ರವಾಗಿದೆಯಲ್ಲಾ', ನಾನು ಪುಟ್ಟ ರಾಜಕುಮಾರನಿಗೆ ಹೇಳಿದೆ. 'ಎಲ್ಲವೂ ಬಳಕೆಗೆ ಸಿದ್ಧವಾದಂತಿದೆ– ರಾಟೆ, ಹಗ್ಗ, ಬಕೆಟ್...........'

ಆತ ನಗುತ್ತಾ ಹಗ್ಗಕ್ಕೆ ಕಟ್ಟಿದ ಬಕೆಟ್ಟನ್ನು ಬಾವಿಗೆ ಇಳಿಬಿಟ್ಟ. ರಾಟೆ ಕಿರುಗುಟ್ಟಿತು.

'ಕೇಳಿಸಿತಾ? ನೋಡು ಬಾವಿಯನ್ನು ನಿದ್ದೆಯಿಂದ ಎಚ್ಚರಿಸಿದ್ದೇವೆ, ಬಾವಿ ಹಾಡುತ್ತಿದೆ..........'

ಆತ ನೀರು ಸೇದಿ ಇನ್ನಷ್ಟು ಆಯಾಸಗೊಳ್ಳದಿರಲೆಂದು, 'ಹಗ್ಗ ನನಗೆ ಕೊಡು. ಬಕೆಟ್ ತೂಕವಿದೆ', ಎಂದು ಹೇಳಿ ಹಗ್ಗವನ್ನು ನನ್ನ ಕೈಗೆ ತೆಗೆದುಕೊಂಡೆ. ಬಾಯಾರಿಕೆಯಿಂದ ಬಳಲಿದ್ದ ನನಗೆ ನೀರು ತುಂಬಿದ ಬಕೆಟ್ಟನ್ನು ಬಾವಿಯ ಕಟ್ಟೆಯ ಮೇಲೆ ಇಡುವುದು ಸಂತೋಷದ ಸಾಧನೆಯಾಗಿತ್ತು. ರಾಟೆಯ ಹಾಡು ಇನ್ನೂ ನನ್ನ ಕಿವಿಯಲ್ಲಿ ಗುನುಗುನುಗುಟ್ಟುತ್ತಿತ್ತು, ಕಲಕಿದ ನೀರಿನ ಅಲೆಗಳಲ್ಲಿ ಮಿಂಚಿದ ಸೂರ್ಯನ ಕಿರಣಗಳ ಹೊಳಪು ಇನ್ನೂ ನನ್ನ ಕಣ್ಣುಗಳಲ್ಲೇ ಇತ್ತು.



'ನನಗೂ ಈ ನೀರು ಕುಡಿಯುವ ಬಯಕೆಯಾಗಿದೆ. ನನಗೂ ಸ್ವಲ್ಪ ಕೊಡು...........,' ಪುಟ್ಟ ರಾಜಕುಮಾರ ಕೇಳಿದ.

ಬಕೆಟ್ ಎತ್ತಿ ಆತನ ತುಟಿಗೆ ಇರಿಸಿದೆ. ಆತ ಕಣ್ಣುಮುಚ್ಚಿ ಕುಡಿದ. ಆ ನೀರು ಯಾವುದೋ ಹಬ್ಬದ ಔತಣದಂತಿತ್ತು. ಈ ನೀರು ಎಲ್ಲ ನೀರುಗಳಂತಲ್ಲ. ಅದರ ಸಿಹಿ ರುಚಿಯು ತಾರೆಗಳ ಕೆಳಗಿನ ನಮ್ಮ ನಡಿಗೆಯಿಂದ, ರಾಟೆಯ ಹಾಡಿನಿಂದ, ನನ್ನ ತೋಳ್ಬಲದಿಂದ ರೂಪುಗೊಂಡಿತ್ತು. ಅದು ಯಾವುದೋ ಉಡುಗೊರೆಯಂತೆ. ಅದು ಹೃದಯಕ್ಕೆ ಒಳ್ಳೆಯದು. ನಾನು ಪುಟ್ಟ ಹುಡುಗನಾಗಿದ್ದಾಗ ಕ್ರಿಸ್‌ಮಸ್ ಮರದ ಮೇಲಿನ ಜಗಮಗಿಸುವ ದೀಪಗಳು,

ಮಧ್ಯರಾತ್ರಿಯ ಪ್ರಾರ್ಥನೆ, ಮುಗುಳ್ನಗೆಯಲ್ಲಿನ ಸುಕೋಮಲತೆ– ಇವು ಆಗ ನನಗೆ ಸಿಗುತ್ತಿದ್ದ ಉಡುಗೊರೆಗಳು. ಅವು ನನ್ನ ದಿನವನ್ನು ದೇದೀಪ್ಯಮಾನವಾಗುವಂತೆ ಮಾಡುತ್ತಿದ್ದವು.

'ನಿನ್ನ ಭೂಮಿಯ ಮೇಲಿನ ಮನುಷ್ಯರು ಒಂದೇ ತೋಟದಲ್ಲಿ ಐದು ಸಾವಿರ ಗುಲಾಬಿ ಬೆಳೆಸುತ್ತಾರೆ– ಆದರೂ ಅವರು ಹುಡುಕುತ್ತಿರುವುದು ಅವುಗಳಲ್ಲಿ ಸಿಗುವುದಿಲ್ಲ', ಹೇಳಿದ ಪುಟ್ಟ ರಾಜಕುಮಾರ.

'ಹೌದು, ಅವರಿಗೆ ಸಿಗುವುದಿಲ್ಲ', ನಾನು ಹೇಳಿದೆ.

'ಅವರು ಹುಡುಕುತ್ತಿರುವುದು ಒಂದೇ ಒಂದು ಗುಲಾಬಿಯಲ್ಲಿ ಅಥವಾ ಒಂದು ಬೊಗಸೆ ನೀರಿನಲ್ಲಿ ಸಿಗಬಹುದು.'

'ಹೌದು.'

'ಆದರೆ ಕಣ್ಣು ಕುರುಡಾಗಿದೆ. ನೋಡಬೇಕಿರುವುದು ಹೃದಯದಿಂದ........', ಪುಟ್ಟ ರಾಜಕುಮಾರ ಹೇಳಿದ.

ನೀರು ಬಾಯರಿಕೆಯನ್ನು ತಣಿಸಿತ್ತು. ಉಸಿರು ಸರಾಗವಾಗಿತ್ತು. ಸೂರ್ಯೋದಯ ಸಮಯದಲ್ಲಿ ಮರಳಿನ ಬಣ್ಣ ಮಧುವಿನಂತಿರುತ್ತದೆ. ಆ ಬಣ್ಣ ನನ್ನಲ್ಲಿ ಅಹ್ಲಾದಕರ ಅನುಭವ ಉಂಟುಮಾಡುತ್ತಿತ್ತು. ಆದರೂ .... ನನ್ನಲ್ಲಿ ಎಂಥದೋ ಹೇಳಿಕೊಳ್ಳಲಾಗದ ದುಗುಡ.

'ನೀನು ನಿನ್ನ ಮಾತು ಉಳಿಸಿಕೊಳ್ಳಬೇಕು', ಪುಟ್ಟ ರಾಜಕುಮಾರ ನನ್ನ ಪಕ್ಕ ಕೂತುಕೊಳ್ಳುತ್ತ ಹೇಳಿದ.

'ಯಾವ ಮಾತು?'

'ನಿನಗೆ ತಿಳಿದಿದೆ– ಅದೇ ನನ್ನ ಕುರಿಗೆ ಬಾಯಿಕುಕ್ಕೆ ಬರೆದು ಕೊಡುವ ವಿಷಯ .... ನನ್ನ ಹೂವಿನ ಜವಾಬ್ದಾರಿ ನನ್ನ ಮೇಲಿದೆ .... '

ನನ್ನ ಕಿಸೆಯಿಂದ ನಾನು ಬರೆದಿದ್ದ ಚಿತ್ರಗಳ ಕಟ್ಟನ್ನು ಹೊರತೆಗೆದೆ. ಅವುಗಳನ್ನು ಇಣುಕಿ ನೋಡಿದ ಪುಟ್ಟ ರಾಜಕುಮಾರ ನಕ್ಕು ಹೇಳಿದ:

'ನಿನ್ನ ಆನೆಹುಣಿಸೆ ಮರಗಳು – ಎಲೆಕೋಸು ಇದ್ದಹಾಗಿವೆ'.

'ಓಹ್!'. ನನ್ನ ಆನೆಹುಣಿಸೆ ಚಿತ್ರಗಳ ಬಗ್ಗೆ ನನಗೆ ಹೆಮ್ಮೆ ಇತ್ತು.

'ನಿನ್ನ ನರಿ– ಅದರ ಕಿವಿಗಳು ಕೊಂಬುಗಳ ಹಾಗಿವೆ; ಎಷ್ಟು ಉದ್ದವಿದೆ ನೋಡು'.

ಆತ ಮತ್ತೆ ನಕ್ಕ.

'ಪುಟ್ಟ ರಾಜಕುಮಾರ ಇದು ಸರಿಯಲ್ಲ', ನಾನು ಹೇಳಿದೆ. 'ಹೆಬ್ಬಾವನ್ನು ಒಳಗಿನಿಂದ ಮತ್ತು ಹೊರಗಿನಿಂದ ಬರೆಯುವುದು ಬಿಟ್ಟರೆ ಬೇರೇನೂ ನನಗೆ ಬರೆಯಲು ಬರುವುದಿಲ್ಲ'.

'ಇರಲಿ ಬಿಡು', ಆತ ಹೇಳಿದ, 'ಮಕ್ಕಳಿಗೆ ಅವು ಅರ್ಥವಾಗುತ್ತವೆ'.

ನಂತರ ಪೆನ್ಸಿಲ್‌ನಿಂದ ಕುರಿಗೆ ಬಾಯಿಕುಕ್ಕೆಯ ಚಿತ್ರ ಬಿಡಿಸಿದೆ. ಅದನ್ನು ಆತನಿಗೆ ಕೊಡುತ್ತಿದ್ದಂತೆ ಎದೆ ಭಾರವಾದಂತೆನ್ನಿಸಿತು.

'ನಿನ್ನ ಮನಸ್ಸಿನಲ್ಲಿ ನನ್ನೊಡನೆ ಇನ್ನೂ ಹೇಳಿಕೊಳ್ಳದಿರುವ ಬೇರೆ ಯಾವುದೋ ವಿಚಾರವಿದ್ದಂತಿದೆ', ನಾನು ಹೇಳಿದೆ.

ಆತ ಉತ್ತರಿಸಲಿಲ್ಲ. ಸ್ವಲ್ಪ ಹೊತ್ತಿನ ನಂತರ ಹೇಳಿದ:

'ನಿನಗೆ ಗೊತ್ತೇನು? ನಾಳೆಗೆ ನಾನು ಭೂಮಿಗೆ ಬಂದು ಒಂದು ವರ್ಷವಾಗುತ್ತದೆ'.

ಸ್ವಲ್ಪ ಹೊತ್ತಿನ ಮೌನದ ನಂತರ,

'ನಾನು ಇಲ್ಲೇ ಎಲ್ಲೋ ಹತ್ತಿರದಲ್ಲೇ ಇಳಿದದ್ದು' ಎಂದ. ಆತನ ಮುಖ ಕೆಂಪೇರಿತು.

ಮತ್ತೊಮ್ಮೆ ನನಗರಿವಾಗದ ದುಃಖದಿಂದ ನನ್ನ ಹೃದಯ ಕಿವಿಚಿದಂತಾಯಿತು. ತೋಚಿದ ಪ್ರಶ್ನೆಯನ್ನು ಕೇಳಿದೆ:

'ಹಾಗಾದರೆ ಒಂದು ವಾರದ ಕೆಳಗೆ ನನ್ನನ್ನು ಭೇಟಿಯಾದದ್ದು ಆಕಸ್ಮಿಕವಾಗಿಯೆ? ಯಾವುದೇ ಮನುಷ್ಯರಿರುವ ಬಿಡಾರದಿಂದ ಸಾವಿರ ಮೈಲು ದೂರವಿರುವ, ನೀನು ಮೊದಲಿಗೆ ಇಳಿದಿದ್ದ ಜಾಗಕ್ಕೆ ಈಗ ಹೋಗುತ್ತಿದ್ದೀಯ?'

ಆತನ ಮುಖ ಮತ್ತೊಮ್ಮೆ ಕೆಂಪೇರಿತು.

ಸ್ವಲ್ಪ ಹೊತ್ತಿನ ನಂತರ ಕೊಂಚ ಅಳುಕಿನಿಂದಲೇ ಕೇಳಿದೆ, 'ಬಹುಶಃ ನೀನು ಬಂದು ವರ್ಷವಾಯಿತು ಎಂದೇ?'

ಆತನ ಮುಖ ಮಗದೊಮ್ಮೆ ಕೆಂಪೇರಿತು. ಆತ ಪ್ರಶ್ನೆಗಳಿಗೆ ಎಂದೂ ಉತ್ತರಿಸಿದವನಲ್ಲ– ಆದರೆ ಮುಖ ಕೆಂಪೇರಿದರೆ 'ಹೌದು' ಎಂದರ್ಥವಲ್ಲವೆ?

'ಓಹ್!' ನಾನು ಹೇಳಿದೆ, 'ನನಗೇಕೋ ಹೆದರಿಕೆಯಾಗುತ್ತಿದೆ......'

ಆತ ನನ್ನ ಮಾತು ತಡೆದು ಹೇಳಿದ:

'ಈಗ ನೀನು ಹಿಂದಿರುಗಿ ನಿನ್ನ ವಿಮಾನದ ರಿಪೇರಿ ಕೆಲಸ ಮುಗಿಸು. ನಾನು ನಿನಗಾಗಿ ಇಲ್ಲೇ ಕಾಯುತ್ತಿರುತ್ತೇನೆ. ನಾಳೆ ಸಂಜೆ ಬಾ ..... '

ಆದರೆ ನನಗೇನೋ ಭರವಸೆ ಇರಲಿಲ್ಲ. ನರಿಯ ನೆನಪಾಯಿತು. ಪಳಗಿಸಲು ಅವಕಾಶ ಕೊಟ್ಟರೆ, ದುಃಖ ಅನಿವಾರ್ಯವೇನೋ ....

26

ಬಾವಿಯ ಪಕ್ಕದಲ್ಲಿ ಕಲ್ಲಿನ ಪಾಳು ಗೋಡೆಯೊಂದಿತ್ತು. ಮರುದಿನ ಸಂಜೆ ನಾನು ಹಿಂದಿರುಗಿದಾಗ ಪುಟ್ಟ ರಾಜಕುಮಾರ ಆ ಗೋಡೆಯ ಮೇಲೆ ಕೂತು ಕಾಲು ಅಲ್ಲಾಡಿಸುತ್ತ ಮಾತನಾಡುತ್ತಿದ್ದ:

'ಇಲ್ಲ, ನಿನಗೆ ನೆನಪಿಲ್ಲ. ಇದು ಆ ಸ್ಥಳವಲ್ಲ'.

ಆತನ ಮಾತಿಗೆ ಮತ್ತೊಂದು ಧ್ವನಿ ಉತ್ತರಿಸಿದ್ದಿರಬಹುದು. ಅದಕ್ಕೆ ಆತ ಹೇಳಿದ:

'ಹೌದು, ಹೌದು. ದಿನ ಚೆನ್ನಾಗಿದೆ. ಆದರೆ ಇದು ಆ ಸ್ಥಳವಲ್ಲ'.

ನಾನು ಪಾಳುಗೋಡೆಗೆ ಹತ್ತಿರ ಹತ್ತಿರ ಹೋದೆ. ಆದರೆ ಆತನ ಹೊರತು ಬೇರೆ ಯಾರೂ ಕಾಣಲಿಲ್ಲ ಹಾಗೂ ಬೇರ್ಯಾವ ಧ್ವನಿಯೂ ಕೇಳಲಿಲ್ಲ. ಪುಟ್ಟ ರಾಜಕುಮಾರ ಮತ್ತೊಮ್ಮೆ ಹೇಳಿದ:

'ಹೌದು, ಸರಿಯಾಗಿ ಹೇಳಿದೆ. ಮರಳಿನಲ್ಲಿ ನನ್ನ ಹೆಜ್ಜೆಗುರುತು ಎಲ್ಲಿ ಆರಂಭವಾಗುತ್ತದೆಂಬುದು ನಿನಗೆ ಕಾಣುತ್ತದೆ. ನೀನು ಬೇರೇನೂ ಮಾಡಬೇಕಾಗಿಲ್ಲ, ಅಲ್ಲಿ ನನಗಾಗಿ ಕಾಯುತ್ತಿರು. ನಾನು ರಾತ್ರಿ ಅಲ್ಲಿಗೆ ಬರುತ್ತೇನೆ'.

ನಾನು ಆ ಗೋಡೆಯಿಂದ ಇಪ್ಪತ್ತು ಗಜ ದೂರದಲ್ಲಿದ್ದೆ, ಆದರೂ ನನಗೇನೂ ಕಾಣಲಿಲ್ಲ.

ಸ್ವಲ್ಪ ಮೊತ್ತಿನ ಮೌನದ ನಂತರ ಆತ ಮತ್ತೆ ಹೇಳಿದ:

'ನಿನ್ನದು ಒಳ್ಳೆಯ ವಿಷ ತಾನೆ? ನಾನು ಹೆಚ್ಚು ನರಳ ಬೇಕಾಗುವುದಿಲ್ಲವಲ್ಲ?'

ನಾನು ಗಕ್ಕನೆ ಅಲ್ಲೇ ನಿಂತೆ, ಎದೆ ಢವಗುಟ್ಟಲಾರಂಭಿಸಿತು. ಆದರೂ ನನಗೇನೂ ಅರ್ಥವಾಗಲಿಲ್ಲ.

'ಈಗ ಹೊರಟುಹೋಗು', ಹೇಳುತ್ತಿದ್ದ ಪುಟ್ಟ ರಾಜಕುಮಾರ, 'ನಾನೀಗ ಗೋಡೆಯಿಂದ ಇಳಿಯಬೇಕು.'

ಆಗ ನಾನು ಕೆಳಗೆ ನೋಡಿದೆ; ನೋಡಿ ಹೌಹಾರಿದೆ. ಅಲ್ಲೇ ಕೆಳಗೆ ಪುಟ್ಟ ರಾಜಕುಮಾರನಿಗೆ ಎದುರಾಗಿ ಒಂದು ಹಳದಿ ಬಣ್ಣದ ಹಾವಿತ್ತು. ಅದರ ವಿಷ ಮುವ್ವತ್ತು ಸೆಕೆಂಡುಗಳಲ್ಲಿ ಜೀವವೊಂದನ್ನು ಕೊನೆಗಾಣಿಸಬಲ್ಲದು.

ತಕ್ಷಣ ನಾನು ನನ್ನ ಕಿಸೆಯಿಂದ ರಿವಾಲ್ವಾರ್ ತೆಗೆಯಲು ಕೈ ಹಾಕಿ ಒಂದು ಹೆಜ್ಜೆ ಹಿಂದೆ ಇರಿಸಿದೆ. ಆದರೆ ನಾನು ಮಾಡಿದ ಸಪ್ಪಳದಿಂದ ಮರಳಲ್ಲಿ ಹಿಂಗುವ ನೀರಿನ ಒರತೆಯಂತೆ ಆ ಹಾವು ಮರಳಲ್ಲೇ ಕಣ್ಮರೆಯಾಗಿ ಪಕ್ಕದಲ್ಲಿದ್ದ ಕಲ್ಲುಗಳ ಇರುಕಿನಲ್ಲಿ ಸೇರಿಕೊಂಡಿತು.

ನಾನು ಗೋಡೆಯ ಹತ್ತಿರ ಓಡಿ ಹೋಗಿ ನನ್ನ ಎರಡೂ ಕೈ ಚಾಚಿದೆ, ಪುಟ್ಟ ರಾಜಕುಮಾರ ನನ್ನ ಕೈಗಳೊಳಕ್ಕೆ ಹಾರಿದ; ಆತನ ಮುಖ ಹಿಮದಂತೆ ಬಿಳುಪಾಗಿತ್ತು.

'ಏನದು ಹುಡುಗಾಟ? ಹಾವಿನ ಜೊತೆ ಏಕೆ ಮಾತನಾಡುತ್ತಿದ್ದೀಯ?' ನಾನು ಗದರಿಸಿದೆ.

ಆತ ಸದಾ ಕಟ್ಟಿಕೊಂಡಿರುತ್ತಿದ್ದ ಮಫ್ಲರನ್ನು ಸಡಿಲಗೊಳಿಸಿದೆ. ನೀರಿನಿಂದ ಆತನ ಮುಖ ಒರೆಸಿ ಕುಡಿಯಲು ನೀರು ಕೊಟ್ಟೆ. ಆತನನ್ನು ಮತ್ತಾವುದೇ ಪ್ರಶ್ನೆ ಕೇಳುವ ಧೈರ್ಯ ನನಗಿರಲಿಲ್ಲ. ನನ್ನನ್ನೇ ನೋಡುತ್ತಿದ್ದ ಆತ ನನ್ನನ್ನು ತಬ್ಬಿಕೊಂಡ. ಆತನ ಎದೆಬಡಿತ ನನಗೆ ಕೇಳುತ್ತಿತ್ತು. ಅದು ಗುಂಡೇಟು ತಿಂದು ಸಾಯುತ್ತಿರುವ ಪಕ್ಷಿಯ ಎದೆಬಡಿತದಂತಿತ್ತು...........

'ನಿನ್ನ ವಿಮಾನದ ಇಂಜಿನ್‌ನಲ್ಲಿಯ ತೊಂದರೆ ಸರಿಹೋದುದಕ್ಕೆ ನನಗೆ ಸಂತೋಷವಾಗಿದೆ. ನೀನಿನ್ನು ಸುರಕ್ಷಿತವಾಗಿ ಮನೆಗೆ ಹೋಗಬಹುದು', ಪುಟ್ಟ ರಾಜಕುಮಾರ ಹೇಳಿದ.

'ವಿಮಾನ ಸರಿಹೋಗಿದ್ದು ನಿನಗೆ ಹೇಗೆ ಗೊತ್ತಾಯಿತು?'

ನನ್ನ ವಿಮಾನ ಸರಿಯಾಯಿತೆಂದು ತಿಳಿಸಲೇ ನಾನು ಆತನಲ್ಲಿಗೆ ಬರುತ್ತಿದ್ದೆ. ಆತ ನನ್ನ ಪ್ರಶ್ನೆಗೆ ಉತ್ತರಿಸುವ ಬದಲು ತನ್ನ ಮಾತು ಮುಂದುವರೆಸಿದ:

'ನಾನೂ ಈ ದಿನ ಮನೆಗೆ ಹಿಂದಿರುಗುತ್ತಿದ್ದೇನೆ .... '

ಆತನ ಧ್ವನಿಯಲ್ಲಿ ದುಃಖವಿತ್ತು:

'ಆದರೆ ನನ್ನದು ಬಹಳ ದೂರದ ಪಯಣ..... ಕಷ್ಟದ ಹಾದಿ ....'

ಇಲ್ಲಿ ಏನೋ ಅಸಹಜವಾದುದು ನಡೆಯುತ್ತಿದೆಯೆಂದು ನನಗೆ ಮನವರಿಕೆಯಾಯಿತು. ಹಸುಗೂಸನ್ನು ಅಪ್ಪಿಕೊಳ್ಳುವಂತೆ ಆತನನ್ನು ಎದೆಗವಚಿಕೊಂಡಿದ್ದೆ. ಆದರೆ ಆತ ನನ್ನ ಕೈಗಳಿಂದ ಅಗಾಧ ಕೂಪದೊಳಕ್ಕೆ ಜಾರಿಹೋಗುತ್ತಿರುವಂತೆ ಭಾಸವಾಗುತ್ತಿತ್ತು........ ಆತನನ್ನು ತಡೆಯಲು ನನ್ನಿಂದ ಸಾಧ್ಯವಾಗುತ್ತಲೇ ಇಲ್ಲವೆಂದೆನ್ನಿಸುತ್ತಿತ್ತು..........

ಆತನ ಮನದಲ್ಲಿ ಎಂಥದೋ ಶೂನ್ಯದೃಷ್ಟಿಯ ಗಂಭೀರತೆ ಇತ್ತು.

'ನನ್ನ ಬಳಿ ನಿನ್ನ ಕುರಿಯಿದೆ, ಕುರಿಯ ಪೆಟ್ಟಿಗೆ ಇದೆ ಹಾಗೂ ಕುರಿಯ ಬಾಯಿಕುಕ್ಕೆ ಇದೆ .... '

ಆತ ವಿಷಾದದ ನಗೆ ನಕ್ಕ.

ನಾನು ಬಹಳ ಹೊತ್ತು ಕಾದೆ. ಆತ ಸ್ವಲ್ಪಸ್ವಲ್ಪವೇ ಚೇತರಿಸಿಕೊಳ್ಳುತ್ತಿದ್ದಂತೆ ಭಾಸವಾಯಿತು.

'ನನ್ನ ಪ್ರೀತಿಯ ಪುಟ್ಟ ಮನುಷ್ಯನೆ, ನಿನ್ನ ಮುಖದಲ್ಲಿ ಅಂಜಿಕೆ ಕಾಣುತ್ತಿದೆ ....', ನಾನು ಹೇಳಿದೆ.

ಆತ ಹೆದರಿಕೊಂಡಿದ್ದ ಎನ್ನುವುದರಲ್ಲಿ ಸಂಶಯವಿರಲಿಲ್ಲ. ಆದರೂ ಆತ ಹಗುರ ನಗೆ ನಕ್ಕ.

'ಈ ಸಂಜೆ ಇನ್ನೂ ಹೆಚ್ಚಿಗೆ ಹೆದರಿಕೆಯಾಗುತ್ತಿದೆ...........'

ಮತ್ತೊಮ್ಮೆ ನನ್ನ ದೇಹ ಅಸಹಾಯಕತೆಯಿಂದ ಹೆಪ್ಪುಗಟ್ಟಿದಂತಾಯಿತು. ಆ ನಗು ಮತ್ತೊಮ್ಮೆ ಕೇಳಲಾಗುವುದಿಲ್ಲವೆಂಬುದನ್ನು ಊಹಿಸಿಕೊಳ್ಳಲೂ ಕಷ್ಟವಾಯಿತು. ಆತನ ನಗು ಮರುಭೂಮಿಯಲ್ಲಿನ ಸಿಹಿನೀರ ಬುಗ್ಗೆಯಂತಿತ್ತು.

'ಪುಟ್ಟ ಮನುಷ್ಯನೆ, ಮತ್ತೊಮ್ಮೆ ನಿನ್ನ ನಗು ಕೇಳಬೇಕೆಂದೆನ್ನಿಸುತ್ತಿದೆ', ನಾನು ಹೇಳಿದೆ. ಆದರೆ ಆತ ಹೇಳಿದ,

'ಈ ರಾತ್ರಿಗೆ ಒಂದು ವರ್ಷವಾಗುತ್ತದೆ .... ನನ್ನ ನಕ್ಷತ್ರ ನೇರವಾಗಿ ತಲೆಯ ಮೇಲಿರುತ್ತದೆ, ನಾನು ಬಂದ ದಿನ ಇದ್ದ ಹಾಗೆ .... '

'ಪುಟ್ಟ ಮನುಷ್ಯನೆ, ನಾನು ಹೇಳಿದೆ, 'ಎಲ್ಲ ಕೆಟ್ಟಕನಸೆಂದು ಮರೆತುಬಿಡು– ಆ ಹಾವಿನೊಂದಿಗಿನ ಮಾತುಕತೆ, ಭೇಟಿಯ ಸ್ಥಳ, ನಿನ್ನ ತಾರೆ........'

ನನ್ನ ಕೋರಿಕೆಯನ್ನು ಆತ ಉತ್ತರಿಸಲಿಲ್ಲ. ಬದಲಿಗೆ ಆತ ಹೇಳಿದ, 'ಮುಖ್ಯವಾದ ವಿಷಯವೇನೆಂದರೆ ಕಣ್ಣಿಗೆ ಕಾಣದಿರುವ ವಸ್ತು .... '

'ಹೌದು, ನನಗೆ ಗೊತ್ತಿದೆ .... '

'ಅದೇ ರೀತಿ ಹೂವಿಗೂ ಸಹ. ಯಾವುದೋ ನಕ್ಷತ್ರದ ಮೇಲಿರುವ ಹೂವನ್ನು ನೀನು ಪ್ರೀತಿಸುವುದಾದರೆ, ರಾತ್ರಿಯ ಹೊತ್ತು ಆಗಸವನ್ನು ನೋಡುವುದೇ ಒಂದು ಸುಂದರ ಅನುಭವ. ನಕ್ಷತ್ರಗಳೇ ಹೂವಿನ ಹಾಗೆ ಕಾಣುತ್ತಿರುತ್ತವೆ..........'

'ಹೌದು, ನನಗೆ ಗೊತ್ತಿದೆ..........'

'ಅದೇ ರೀತಿ ನೀರೂ ಸಹ. ರಾಟೆ ಮತ್ತು ಹಗ್ಗದ ಸಹಾಯದಿಂದ ನೀನು ಸೇದಿ ಕೊಟ್ಟ ನೀರು ಸಂಗೀತದ ಹಾಗಿತ್ತು. ನಿನಗೂ ನೆನಪಿರಬಹುದಲ್ಲ– ಎಷ್ಟು ಚೆನ್ನಾಗಿತ್ತು ಆ ಅನುಭವ.'

'ಹೌದು, ನನಗೆ ಗೊತ್ತಿದೆ .... '

'ರಾತ್ರಿ ಆಗಸದಲ್ಲಿನ ಮಿನುಗುವ ನಕ್ಷತ್ರಗಳನ್ನು ನೋಡು. ಅಲ್ಲಿ ನಾನಿರುವ

ಸ್ಥಳ ಎಷ್ಟು ಸಣ್ಣದೆಂದರೆ, ನನ್ನ ನಕ್ಷತ್ರ ಯಾವುದೆಂದು ಇಲ್ಲಿಂದ ತೋರಿಸಲು ಸಾಧ್ಯವಿಲ್ಲ. ಕಾಣದಿರುವುದೇ ಒಂದು ರೀತಿಯಲ್ಲಿ ಒಳ್ಳೆಯದು. ಆ ನಕ್ಷತ್ರಗಳ ಗುಂಪಿನಲ್ಲಿ ನನ್ನದೂ ಒಂದು ನಕ್ಷತ್ರವಾಗಿರುತ್ತದೆ ಅಷ್ಟೆ.. ಹಾಗಾಗಿ ನೀನು ಎಲ್ಲಾ ನಕ್ಷತ್ರಗಳನ್ನು ನೋಡಲು ಇಷ್ಟಪಡುತ್ತೀಯ .... ಅವೆಲ್ಲಾ ನಿನ್ನ ಗೆಳೆಯರಾಗುತ್ತವೆ. ಹಾ! ನಾನು ನಿನಗೆ ಉಡುಗೊರೆಯೊಂದನ್ನು ಕೊಡುತ್ತೇನೆ.......... '

ಆತ ಮತ್ತೆ ನಕ್ಕ.

'ಓಹ್! ಪುಟ್ಟ ರಾಜಕುಮಾರನೇ, ಮುದ್ದು ರಾಜಕುಮಾರನೇ! ಆ ನಿನ್ನ ನಗುವನ್ನು ಸದಾ ಕೇಳಬೇಕೆನ್ನಿಸುತ್ತಿರುತ್ತದೆ!'

'ಅದೇ ನಿನಗೆ ನನ್ನ ಉಡುಗೊರೆ. ಆ ನಗು ನಾವು ನೀರು ಕುಡಿದಾಗ ಹೇಗಿತ್ತೋ ಹಾಗೇ ಇರುತ್ತದೆ .... '

'ಅಂದರೆ, ನಿನ್ನ ಮಾತಿನ ಅರ್ಥ? '

'ಎಲ ಮನುಷ್ಯರಿಗೂ ನಕ್ಷತ್ರಗಳಿರುತ್ತವೆ', ಆತ ಉತ್ತರಿಸಿದ, 'ಆದರೆ ಒಂದೇ ವಿಧವಾಗಿರುವುದಿಲ್ಲ. ಪ್ರಯಾಣಿಕರಿಗೆ ನಕ್ಷತ್ರಗಳು ಮಾರ್ಗದರ್ಶಿಗಳು. ಕೆಲವರಿಗೆ ಅವು ರಾತ್ರಿಯಲ್ಲಿ ಮಿನುಗುವ ದೀಪಗಳಷ್ಟೆ.. ವಿದ್ವಾಂಸರಿಗೆ ಅವು ಬಿಡಿಸಬೇಕಾಗುವ ಸಮಸ್ಯೆಗಳು. ನನ್ನ ವ್ಯಾಪಾರಿ ಮಿತ್ರನಿಗೆ ಅವೇ ಸಿರಿಸಂಪತ್ತು. ಆದರೆ ಈ ಎಲ್ಲಾ ನಕ್ಷತ್ರಗಳೂ ಮೌನವಾಗಿವೆ. ಆದರೆ ನಿನ್ನಲ್ಲಿ ಮಾತ್ರ ಯಾರ ಬಳಿಯೂ ಇಲ್ಲದಂತಹ ನಕ್ಷತ್ರಗಳಿರುತ್ತವೆ............'

'ಅಂದರೆ ನಿನ್ನ ಮಾತಿನ ಅರ್ಥ? '

'ಅಸಂಖ್ಯಾತ ನಕ್ಷತ್ರಗಳ ಪೈಕಿ ಒಂದರಲ್ಲಿ ನಾನು ವಾಸಿಸುತ್ತಿರುತ್ತೇನೆ. ಆ ಒಂದು ತಾರೆಯಲ್ಲಿ ನಾನು ನಗುನಗುತ್ತಾ ಸಂತೋಷವಾಗಿರುತ್ತೇನೆ. ಹಾಗಾಗಿ ನೀನು ರಾತ್ರಿ ಆಗಸವನ್ನು ನೋಡಿದರೆ ಎಲ್ಲಾ ತಾರೆಗಳೂ ನಕ್ಕಂತೆ ಕಾಣುತ್ತವೆ ಅಲ್ಲವೆ? .... ನಿನ್ನಲ್ಲಿ ಮಾತ್ರ ನಗುವ ತಾರೆಗಳಿರುತ್ತವೆ!'

ಆತ ಮತ್ತೆ ನಕ್ಕ.

"ನಿನ್ನ ದುಃಖದ ಆತ್ಮಕ್ಕೆ ಸಾಂತ್ವನ ಸಿಕ್ಕಾಗ (ಕಾಲ ಎಲ್ಲ ದುಃಖವನ್ನು ಮರೆಸುತ್ತದೆ) ನಾನು ನಿನಗೆ ಪರಿಚಯವಿದ್ದೇನೆ ಎಂಬುದೇ ನಿನಗೆ ತೃಪ್ತಿ ಕೊಡುತ್ತದೆ. ನೀನು ಎಂದೆಂದಿಗೂ ನನ್ನ ಗೆಳೆಯನಾಗಿರುತ್ತೀಯ. ನನ್ನೊಟ್ಟಿಗೆ ನಗುನಗುತ್ತಾ ಇರಬೇಕೆಂದು ಬಯಸುತ್ತೀಯ. ಆಗಾಗ ಕಿಟಕಿ ತೆರೆದು ಆಗಸ ನೋಡಿ ನೀನು ನಗುವುದನ್ನು ನೋಡಿ ನಿನ್ನ ಗೆಳೆಯರಿಗೆಲ್ಲಾ ಅಚ್ಚರಿಯಾಗಬಹುದು! ಆಗ ನೀನು ಅವರಿಗೆ, 'ಹೌದು ನಕ್ಷತ್ರಗಳು ಸದಾ ನನ್ನನ್ನು ಹಸನ್ಮುಖಿಯಾಗಿರುವಂತೆ ಮಾಡುತ್ತವೆ' ಎಂದು ಹೇಳುತ್ತೀಯಾ. ನಿನಗೆ ತಲೆ ಕೆಟ್ಟಿದೆಯೆಂದು ಅವರೆಲ್ಲಾ ಭಾವಿಸುತ್ತಾರೆ. ಹೇಗಿದೆ ನನ್ನ ಕೀಟಲೆ?"

ಆತ ಮತ್ತೆ ನಕ್ಕ.

'ನಕ್ಷತ್ರಗಳ ಬದಲಿಗೆ ನಾನು ನಿನಗೆ ಕಿಲಕಿಲನಗಬಲ್ಲ ಲಕ್ಷಾಂತರ ಪುಟ್ಟಪುಟ್ಟ ಗಂಟೆಗಳನ್ನು ಕೊಟ್ಟಂತೆ .... '

ಆತ ಮತ್ತೆ ನಕ್ಕ. ನಂತರ ಇದ್ದಕ್ಕಿದ್ದಂತೆ ಗಂಭೀರವಾಗಿ, 'ಈ ರಾತ್ರಿ– ನಿನಗೆ ಗೊತ್ತಲ್ಲ .... ಇಲ್ಲಿಗೆ ಬರಬೇಡ' ಎಂದ.

'ಇಲ್ಲ ನಾನು ನಿನ್ನನ್ನು ಬಿಡುವುದಿಲ್ಲ', ನಾನು ಹೇಳಿದೆ.

'ನಾನು ಯಾತನೆಯಿಂದ ನರಳುತ್ತಿರುವಂತೆ ನಿನಗೆ ಕಾಣಬಹುದು. ನಾನು ಸಾಯುತ್ತಿರುವಂತೆ ಕಾಣಬಹುದು. ಅದು ಹಾಗೆಯೇ. ಅವೆಲ್ಲವನ್ನು ನೋಡಲು ನೀನು ಬರಬೇಡ............'

'ಇಲ್ಲ ನಾನು ನಿನ್ನನ್ನು ಬಿಡುವುದಿಲ್ಲ'.

ಆತ ಚಿಂತಿತನಾದಂತೆ ಕಂಡ. 'ನನಗೆ ಆ ಹಾವಿನ ಚಿಂತೆ ಇದ್ದರೂ

ಇರಬಹುದು. ನಿನ್ನನ್ನು ಅದು ಕಚ್ಚುವುದಿಲ್ಲ. ಆದರೂ ಹಾವುಗಳು – ಕೆಟ್ಟ ಪ್ರಾಣಿಗಳು, ತಮಾಷೆಗೆ ನಿನ್ನನ್ನು ಕಚ್ಚಿದರೂ ಕಚ್ಚಬಹುದೇನೋ...........'

'ನಾನು ನಿನ್ನನ್ನು ಬಿಡುವುದಿಲ್ಲ'.

ನನ್ನನ್ನು ಸಮಾಧಾನಪಡಿಸುವ ಆಲೋಚನೆಯೊಂದು ಆತನ ಮನದಲ್ಲಿ ಹಾದು ಹೋಯಿತು.

'ಎರಡನೆಯ ಸಾರಿ ಕಚ್ಚಲು ಅವುಗಳಲ್ಲಿ ವಿಷವಿರುವುದಿಲ್ಲ ಬಿಡು'.

ಆ ರಾತ್ರಿ ಆತ ಹೊರಟಿದ್ದನ್ನು ನಾನು ಗಮನಿಸಲಿಲ್ಲ. ಸ್ವಲ್ಪವೂ ಸದ್ದು ಮಾಡದೆ ಎದ್ದು ಹೋಗಿದ್ದ. ನಂತರ ನಾನು ಗಮನಿಸಿ ಎದ್ದು ಹಿಂಬಾಲಿಸಿ ಓಡಿದೆ. ಆತ ಗಟ್ಟಿ ಮನಸ್ಸಿನಿಂದ ವೇಗವಾಗಿ ಹೆಜ್ಜೆ ಹಾಕುತ್ತಿದ್ದ. ನನ್ನನ್ನು ನೋಡಿ,

'ಹೋ! ಬಂದೆಯಾ .... ' ಎಂದ.

ನನ್ನ ಕೈಯನ್ನು ಹಿಡಿದುಕೊಂಡ. ಆ ಪುಟ್ಟ ರಾಜಕುಮಾರ ಚಿಂತಾಕ್ರಾಂತನಾಗಿಯೇ ಇದ್ದ.

'ನೀನು ಬರಬಾರದಿತ್ತು. ಸುಮ್ಮನೆ ಏಕೆ ನೋವು ತಿನ್ನುತ್ತೀಯ? ನಿನಗೆ ನಾನು ಸತ್ತಂತೆ ಕಾಣಬಹುದು; ಆದರೆ ಅದು ನಿಜವಾಗಿರುವುದಿಲ್ಲ .... '

ನಾನೇನೂ ಹೇಳಲಿಲ್ಲ.

'ಅದು ಒಂದು ರೀತಿ ಉಪಯೋಗಿಸಿ ಎಸೆದ ಹಳೆಯ ವಸ್ತ್ರದಂತೆ; ಹಳೆಯ ವಸ್ತ್ರದ ಬಗ್ಗೆ ದುಃಖಿಸುವಂತಹುದು ಏನೂ ಇರುವುದಿಲ್ಲ'.

ನಾನೇನೂ ಹೇಳಲಿಲ್ಲ.

ಆತ ಕೊಂಚ ಎದೆಗುಂದಿದ್ದ. ಆದರೂ ಮತ್ತೊಮ್ಮೆ ಪ್ರಯತ್ನಿಸಿದ, 'ಅದು ಸುಂದರವಾಗಿರುತ್ತದೆ. ನಾನೂ ಸಹ ನಕ್ಷತ್ರಗಳೆಡೆಗೆ ನೋಡುತ್ತೇನೆ. ಎಲ್ಲ ನಕ್ಷತ್ರಗಳೂ ತುಕ್ಕುಹಿಡಿದ ರಾಟೆ ಹೊಂದಿರುವ ಬಾವಿಗಳಾಗಿರುತ್ತವೆ. ಎಲ್ಲ ನಕ್ಷತ್ರಗಳೂ ನನಗೆ ಕುಡಿಯಲು ಸಿಹಿ ನೀರು ಕೊಡುತ್ತವೆ ....'

ನಾನೇನೂ ಹೇಳಲಿಲ್ಲ.

'ಎಂಥ ತಮಾಷೆಯಲ್ಲ! ನಿನಗೆ ಐವತ್ತು ಕೋಟಿ ಕಿಣಿಕಿಣಿ ಸದ್ದು ಮಾಡುವ ಪುಟ್ಟ ಪುಟ್ಟ ಗಂಟೆಗಳು; ನನಗೆ ಐವತ್ತು ಕೋಟಿ ಸಿಹಿನೀರ ಬುಗ್ಗೆಗಳು..........'

ನಂತರ ಪುಟ್ಟ ರಾಜಕುಮಾರ ಏನೂ ಹೇಳಲಿಲ್ಲ, ಏಕೆಂದರೆ ಆತ ಅಳುತ್ತಿದ್ದ ....

'ನನ್ನನ್ನು ಹೋಗಲು ಬಿಡು'.

ಆತ ಅಲ್ಲೇ ಕೂತ, ಏಕೆಂದರೆ ಆತನಲ್ಲಿ ಇನ್ನೂ ಹೆದರಿಕೆ ಇತ್ತು. ನಂತರ ಹೇಳಿದ, 'ನಿನಗೆ ಗೊತ್ತಲ್ಲ– ನನ್ನ ಹೂ .... ಅವಳ ಜವಾಬ್ದಾರಿ ನನ್ನ ಮೇಲಿದೆ. ಅವಳೆಷ್ಟು ದುರ್ಬಲಳು! ಅಷ್ಟೇ ಮುಗ್ಧಳು! ಆಕೆಯಲ್ಲಿ ಕೆಲಸಕ್ಕೆ ಬಾರದ ನಾಲ್ಕೇ ನಾಲ್ಕು ಮುಳ್ಳುಗಳಿವೆ, ಅದರಿಂದಲೇ ಆಕೆ ಜಗತ್ತನ್ನು ಎದುರಿಸಬೇಕು.......'

ನಾನೂ ಸಹ ಅಲ್ಲೇ ಕೂತೆ. ಇನ್ನು ನನ್ನಿಂದ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲ.

'ಅಷ್ಟೆ, ಇನ್ನು ಹೇಳುವುದೇನೂ ಉಳಿದಿಲ್ಲ ....'

ಸಲ್ಪ ಮೌನವಾಗಿಯೇ ಇದ್ದ. ಏಳಲು ಹೋದವನು ಕೊಂಚ ತಡೆದ, ನಂತರ ಎದ್ದು ನಿಂತು ಒಂದು ಹೆಜ್ಜೆ ಮುಂದಿರಿಸಿದ. ನನಗೆ ಅಲುಗಾಡಲೇ ಆಗಲಿಲ್ಲ, ನನ್ನ ಕೈಕಾಲು ಕಟ್ಟಿಹಾಕಿದಂತಾಗಿತ್ತು.

ಆತನ ಕಾಲ ಬಳಿ ಹಳದಿ ಮಿಂಚೊಂದು ಕಾಣಿಸಿತು. ಒಂದರೆಕ್ಷಣ ಪುಟ್ಟ ರಾಜಕುಮಾರ ಸ್ತಬ್ಧನಾದ. ಮಾತೇ ಹೊರಬರಲಿಲ್ಲ. ಮರ ಸಾವಕಾಶವಾಗಿ ಉರುಳಿ ಬೀಳುವಂತೆ ನೆಲದ ಮೇಲೆ ಬಿದ್ದ. ಯಾವುದೇ ಶಬ್ದವಾಗಲಿಲ್ಲ, ಏಕೆಂದರೆ ಕೆಳಗೆ ಮೆತ್ತನೆಯಂಥ ಮರಳು ದಿಗಂತದವರೆಗೂ ಹಾಸಿತ್ತು.

27

ಆಗಲೇ ಆರು ವರ್ಷಗಳು ಕಳೆದುಹೋಗಿವೆ.......... ಈ ಕತೆ ನಾನು ಯಾರಿಗೂ ಹೇಳಿರಲಿಲ್ಲ. ನಾನು ವಾಪಸ್ಸು ಬಂದ ನಂತರ ನನ್ನ ಗೆಳೆಯರೆಲ್ಲ ನಾನು ಬದುಕಿ ಬಂದೆನೆಂದು ಸಂತೋಷಗೊಂಡಿದ್ದರು. ನನ್ನಲ್ಲಿನ ದುಃಖ ಮರೆಯುವಂತದ್ದಾಗಿರಲಿಲ್ಲ, ಅವರಿಗೆ 'ಬಹಳ ಆಯಾಸಗೊಂಡಿದ್ದೇನೆ' ಎಂದಷ್ಟೇ ಹೇಳಿದ್ದೆ.

ಈಗ ನನ್ನ ದುಃಖ ಸ್ವಲ್ಪ ಕಡಿಮೆಯಾಗಿದೆ. ಅಂದರೆ ಸ್ವಲ್ಪ ಮಾತ್ರ, ಸಂಪೂರ್ಣವಾಗಿ ಅಲ್ಲ. ಆತ ತನ್ನ ಗ್ರಹಕ್ಕೆ ಹಿಂದಿರುಗಿದ್ದಾನೆಂದು ನನಗೆ ಗೊತ್ತು ಏಕೆಂದರೆ ನಸುಕಿನಲ್ಲಿ ಆತನ ದೇಹ ಅಲ್ಲಿರಲಿಲ್ಲ. ಅದೇನೂ ಅಷ್ಟು ತೂಕದ ದೇಹವಾಗಿರಲಿಲ್ಲ .... ರಾತ್ರಿ ನಕ್ಷತ್ರಗಳ ಸದ್ದು ಕೇಳುತ್ತೇನೆ, ಐವತ್ತು ಕೋಟಿ ಪುಟಾಣಿ ಗಂಟೆಗಳ ಕಿಣಿಕಿಣಿ ಸದ್ದು ....

ನಾನು ಹೇಳಲು ಮರೆತಿದ್ದ ಒಂದು ವಿಷಯವಿದೆ .... ಪುಟ್ಟ ರಾಜಕುಮಾರನ ಕುರಿಗೆ ಬಾಯಿಕುಕ್ಕೆ ಬರೆದುಕೊಟ್ಟಾಗ ಅದನ್ನು ಕಟ್ಟಲು ಬಳಸುವಂತಹ ಚರ್ಮದ ಪಟ್ಟಿಯನ್ನು ನಾನು ಬರೆದಿರಲಿಲ್ಲ, ಅದನ್ನು ಬರೆಯಲು ಮರೆತಿದ್ದೆ. ಆತ ಅದನ್ನು ತನ್ನ ಕುರಿಗೆ ಕಟ್ಟಲು ಎಂದಿಗೂ ಸಾಧ್ಯವಾಗುವುದಿಲ್ಲ. ಹಾಗಾಗಿ, ಆಗಾಗ ಯೋಚಿಸುತ್ತಿರುತ್ತೇನೆ: ಆತನ ಗ್ರಹದಲ್ಲಿ ಏನಾಗಿರಬಹುದು? ಕುರಿ ಹೂವನ್ನು ತಿಂದು ಹಾಕಿರಬಹುದೆ..........

ಆದರೆ, ನನ್ನನ್ನು ನಾನೇ ಸಂತೈಸಿಕೊಳ್ಳುತ್ತೇನೆ: 'ಖಂಡಿತಾ ಇಲ್ಲ! ಪುಟ್ಟ ರಾಜಕುಮಾರ ಹೂವನ್ನು ಪ್ರತಿ ರಾತ್ರಿ ಗಾಜಿನ ಬೋಗುಣಿಯಿಂದ ಮುಚ್ಚುತ್ತಾನೆ ಹಾಗೂ ತನ್ನ ಕುರಿಯನ್ನು ಎಚ್ಚರದಿಂದ ಕಾಯುತ್ತಾನೆ..........' ಹಾಗೇ ನನ್ನನ್ನು ನಾನೇ ಸಮಾಧಾನ ಮಾಡಿಕೊಳ್ಳುವುದು ನನಗೆ ತೃಪ್ತಿ ಕೊಡುತ್ತದೆ. ಎಲ್ಲ ನಕ್ಷತ್ರಗಳ ನಗುವಿನಲ್ಲಿ ಎಂಥ ಮಧುರತೆ ಇದೆ!

ಆದರೂ ಕೆಲವೊಮ್ಮೆ ನನ್ನನ್ನು ಆತಂಕ ಆವರಿಸುತ್ತದೆ. 'ಎಲ್ಲರಿಗೂ ಮರೆವು ಸಹಜ. ಯಾವುದಾದರೂ ಸಂಜೆ ಆತ ಹೂವಿನ ಮೇಲೆ ಗಾಜಿನ ಬೋಗುಣಿಯನ್ನು ಮುಚ್ಚಲು ಮರೆತಿದ್ದರೆ..........? ಕುರಿ ಸದ್ದಿಲ್ಲದೆ ರಾತ್ರಿ ತನ್ನ ಪೆಟ್ಟಿಗೆಯಿಂದ ಹೊರಬಂದಿದ್ದರೆ..........? ಆಗ ನಕ್ಷತ್ರಗಳ ಕಿಣಿಕಿಣಿ ಸದ್ದು ಕಣ್ಣೀರಾಗುತ್ತದೆ.

ಇಲ್ಲೇ ಒಂದು ಅದ್ಭುತ ರಹಸ್ಯವಿರುವುದು. ಪುಟ್ಟ ರಾಜಕುಮಾರನನ್ನು ಪ್ರೀತಿಸುವ ನಿಮಗೂ ಹಾಗೂ ನನಗೂ, ಎಲ್ಲೋ, ನಾವು ಅರಿಯದ ಸ್ಥಳದಲ್ಲಿ, ನಾವು ನೋಡೇ ಇರದ ಕುರಿಯೊಂದು ಗುಲಾಬಿಯನ್ನು ತಿಂದುಬಿಟ್ಟ ಬಳಿಕ........... ಈ ವಿಶ್ವದಲ್ಲಿ ಎಲ್ಲವೂ ಮೊದಲಿನಂತಿರುವುದಿಲ್ಲ.

ಆಗಸವನ್ನು ನೋಡಿ ನಿಮ್ಮನ್ನು ನೀವೇ ಕೇಳಿಕೊಳ್ಳಿ: ಹೌದೇ ಅಥವಾ ಇಲ್ಲವೆ? ಕುರಿ ಹೂವನ್ನು ತಿಂದು ಹಾಕಿದೆಯೆ? ನೀವು ನೋಡುನೋಡುತ್ತಿರುವಂತೆ ಕಣ್ಣೆದುರಿನಲ್ಲಿಯೇ ಎಲ್ಲವೂ ಬದಲಾಗುತ್ತಾ ಹೋಗುತ್ತದೆ ....

ಆದರೆ ಇದು ಎಷ್ಟು ಮುಖ್ಯವಾದ ವಿಷಯವೆಂದು ದೊಡ್ಡವರ್‍ಯಾರಿಗೂ ಎಂದಿಗೂ ಅರ್ಥವಾಗುವುದಿಲ್ಲ!

ನನ್ನ ದೃಷ್ಟಿಯಲ್ಲಿ ಪ್ರಪಂಚದಲ್ಲಿಯೇ ಅತ್ಯಂತ ಸುಂದರ ಹಾಗೂ ದುಃಖದ ಭೂ ದೃಶ್ಯವಿದು. ಇದು ಪುಟ 85ರಲ್ಲಿ ಇರುವಂತೆಯೇ ಇದೆ. ಆದರೆ ನಿಮ್ಮ ನೆನಪಿನಲ್ಲಿ ಇದು ಗಾಢವಾಗಿರಲೆಂದು ಮತ್ತೊಮ್ಮೆ ಬರೆದಿದ್ದೇನೆ.

ಇದೇ ಸ್ಥಳದಲ್ಲಿಯೇ ಪುಟ್ಟ ರಾಜಕುಮಾರ ಕಾಣಿಸಿಕೊಂಡದ್ದು ಹಾಗೂ ಮರೆಯಾದದ್ದು.

ಈ ಚಿತ್ರವನ್ನು ಎಚ್ಚರಿಕೆಯಿಂದ ಗಮನಿಸಿ. ಏಕೆಂದರೆ ನೀವು ಎಂದಾದರೂ ಆಫ್ರಿಕಾದ ಮರುಭೂಮಿಗೆ ಹೋದಲ್ಲಿ ಆ ಸ್ಥಳ ಗುರುತಿಸಲು ಸಾಧ್ಯವಾಗುತ್ತದೆ. ಅಕಸ್ಮಾತ್ ಆ ಸ್ಥಳ ಸಿಕ್ಕಲ್ಲಿ ದಯವಿಟ್ಟು ಅಲ್ಲಿಂದ ಬೇಗನೆ ಹೋಗಿಬಿಡಬೇಡಿ. ಅಲ್ಲೇ ನಕ್ಷತ್ರಗಳ ಕೆಳಗೆ ಸ್ವಲ್ಪ ಹೊತ್ತು ಕಾಯಿರಿ. ಆಗ ಹೊಂಬಣ್ಣದ ಕೂದಲಿನ, ನಗುಮುಖದ ಹಾಗೂ ಎಂದೂ ಪ್ರಶ್ನೆಗಳಿಗೆ ಉತ್ತರಿಸದ ಪುಟ್ಟ ಮನುಷ್ಯನೇನಾದರೂ ಅಲ್ಲಿ ಕಾಣಿಸಿಕೊಂಡರೆ ಆತ ಯಾರೆಂದು ನಿಮಗರಿವಾಗಬಹುದು. ಅಕಸ್ಮಾತ್ ಆತ ಕಾಣಿಸಿಕೊಂಡಲ್ಲಿ, ಆತ ವಾಪಸ್ಸು ಬಂದಿದ್ದಾನೆಂಬ ಸಂದೇಶವನ್ನು ನನಗೆ ಕಳುಹಿಸಿ, ದಯವಿಟ್ಟು ನನ್ನನ್ನು ಸಂತೈಸಿ.